ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ   Postal Reg. No. BDR/054/2026-2027 Email: mallammanudi@gmail.com  E-paper: www.mallammanudi.in

# ಮಲ್ಲಮ್ಮ ನುಡಿ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-13 ಸಂಪುಟ:13 | ISSUE- 80 ಸಂಚಿಕೆ: 80 | PAGE- 8 ಪುಟ 8 | ಶನಿವಾರ- 03-05-2025, | RS.2/- ಬೆಲೆ 2/-

## ಬಸವ ಜಯಂತಿ ಅದ್ದೂರಿ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಬಸವ ಜಯಂತಿ ನಿಮಿತ್ತ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿಶ್ವ ಗುರು ಬಸವಣ್ಣನವರ ಮೆರವಣಿಗೆ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.

ಐತಿಹಾಸಿಕ ವೀರಭದ್ರೇಶ್ವರ ರಥ ಮೈದಾನದಿಂದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಸರ್ದಾರ್ ವಲ್ಲಭಭಾಯ್ ಪಟೇಲ್ ವೃತ್ತ, ಬಾಲಾಜಿ ಮಂದಿರದ ಮಾರ್ಗವಾಗಿ ಬಸವೇಶ್ವರ ವೃತ್ತದ ವರೆಗೆ ಭವ್ಯ ಮೆರವಣಿಗೆ ಜರುಗಿತು.

ಮೆವಣಿಗೆ ದಾರಿಯುದ್ದಕ್ಕೂ ಬಸವಣ್ಣನ ಹಾಡುಗಳು, ಬ್ರಾಸ್ ಬ್ಯಾಂಡಗೆ ಯುವಕರು ಹೆಜ್ಜೆ ಹಾಕಿ ಸಂಭ್ರಮಿಸಿದರು. ದಾ-ರಿಯುದ್ದಕ್ಕೂ ನಡೆದ ಡೊಳ್ಳು ಕುಣಿತ ಹಾಗೂ ವಿವಿಧ ಸಾಂಸ್ಕೃತಿಕಗಳು ನೋಡುಗರರ ಗಮನ ಸೆಳೆದವು.

ಈ ವೇಳೆ ಶಾಸಕ ಡಾ. ಸಿದ್ದು ಪಾಟೀಲ್, ಮಾಜಿ ಸಚಿವ ರಾಜಶೇಖರ ಪಾಟೀಲ್, ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್, ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಬಿಎಸ್ಎಸ್‌ಕೆ ಅಧ್ಯಕ್ಷ ಸುಭಾಷ ಕಲ್ಲೂರ್, ಜಿಪಂ. ಮಾಜಿ ಸದಸ್ಯ ವೀರಣ್ಣ ಪಾಟೀಲ್, ಪುರಸಭೆ ಅಧ್ಯಕ್ಷೆ ಪಾರ್ವತಿ ಶೇರಿಕಾರ, ಪುರಸಭೆ ಸದಸ್ಯರಾದ ರಮೇಶ ಕಲ್ಲೂರ್, ಸುನಿಲ ಪಾಟೀಲ್, ಸುರೇಶ ಸೀಗಿ, ಮಲ್ಲಿಕಾರ್ಜುನ್ ಸೀಗಿ, ಗಿರೀಶ ತುಂಬಾ, ಅಶೋಕಕುಮಾರ ಚಳಕಾಪೂರೆ, ವಿನಾಯಕ ಮಣಕೋಜಿ, ನಾಗಭೂಣ ಸಂಗಮ್ ಸೇರಿ ಅಪಾರ ಬಸವಾಭಿಮಾನಿಗಳು ಇದ್ದರು.



ಬಸವಕಲ್ಯಾಣ :- ತಾಲೂಕಿನ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠಕ್ಕೆ ದಯಪಾಲಿಸಿದ ಶ್ರೀಮದ್ ಕಾಶಿ ಜಗದ್ಗುರುಗಳಿಗೆ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಸತ್ಕರಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ, ಶ್ರೀಮತಿ ಹೇಮಲತಾ ಮಲ್ಲಿನಾಥ ಹಿರೇಮಠ ಹಾರಕೂಡ, ಮುಂತಾದವರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

## ಶಿರೂರಿನಲ್ಲಿ ಸರ್ವಧರ್ಮ ಸಾಮೂಹಿಕ ವಿವಾಹ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆ ಕುಕನೂರ ತಾಲೂಕು ಶಿರೂರು ಗ್ರಾಮದ ಶ್ರೀ ದುರ್ಗಾದೇವಿ ಹಾಗೂ ಮಲಿಯಮ್ಮ ದೇವಿ ಜಾತ್ರಾ ಮಹೋತ್ಸವ ಡಾ. ಬಿ ಆರ್ ಅಂಬೇಡ್ಕರ್ ಅವರ 134 ನೇ ಜಯಂತೋತ್ಸವ ಹಾಗೂ ಡಾ. ಬಾಬು ಜಗಜೀವನ್ ರಾಮರವರ 118ನೇ ಜಯಂತೋತ್ಸವ ಹಾಗೂ 26ನೇ ವರ್ಷದ ಸರ್ವಧರ್ಮ ಸಾಮೂಹಿಕ ವಿವಾಹಗಳನ್ನು

16.5. 2025 ಶುಕ್ರವಾರ ದಂದು ಜರುಗುವ 26ನೇ ವರ್ಷದ ಸರ್ವಧರ್ಮ ಜೋಡಿಗಳ ಸಾಮೂಹಿಕ ವಿವಾಹಗಳ ಕಾರ್ಯಕ್ರಮಕ್ಕೆ ತನು ಮನ ಧನದಿಂದ ಸೇವೆ ಸಲ್ಲಿಸಿ ಶ್ರೀ ದುರ್ಗಾದೇವಿ ಹಾಗೂ ಮಲೆಯಮ್ಮ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಶಿವಶರಣ ಗದಿಗೆಪ್ಪಜ್ಜನವರು ಮರುಳಸಿದ್ದೇಶ್ವರ ಪುಣ್ಯಶ್ರಮ ಇಟಗಿ ಕುಕನೂರಿನ ಪ್ರವಾಸಿ ಮಂದಿರದಲ್ಲಿ ನೆಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಬಸವ ಮೂರ್ತಿ ಮಾದರ ಚನ್ನಯ್ಯ ಸ್ವಾಮಿಗಳು ಶಿವಶರಣ ಶ್ರೀ ಮಾದರ ಚನ್ನಯ್ಯ ಗುರುಪೀಠ ಚಿತ್ರದುರ್ಗ ಜಿಲ್ಲೆ, ಶ್ರೀ ಪೂರ್ಣಾನಂದ ಭಾರತಿ ಸ್ವಾಮೀಜಿ ಶ್ರೀ ಮಾತಂಗ ಮನಿ ಆಶ್ರಮ ಹಂಪಿ ಜಿಲ್ಲಾ ಹೊಸಪೇಟೆ, ಹಾಗೂ ಇನ್ನೂ ಅನೇಕ ಸ್ವಾಮೀಜಿಗಳು ಈ ಒಂದು ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಈಶಪ್ಪ ಶಿರೂರ ತಾಲೂಕ್ ಪಂಚಾಯತ್ ಉಪಾಧ್ಯಕ್ಷರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಬಸವರಾಜ ಪೂಜಾರ, ಶರಣಪ್ಪ ಕಡೆಮನಿ, ದುರಗಪ್ಪ ಪೂಜಾರ, ಈರಪ್ಪ ನಡುಲಮನಿ, ಈರಪ್ಪ ಹೊಸಮನಿ , ಲಕ್ಷ್ಮಪ್ಪ ಹೊಸಮನಿ, ಶರಣಪ್ಪ ಅಲಗಿ, ಹಾಗೂ ಇತರರು ಇದ್ದರು.

# ಎಸ್ ಎಸ್ ಎಲ್ ಸಿ ಫಲಿತಾಂಶ
# ಶೇ.66.14 : ಬಾಲಕಿಯರೇ ಮೇಲುಗೈ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಮೇ.2:2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ಫಲಿತಾಂಶ ಪ್ರಕಟವಾಗಿದೆ. ಒಟ್ಟಾರೆ ಶೇ.66.14 ಫಲಿತಾಂಶ ಬಂದಿದೆ. ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ.

ಒಟ್ಟು 5,24,984 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅವರ ಪೈಕಿ ಬಾಲಕರು 226637 (58.07%), ಬಾಲಕಿಯರು 296438 (74%) ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ. 22 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದುಕೊಂಡಿದ್ದಾರೆ.

2,24,900 ಮಂದಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು (67.05%) ಹಾಗೂ 2,98,175 ಮಂದಿ ನಗರ ಭಾಗದ ವಿದ್ಯಾರ್ಥಿಗಳು (65.47%) ತೇರ್ಗಡೆಯಾಗಿದ್ದಾರೆ. ಆ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ.

ಸರ್ಕಾರಿ-329, ಅನುದಾನ-53, ಖಾಸಗಿಯ 539 ಶಾಲೆಗಳು ಶೇ.100 ಫಲಿತಾಂಶ ಪಡೆದುಕೊಂಡಿವೆ. ಸರ್ಕಾರಿ- 6, ಅನುದಾನ-30,



ಖಾಸಗಿಯ 108 ಶಾಲೆಗಳು ಶೂನ್ಯ ಸಂಪಾದನೆ ಮಾಡಿವೆ.

ಪ್ರಥಮ ಭಾಷೆ- 9573, ದ್ವಿತಿಯ ಭಾಷೆ- 7057, ತೃತೀಯ ಭಾಷೆ- 17909, ಗಣಿತ- 3262, ವಿಜ್ಞಾನ-2451, ಸಮಾಜ ವಿಜ್ಞಾನ-7974 ವಿದ್ಯಾರ್ಥಿಗಳು ಔಟ್ ಆಫ್ ಔಟ್ ಅಂಕವನ್ನು ಪಡೆದು-ಕೊಂಡಿದ್ದಾರೆ.

**ದಕ್ಷಿಣ ಕನ್ನಡ ಫಸ್ಟ್, ಕಲಬುರಗಿ ಲಾಸ್ಟ್:**

ಬೆಂಗಳೂರು: 2024-25ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯು ಪ್ರಥಮ ಸ್ಥಾನ ಪಡೆದುಕೊಂಡಿದೆ. ಉಡುಪಿ ದ್ವಿತೀಯ ಸ್ಥಾನ ಹಾಗೂ ಕಲಬುರಗಿ ಜಿಲ್ಲೆಯು ಕೊನೆ ಸ್ಥಾನ ಪಡೆದುಕೊಂಡಿದೆ.

22 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದುಕೊಳ್ಳುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇನ್ನು 91.12% ಪಡೆದುಕೊಳ್ಳುವ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯು ಪ್ರಥಮ ಸ್ಥಾನ ಪಡೆದುಕೊಂಡಿದ್ದು, ಉಡುಪಿ ಜಿಲ್ಲೆಯು 89.96% ಪಡೆದುಕೊಂಡು ದ್ವಿತೀಯ ಸ್ಥಾನದಲ್ಲಿದೆ.

(2ನೇ ಪುಟ ನೋಡಿ...)

## ಬೀದರ : ದರೋಡೆ ನಡೆದು ವಾರದೊಳಗೆ ಪ್ರಕರಣ ಭೇದಿಸಿದ ಪೊಲೀಸರು; ಮೂವರ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 02 : ನಗರದ ಓಲ್ಡ್ ಆದರ್ಶ ಕಾಲೋನಿಯಲ್ಲಿ ಮನೆಯವರನ್ನು ಮಾರಕಾಸ್ತ್ರಗಳಿಂದ ಬೆದರಿಸಿ ಸುಮಾರು 15.55 ಲಕ್ಷ ರೂ. ಮೌಲ್ಯದ ನಗ-ನಾಣ್ಯ ದೋಚಿದ್ದ ಪ್ರಕರಣವನ್ನು ಶುಕ್ರವಾರ (ಮೇ 02) ಬೇಧಿಸಿರುವ ಜಿಲ್ಲಾ ಪೊಲೀಸರು ಮೂವರು ಡಕಾಯಿತರನ್ನು ಬಂಧಿಸಿದ್ದಾರೆ. ಈ ವೇಳೆ ಮುಖ್ಯ ಪೇದೆಗೆ ಚಾಕುವಿನಿಂದ ಇರಿತವಾಗಿದ್ದರೆ ಆರೋಪಿಯೊಬ್ಬನ ಕಾಲಿಗೆ ಗುಂಡೇಟು ತಗುಲಿದೆ.

ಕಳೆದ ಏ.26ರಂದು ನಸುಕಿನ ಜಾವ ಮನೆಯ ಬಾಗಿಲು ಮುರಿದು, ಒಳಗೆ ಪ್ರವೇಶಿಸಿದ್ದ ಐವರು ಮುಸುಕುಧಾರಿಗಳು ಮನೆಯವರನ್ನು ಮಾರಕಾಸ್ತ್ರಗಳಿಂದ ಬೆದರಿಸಿ ಸುಲಿಗೆ ಮಾಡಿದ್ದರು. ಈ ಪ್ರಕರಣ ನಗರದ ಜನರನ್ನು ಬೆಚ್ಚಿ ಬೀಳಿಸುವಂತೆ ಮಾಡಿತ್ತು. ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ್ದ ಜಿಲ್ಲಾ ಪೊಲೀಸರು ಘಟನೆ ನಡೆದ ಒಂದು ವಾರದಲ್ಲಿ ಆರೋಪಿಗಳನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಡಕಾಯಿತರು ಮಹಾರಾಷ್ಟ್ರದವರು: ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಪರಳಿಯ ಕರ್ತಾರ್ ಸಿಂಗ್, ಆತನ ಸಹಹೋದರನಾದ ಬೀದರ ನಿವಾಸಿ ಜಗಜೀತ್ ಸಿಂಗ್ ಹಾಗೂ ಪುಣೆಯ ಅಕ್ಷಯ ಬಂಧಿತ ಆರೋಪಿಗಳಾಗಿದ್ದಾರೆ. ಕಳವು ಮಾಡಿದ ಚಿನ್ನವನ್ನು ಮಾರಾಟಕ್ಕೆ ಸಹಕಾರ ನೀಡಿದ್ದ ವ್ಯಕ್ತಿಯನ್ನು ಸಹ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕಾರ್ಯಾಚರಣೆ ವೇಳೆ ಪೊಲೀಸರ ಗುಂಡೇಟಿನಿಂದ ಕರ್ತಾರಸಿಂಗ್ ಬಲಗಾಲಿಗೆ ಗುಂಡು ತಗುಲಿದ್ದರೆ, ಡಕಾಯಿತನಿಂದ ಚಾಕು ಇರಿತಕ್ಕೆ ಮುಖ್ಯ ಪೇದೆ ಮಕ್ಸೂದ್ ಅವರ ಭುಜಕ್ಕೆ ಗಂಭೀರ ಗಾಯವಾಗಿದ್ದು, ಇಬ್ಬರನ್ನು ಬ್ರಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಘಟನೆ ಹಿನ್ನೆಲೆ: ನಗರದ ಓಲ್ಡ್ ಆದರ್ಶ ಕಾಲೋನಿಯಲ್ಲಿ ಕಳೆದ ಶನಿವಾರ ನಸುಕಿನ ಜಾವ ಡಿಸಿ ಕಚೇರಿಯಲ್ಲಿ ಸೂಪರಿಟೆಂಡೆಂಟ್ ಆಗಿರುವ ಜ್ಯೋತಿಲತಾ ಸಂತೋಷ ಕುಮಾರ ಅವರ ಮನೆಗೆ ನುಗ್ಗಿದ್ದ ಮುಸುಕುಧಾರಿಗಳು ಈ ದುಷ್ಕೃತ್ಯ ನಡೆಸಿದ್ದರು. ಜ್ಯೋತಿಲತಾ, ಅವರ ತಾಯಿ ಮತ್ತು ಮಗನಿಗೆ ಚಾ-ಕು ಮತ್ತು (2ನೇ ಪುಟ ನೋಡಿ...)

## ಯತ್ನಾಳ್ ರಾಜೀನಾಮೆ ನೀಡದ್ದಕ್ಕೆ ಶಿವಾನಂದ ಪಾಟೀಲ್ ರಾಜೀನಾಮೆ ಅಂಗೀಕಾರವಿಲ್ಲ: ಯುಟಿ ಖಾದರ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಮೇ.2:ಬಸನಗೌಡ ಪಾಟೀಲ್ ಯತ್ನಾಳ್ ಅವರು ರಾಜೀನಾಮೆ ಸಲ್ಲಿಸದ ಕಾರಣ ಶಿವಾನಂದ ಪಾಟೀಲ್ ಅವರ ರಾಜೀನಾಮೆ ಅಂಗೀಕಾರವಾಗಿಲ್ಲ.

ಇಂದು ಸಂಜೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸ್ಪೀಕರ್ ಖಾದರ್, ಯತ್ನಾಳ್ ಅವರು ಇನ್ನೂ ರಾಜೀನಾಮೆ ಸಲ್ಲಿಸಿಲ್ಲ. ಹೀಗಾಗಿ ಶಿವಾನಂದ ಪಾಟೀಲ್ ಅವರ ರಾಜೀನಾಮೆ ಪತ್ರವನ್ನು ಅಂಗೀಕರಿಸಿಲ್ಲ ಎಂದು ಹೇಳಿದರು.

ಈ ಸಂಬಂಧ ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ಅಧಿಕೃತ ಪ್ರಕಟಣೆ



ಹೊರಡಿಸಿ ಅದನ್ನು ಸ್ಪೀಕರ್ ಓದಿ ಹೇಳಿದರು.

ಪಹಲ್ಗಾಮ್ ಉಗ್ರರ ದಾಳಿಯ ನಂತರ ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದರು. ಈ ವೇಳೆ ಸಚಿವ ಶಿವಾನಂದ ಪಾಟೀಲ್ ಹಾಗೂ ಹುನಗುಂದ ಕ್ಷೆ?ತ್ರದ ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ್ ಅವರಿಗೆ ಯತ್ನಾಳ್, ಇಬ್ಬರು ರಾಜೀನಾಮೆ ನೀಡಿ ನನ್ನ ವಿರುದ್ಧ ಚುನಾವಣೆಗೆ ನಿಲ್ಲಲಿ, ಯಾರು ಗೆಲ್ಲುತ್ತಾರೋ ನೋಡೋಣ ಎಂದು ಸವಾಲು ಹಾಕಿದ್ದರು.

ಶಿವಾನಂದ ಪಾಟೀಲ್ ರಾಜೀನಾಮೆ:

ಯತ್ನಾಳ್ ಸವಾಲನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡ ಕೃಷಿ ಮಾರುಕಟ್ಟೆ ಶಿವಾನಂದ ಪಾಟೀಲ್ ಇಂದು ಬೆಳಗ್ಗೆ ಯುಟಿ ಖಾದರ್ ಅವರಿಗೆ ರಾಜೀನಾಮೆ ಪತ್ರ ನೀಡಿದ್ದರು.

## ಸನಾತನ ಹಿಂದೂ ಸಂಸ್ಕೃತಿಗೆ ಶ್ರೀ ಶಂಕರಾಚಾರ್ಯರ ಕೊಡುಗೆ ಅಪಾರ: ದತ್ತಾತ್ರೇಯ ಜೋಷಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರುಮೇ02(ಕರ್ನಾಟಕ ವಾರ್ತೆ): ಮಹತ್ವದ ಸನಾತನ ಹಿಂದೂ ಧರ್ಮ, ಹಿಂದೂ ಸಂಸ್ಕೃತಿಯನ್ನು ಉಳಿಸುವಲ್ಲಿ ಶ್ರೀ ಶಂಕರಾಚಾರ್ಯರ ಕೊಡುಗೆ-ಯು ಅಪಾರವಾಗಿದೆ ಎಂದು ದತ್ತಾತ್ರೇಯ ಪಂ.ಜೋಷಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರಿಂದ ಮೇ 2ರಂದು ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಶಂಕರಾಚಾರ್ಯರು ಬಾಲ್ಯದಿಂದಲೇ ಅದ್ಯಾತ್ತದತ್ತ ಒಲವು ಹರಿಸಿದರು. ಶ್ರೀ ಶಂಕರಾಚಾರ್ಯರ ಜಾತಕದ ಬಗ್ಗೆ ಪಂಡಿತರು ವಿಶೇಷ ಇದೆ ಎಂದು ತಿಳಿಸುತ್ತಿದ್ದರು. ಅಪಾರ ವಿದ್ಯೆಯನ್ನು ಹೊಂದುತ್ತಾರೆ. ವೇದಶಾಸ್ತ್ರಗಳಲ್ಲಿ ಸಂಪೂರ್ಣ ಪಾಂಡಿತ್ಯ ಪಡೆಯುತ್ತಾರೆ ಎಂದು ಪಂಡಿತರು ಹೇಳುತ್ತಿದ್ದರು. ಶ್ರೀ ಶಂಕರಾಚಾರ್ಯರು ಅಂದರಂತೆ ಸಾಧನೆ ಮಾಡಿದರು ಎಂದು ತಿಳಿಸಿದರು.

ಮನಸ್ಸೇ ಮನುಷ್ಯನ ಸಾಧನೆ-ಸಂಕಟಗಳಿಗೆ ಕಾರಣ ಎಂದು ಹೇಳುತ್ತಿದ್ದ ಶಂಕರಾಚಾರ್ಯರು ಗಂಗಾ ನದಿ ತೀರದಲ್ಲಿ

(2ನೇ ಪುಟ ನೋಡಿ...)

## ಅನೈತಿಕ ಸಂಬಂಧ:ಪತ್ನಿ, ಪ್ರಿಯಕರನನ್ನ ಕೊಂದ ಪತಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.2:ಅನೈತಿಕ ಸಂಬಂಧ ಹಿನ್ನೆಲೆಯಲ್ಲಿ ಪತ್ನಿ ಮತ್ತು ಆಕೆಯ ಪ್ರಿಯಕರನನ್ನು ಪತಿ ಕೊಡಲಿಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ಆಳಂದ ತಾಲ್ಲೂಕಿನ ಮಾದನಹಿಪ್ಪರ್ಗ ಗ್ರಾಮದಲ್ಲಿ ನಡೆದಿದೆ.

ಸೃಷ್ಟಿ (24), ಖಾಜಪ್ಪ (26) ಕೊಲೆಯಾದವರು.

ಕಳೆದ 3 ವರ್ಷದ ಹಿಂದೆ ಮಾದನ ಹಿಪ್ಪರಗಿಯ ಶ್ರೀಮಂತ ಜೊತೆ ಸೃಷ್ಟಿ ಮದುವೆಯಾಗಿತ್ತು. ನಿನ್ನೆ ರಾತ್ರಿ ಸೃಷ್ಟಿ ಪ್ರಿಯಕರ ಖಾಜಪ್ಪ ಜೊತೆ ಮನೆಯಲ್ಲಿ ಇದ್ದುದ್ದನ್ನು ನೋಡಿ ಪತಿ ಶ್ರೀಮಂತ (28) ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿ ನಂತರ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದಾನೆ.

ಖಾಜಪ್ಪ ಆಳಂದ ಡಿಗ್ರಿ ಕಾಲೇಜಿನಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತ ಇದ್ದ ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಪೊಲೀಸ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಾದನ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಚಿವರ ಮೇಲಿನ ಆರೋಪ ಸತ್ಯಕ್ಕೆ ದೂರ: ವಿನೋದ ಅಪ್ಪೆ

ಮಲ್ಲಮ್ಮ ನುಡಿ ವಾರ್ತೆ

ಬೀದರ.ಮೇ.02:-ಪತ್ರಕರ್ತನ ಮೇಲಿನ ಹಲ್ಲೆಯನ್ನು ಖಂಡನೆ ಮಾಡುತ್ತೇವೆ. ಉಸ್ತುವಾರಿ ಸಚಿವರು ಈಗಾಗಲೇ ಅರಣ್ಯ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿದ್ದಾರೆ. ಉಳಿದ ಅಧಿಕಾರಿಗಳ ಮೇಲೆ ತನಿಖೆ ನಂತರ ಕ್ರಮ ಜರುಗಿಸುವುದಾಗಿ ತಿಳಿಸಿದ್ದಾರೆ. ಆದರೆ ನಾಲಿಗೆ ಮೇಲೆ ಹಿಡಿತವಿಲ್ಲದೆ ಸಚಿವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವ ಬಿಎಸ್‌ಪಿ ಜಿಲ್ಲಾಧ್ಯಕ್ಷ ಕಪಿಲ್ ಗೋಡಬೊಲೆ ಅವರು ಸಚಿವರ ಈಶ್ವರ ಖಂಡ್ರೆ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಇದು ಖಂಡನೀಯ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ ತಿರುಗೇಟು ನೀಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಸಚಿವ ಈಶ್ವರ ಖಂಡ್ರೆಯವರು ಸರ್ವ ಸಮುದಾಯಗಳ ಜನರನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ನಾಲ್ಕು ಬಾರಿ ಶಾಸಕರಾಗಿ ಎರಡು ಬಾರಿ ಸಚಿವರಾಗಿ ಜನಸೇವೆ ಮಾಡುತ್ತಿದ್ದಾರೆ. ಕಪಿಲ್ ಮಾತು ದಲಿತರಿಗೆ ದಾರಿ ತಪ್ಪಿಸುವಂತಿದೆ. ಅಸಾಂವಿಧಾನಿಕ ಪದ ಬಳಸಿದ್ದಕ್ಕೆ ಕೇಸ್ ದಾಖಲಿಸಿದ್ದೇನೆ. ಯಾವುದೇ ಕಾರಣಕ್ಕೂ ಹಿಂಪಡೆಯುವುದಿಲ್ಲ ಎಂದರು. ಜಿಲ್ಲೆಯಲ್ಲಿ ಅರಣ್ಯ ಭೂಮಿ ಒತ್ತುವರಿಯಾಗಿದೆ ಎಂದಿರುವ ಗೋಡಬೊಲೆ ಆರೋಪ ಸತ್ಯಕ್ಕೆ ದೂರವಾದುದು. ಬದಲಾಗಿ ಒತ್ತುವರಿ ಭೂಮಿಯನ್ನು ತೆರವುಗೊಳಿಸಿ ಸಚಿವರು ಸರ್ಕಾರದ



ಆಸ್ತಿ ಕಾಪಾಡುತ್ತಿದ್ದಾರೆ. ಸಚಿವರನ್ನು ದಲಿತವಿರೋಧಿ ಎಂದು ಪಟ್ಟಕಟ್ಟಲು ಹೊರಟಿರುವ ನೀವೇ ನಿಜವಾದ ದಲಿತವಿರೋಧಿಗಳು. ದಲಿತ ಸಮಾಜವನ್ನು ಒಡೆಯುವ ಕಾರ್ಯ ಮಾಡುತ್ತಿದ್ದೀರಿ. ಸಚಿವರ ರಾಜಕೀಯ ಜೀವನ ಸಹಿಸಲು ಇವರಿಂದ ಆಗುತ್ತಿಲ್ಲ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇವರ ಹಿಂದೆ ನಿಂತು ಆಟ ಆಡಿಸುತ್ತಿವೆ.

ಬಿಎಸ್‌ಪಿ ಪಕ್ಷ ಸಚಿವರ ಮೇಲೆ ಮಾಡುತ್ತಿರುವ ಆರೋಪ ಇದೇ ಕೊನೆಯಾಗಬೇಕು. ಇಲ್ಲದಿದ್ದರೆ ನಾವು ಕೂಡಾ ಹೋರಾಟ ಮಾಡುತ್ತೇವೆ ಎಂದು ಪ್ರತಿಪಾದಿಸಿದರು.

ಹಿರಿಯ ಕಾಂಗ್ರೆಸ್ ದಲಿತ ಮುಖಂಡರಾದ ಶಿವರಾಜ ಹಾಸನಕರ್ ಮಾತನಾಡಿ ಪತ್ರಕರ್ತನ ಮೇಲಿನ ಹಲ್ಲೆಯನ್ನು ಖಂಡಿಸುತ್ತೇವೆ. ಆದರೆ ಸಚಿವರು ತಕ್ಷಣವೇ ಶಿಕ್ಷಿಸಬೇಕು ಎನ್ನಲು ಅವರೇನು ಪೊಲೀಸರಾ? ಎಂದು ಪ್ರಶ್ನಿಸಿದರಲ್ಲದೆ ಸಚಿವರ ವಿರುದ್ಧ ಬಳಸುವ ಶಬ್ದ ಸಾಂವಿಧಾನಿಕವಾಗಿರಬೇಕು. ನೀವು ಚಿಕ್ಕವರು. ರಾಜಕೀಯದಲ್ಲಿ ಬೆಳೆಯಿರಿ. ಆದರೆ ಬಿಎಸ್‌ಪಿ ಪಕ್ಷವನ್ನೇ ನೀವು ಹಾಳು ಮಾಡುತ್ತಿದ್ದೀರಿ. ಜಿಲ್ಲೆಗೆ ಬಿಎಸ್‌ಪಿ ಪಕ್ಷದ ಕೊಡುಗೆ ಶೂನ್ಯ. ಮಾತನಾಡದೆ ಕೆಲಸ ಮಾಡಿ ತೋರಿಸಿ. ಜಿಲ್ಲೆಯಲ್ಲಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಕಾರ್ಯ ಮಾಡಿ ಎಂದು ಸಲಹೆ ನೀಡಿದರು.

ವಿವಿಧ ಕಾಂಗ್ರೆಸ್ ದಲಿತ ಮುಖಂಡರಾದ ವಿಠಲದಾಸ ಪ್ಯಾಗೆ, ಅನೀಲಕುಮಾರ ಬೆಲ್ದಾರ್, ರಮೇಶ ಡಾಕುಳಗಿ, ಬಾಬುರಾವ ಪಾಸ್ವಾನ್, ಪ್ರಶಾಂತ ಕೊಡಗೆರಾ ಹಾಗೂ ಇತರರು ಬಿಎಸ್‌ಪಿ ಜಿಲ್ಲಾಧ್ಯಕ್ಷ ಕಪಿಲ್ ಗೋಡಬೊಲೆ ಅವರು ಸಚಿವರ ಮೇಲೆ ಮಾಡಿರುವ ಆರೋಪಕ್ಕೆ ಖಂಡಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಮಾರುತಿ ಬಂಗಾರೆ, ಸಂಜೀವಕುಮಾರ, ಸೂರ್ಯಕಾಂತ ಸಾದುರೆ, ಮಲ್ಲಿಕಾರ್ಜುನ ಮೋಳಕೆರೆ, ಲೋಕೇಶ ಮಂಗಲಗಿ, ಪವನ ಮಿಠಾರೆ, ಗೌತಮ ಭೋಸ್ಲೆ, ಸಂಜುಕುಮಾರ ಭಾವಿದೊಡ್ಡಿ, ಸೇರಿದಂತೆ ಇನ್ನಿತರ ದಲಿತ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

# ಒಂದನೆ ಪುಟದಿಂದ...

## ಎಸ್ ಎಸ್ ಎಲ್ ಸಿ ಫಲಿತಾಂಶ
## ಶೇ.66.14 : ಬಾಲಕಿಯರೇ ಮೇಲುಗೈ

83.19% ಪಡೆದುಕೊಂಡ ಉತ್ತರ ಕನ್ನಡ ಮೂರನೇ ಸ್ಥಾನ, 82.29% ಪಡೆದುಕೊಂಡ ಶಿವಮೊಗ್ಗ ನಾಲ್ಕನೇ ಸ್ಥಾನ, ಕೊಡಗು 82.21% ಪಡೆದುಕೊಂಡು ಐದನೇ ಸ್ಥಾನದಲ್ಲಿದೆ. ಇನ್ನು ಹಾಸನ 82.12%, ಶಿರಸಿ 80.47%, ಚಿಕ್ಕಮಗಳೂರು 77.9%, ಬೆಂಗಳೂರು ಗ್ರಾಮಾಂತರ 74.02%, ಬೆಂಗಳೂರು ದಕ್ಷಿಣ 72.3% ಪಡೆದುಕೊಂಡು ಟಾಪ್ 10ನಲ್ಲಿದೆ. 42.43% ಪಡೆದುಕೊಂಡ ಕಲಬುರಗಿ ಜಿಲ್ಲೆ ಕೊನೆಯ ಸ್ಥಾನವನ್ನು ಪಡೆದುಕೊಂಡಿದೆ.

**ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಮೇ.26 ರಂದು ಹಾಗೂ ಪರೀಕ್ಷೆ-3 ಜೂ.23 ರಿಂದ:**

ಎಸ್ ಎಸ್ ಎಲ್ ಸಿ ಪರೀಕ್ಷೆ-1ರಲ್ಲಿ ವಿಫಲರಾದ ವಿದ್ಯಾರ್ಥಿಗಳಿಗಾಗಿ ನಡೆಯುವ ಪರೀಕ್ಷೆ-2 ಮತ್ತು 3ರ ದಿನಾಂಕವನ್ನು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧುಬಂಗಾರಪ್ಪ ಘೋಷಿಸಿದ್ದಾರೆ.

**ಅವರು ಪರೀಕ್ಷೆ-2 ಮೇ 26ರಂದು ಜೂ.2ರ ನಡುವೆ ನಡೆಯಲಿದೆ.**

ಪರೀಕ್ಷೆ-3 ಜೂನ್ 23ರಿಂದ 30ರವರೆಗೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಫಲಿತಾಂಶ ಪಡೆದಿರುವ ಮತ್ತು ಫಲಿತಾಂಶ ಉತ್ತಮಪಡಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ಮೇ 3ರಿಂದ 10ರೊಳಗೆ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ಉತ್ತರಪತ್ರಿಕೆಗಳ ಸ್ಕ್ಯಾನ್ ಪ್ರತಿ ಪಡೆಯಲು ಆನ್‌ಲೈನ್ ಮೂಲಕ ಮೇ2ರಿಂದ 7ರ ನಡುವೆ ಅರ್ಜಿ ಸಲ್ಲಿಸಬೇಕು. ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ಆನ್‌ಲೈನ್ ಬ್ಯಾಂಕಿಂಗ್ ಸೌಲಭ್ಯ ಇಲ್ಲದವರು, ಆನ್‌ಲೈನ್‌ನಲ್ಲಿ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿ ಪಡೆಯಲು ಅರ್ಜಿ ಸಲ್ಲಿಸಿದ ನಂತರ ಆಫ್‌ಲೈನ್ ಚಲನ್ ಡೌನ್‌ಲೋಡ್ ಮಾಡಿಕೊಂಡು ಬ್ಯಾಂಕ್ ಮೂಲಕ ಶುಲ್ಕ ಪಾವತಿಸಲು ಮೇ 2ರಿಂದ 8ವರೆಗೂ ಕಾಲಾವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಉತ್ತರಪತ್ರಿಕೆಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಆನ್‌ಲೈನ್ ಅರ್ಜಿ ಸಲ್ಲಿಸಲು ಮೇ 4ರಿಂದ 11ರವರೆಗೆ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಶುಲ್ಕ ಪಾವತಿಸುವವರಿಗೆ ಮೇ 12ರವರೆಗೂ ಕಾಲಾವಕಾಶವಿದೆ.

ಈ ಬಾರಿ ಆಪ್‌ನ್ನು ರೂಪಿಸಲಾಗಿದ್ದು, ಆನ್‌ಲೈನ್ ಮೂಲಕವೇ ಎಲ್ಲಾ ರೀತಿಯ ಪ್ರಕ್ರಿಯೆಗಳಿಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಅವರು ವಿವರಿಸಿದರು.

## ಬೀದರ : ದರೋಡೆ ನಡೆದು ವಾರದೊಳಗೆ ಪ್ರಕರಣ ಭೇದಿಸಿದ ಪೊಲೀಸರು; ಮೂವರ ಬಂಧನ

ಏರ್ ಗನ್ ತೋರಿಸಿ 15.55 ಲಕ್ಷ ಮೌಲ್ಯದ ಚಿನ್ನ ಮತ್ತು ನಗದು ಹಣ ದೋಚಿದ್ದರು. ಪೊಲೀಸರಿಗೆ ಹೇಳದಂತೆ ಬಾತ್‌ರೂಂನಲ್ಲಿ ಕೂಡಿಹಾಕಿದ್ದರು. ಈ ಕುರಿತು ಗಾಂಧಿ ಗಂಜ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಎಸ್‌ಪಿ ಮಾರ್ಗದರ್ಶನದಲ್ಲಿ ಗಾಂಧಿಗಂಜ್ ಮತ್ತು ಬೀದರ ಗ್ರಾಮೀಣ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ ರಚಿಸಲಾಗಿತ್ತು. ಆರೋಪಿಗಳು ತಾಲೂಕಿನ ಹೊನ್ನಿಕೇರಿ ಕ್ರಾಸ್ ಬಳಿ ಓಡಾಡುತ್ತಿರುವ ಕುರಿತು ಖಚಿತ ಮಾಹಿತಿ ಮೇರೆಗೆ ಈ ತಂಡ ದಾಳಿ ನಡೆದಿದೆ. ಡಕಾಯಿತರನ್ನು ವಶಕ್ಕೆ ಪಡೆಯುವ ಸಂದರ್ಭದಲ್ಲಿ ಕರ್ತಾರ್‌ಸಿಂಗ್ ಎಂಬಾತ ಚಾಕುವಿನಿಂದ ಹೆಡ್ ಕಾನ್ಸ್‌ಟೆಬಲ್ ಮಕ್ಸೂದ್ ಅವರ ಭುಜಕ್ಕೆ ಇರಿದಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ. ಪರಿಸ್ಥಿತಿಯನ್ನು ಗಮನಿಸಿದ ಸಿಪಿಐ ಜಿಎಸ್ ಬಿರಾದಾರ ಅವರು ಮೂರು ಸುತ್ತು ಗುಂಡು ಹಾರಿಸಿದ್ದು, ಅದರಲ್ಲಿ ಕರ್ತಾರ್ ಸಿಂಗ್ ಗಾಯಗೊಂಡಿದ್ದಾನೆ. ಈ ವೇಳೆ ಆತನನ್ನು ವಶಕ್ಕೆ ಪಡೆಯಲಾಗಿದೆ. ಬಳಿಕ ಪರಾರಿಯಾಗಲು ಯತ್ನಿಸಿದ ಜಗಜೀತ್‌ಸಿಂಗ್ ಹಾಗೂ ಅಕ್ಷಯ್‌ನನ್ನು ಸಹ ಬಂಧಿಸಲಾಗಿದೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಬ್ರಿಮ್ಸ್ ಆಸ್ಪತ್ರೆಗೆ ತೆರಳಿ ಗಾಯಗೊಂಡಿರುವ ಮುಖ್ಯ ಪೇದೆ ಮಕ್ಸೂದ್ ಅವರ ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದ್ದಾರೆ.

ಈ ಬಗ್ಗೆ ಮಾತನಾಡಿದ ಎಸ್.ಪಿ ಪ್ರದೀಪ್ ಗುಂಟಿ, ಬೀದರನ ಓಲ್ಡ್ ಆದರ್ಶ ಕಾಲೋನಿಯ ಮನೆಯಲ್ಲಿ ಡಕಾಯಿತಿ ಪ್ರಕರಣವನ್ನು ಬೇಧಿಸಲಾಗಿದ್ದು, ಐವರು ಆರೋಪಿಗಳಲ್ಲಿ ಮೂವರನ್ನು ವಶಕ್ಕೆ ಪಡೆಯಲಾಗಿದೆ. ಇದರಲ್ಲಿ ಕರ್ತಾರಸಿಂಗ್ ಮತ್ತು ಜಗಜೀತ್‌ಸಿಂಗ್ ಇಬ್ಬರು ಸಹೋದರರು. ಸದ್ಯ ಬೀದರನ ನಿವಾಸಿಯಾಗಿರುವ ಜಗಜೀತ್‌ಸಿಂಗ್‌ನ ಮಾಹಿತಿ ಮೇರೆಗೆ ತನ್ನ ಸಹೋದರ ಸೇರಿ ಐವರು ಡಕಾಯಿತರು ಮನೆ ಕಳ್ಳತನಕ್ಕೆ ಯೋಜನೆ ರೂಪಿಸಿದ್ದರು. ಚಿನ್ನಾಭರಣವನ್ನು ಪರಳಿಯಲ್ಲಿ ಮಾರಾಟ ಮಾಡಿ, ಐದು ಜನರು ಸಮನಾಗಿ ಹಂಚಿಕೊಂಡಿದ್ದರು. ಇದಕ್ಕೆ ನೆರವು ನೀಡಿದ್ದ ವ್ಯಕ್ತಿಯನ್ನೂ ಸಹ ವಶಕ್ಕೆ ಪಡೆಯಲಾಗಿದೆ. ಕರ್ತಾರ್‌ಸಿಂಗ್ ವಿರುದ್ಧ ವಿವಿಧೆಡೆ 18 ಡಕಾಯಿತಿ ಪ್ರಕರಣಗಳಿವೆ. ಇನ್ನಿಬ್ಬರು ಕಿಡಿಗೇಡಿಗಳ ಬಂಧನಕ್ಕೆ ಜಾಲ ಬೀಸಲಾಗಿದ್ದು, ಚಿನ್ನಾಭರಣ ಜಪ್ತಿ ಪ್ರಕ್ರಿಯೆ ಸಹ ನಡೆದಿದೆ ಎಂದರು.

## ಸನಾತನ ಹಿಂದೂ ಸಂಸ್ಕೃತಿಗೆ ಶ್ರೀ ಶಂಕರಾಚಾರ್ಯರ ಕೊಡುಗೆ ಅಪಾರ: ದತ್ತಾತ್ರೇಯ ಜೋಷಿ

ದೀಕ್ಷೆಯನ್ನು ಪಡೆದರು. ಶ್ರೀ ಶಂಕರಾಚಾರ್ಯರು ಸನಾತನ ಧರ್ಮದ ಪ್ರಥಮ ಆಧುನಿಕ ರಕ್ಷಕರಾಗಿ ಪರಿಗಣಿಸಲ್ಪಡುತ್ತಾರೆ. ಶ್ರೀ ಶಂಕರಾಚಾರ್ಯರು ಕೇವಲ ಒಂದು ಜಾತಿಗೆ ಮಾತ್ರ ಸೀಮಿತವಾಗದೇ, ಸನಾತನ ಧರ್ಮವನ್ನು ಉಳಿಸಿದ ಮಹಾನ್ ಚೇತನರಾಗಿದ್ದಾರೆ ಎಂದು ಜೋಷಿ ಅವರು ತಿಳಿಸಿದರು.

ಸಮಾಜದ ಮುಖಂಡರು, ಹಿರಿಯ ಪತ್ರಕರ್ತರು ಹಾಗೂ ಚಲನಚಿತ್ರ ನಿರ್ದೇಶಕರಾದ ತ್ರಿವಿಕ್ರಮ ಜೋಷಿ ಅವರು ಮಾತನಾಡಿ, ವೇದಗಳು, ಉಪನಿಷತ್ತುಗಳು ಮತ್ತು ಧರ್ಮಶಾಸ್ತ್ರಗಳಂತಹ ಪವಿತ್ರ ಗ್ರಂಥಗಳನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ ರಾಷ್ಟ್ರವನ್ನು ರೂಪಿಸಬೇಕು ಎಂಬುದು ಆದಿ ಶಂಕರಾಚಾರ್ಯರ ವಿಚಾರವಾಗಿತ್ತು. ತಾತ್ವಿಕ ಚಿಂತನೆಗಳನ್ನು ಕೇವಲ ಪಾಠದಲ್ಲಷ್ಟೇ ಅಲ್ಲ ಪ್ರಾಯೋಗಿಕವಾಗಿ ಜಾರಿ ಮಾಡಬೇಕು ಎಂದು ಅವರು ರಾಷ್ಟ್ರೀಯ ಕಲ್ಪನೆಯೊಂದನ್ನು ರೂಪಿಸಿದರು. ಇದು ಆ ಕಾಲದ ಅತ್ಯಂತ ಮಹತ್ವದ ದಾರ್ಶನಿಕ ಕ್ರಾಂತಿ ಎಂದೆನಿಸಬಹುದಾಗಿದೆ ಎಂದರು.

ಶ್ರೀ ಶಂಕರಾಚಾರ್ಯರು ದೇಶದ ವಿವಿಧ ಭಾಗಗಳಲ್ಲಿ ಶಕ್ತಿಪೀಠಗಳನ್ನು ಸ್ಥಾಪಿಸಿದರು. ಉತ್ತರದಲ್ಲಿ ಬದ್ರಿನಾಥ, ಪಶ್ಚಿಮದಲ್ಲಿ ದ್ವಾರಕಾ, ಪೂರ್ವದಲ್ಲಿ ಪೂರಿ ಮತ್ತು ದಕ್ಷಿಣದಲ್ಲಿ ಶೃಂಗೇರಿ ಇವು ಶಕ್ತಿಪೀಠಗಳಾಗಿವೆ. ಈ ಮೂಲಕ ಅವರು "ಭಾರತ" ಎಂಬ ಭಾವನೆಯನ್ನು ಧರ್ಮ, ತಾತ್ವಿಕತೆ ಮತ್ತು ಸಂಸ್ಕೃತಿಯ ಮೂಲಕ ಏಕತೆಯ ರೂಪದಲ್ಲಿ ಸ್ಥಾಪಿಸಿದರು ಎಂದು ಜೋಷಿ ಅವರು ತಿಳಿಸಿದರು.

ಶ್ರೀ ಶಂಕರಾಚಾರ್ಯರು ವೈದಿಕ ಸಂಪ್ರದಾಯವನ್ನು ಪುನರ್ ಸ್ಥಾಪಿಸಿ, ಹಿಂದೂ ಸಮಾಜವನ್ನು "ಸನಾತನ ಧರ್ಮ" ಎಂಬ ಆದಿಕಾಲೀನ ಧರ್ಮ ರೂಪದಲ್ಲಿ ಪಠಿಸಿದರು. ಅವರು ಎಲ್ಲ ದೇವತೆಗಳ ಪೂಜೆಯನ್ನು ಒಪ್ಪಿಕೊಂಡು, ವಿವಿಧ ಮಾರ್ಗಗಳಲ್ಲಿ ದೇವೋಪಾಸನೆಯ ಸಾಧ್ಯತೆಯನ್ನು ಅಂಗೀಕರಿಸಿದರು. ಇದರ ಪರಿಣಾಮವಾಗಿ ಹಿಂದೂ ಧರ್ಮ ಪ್ರಾಯೋಗಿಕ ಜೀವನದ ಭಾಗವಾಗಿ ರೂಢಿಸಿತು ಎಂದು ಜೋಷಿ ಅವರು ತಿಳಿಸಿದರು.

ಮೆರವಣಿಗೆ: ಕಾರ್ಯಕ್ರಮಕ್ಕೆ ಮೊದಲು ಶ್ರೀ ಶಂಕರಾಚಾರ್ಯರ ಭಾವಚಿತ್ರದ ಮೆರವಣಿಗೆಗೆ ತಹಸೀಲ್ದಾರರಾದ ಸುರೇಶ ವರ್ಮಾ ಅವರು ಚಾಲನೆ ನೀಡಿದರು. ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಸಾಗಿದ ಮೆರವಣಿಗೆಯು ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ರಂಗಮಂದಿರಕ್ಕೆ ಬಂದು ಸೇರಿತು.

ಸಮಾರಂಭದಲ್ಲಿ ತಹಸೀಲ್ದಾರರಾದ ಪರಶುರಾಮ, ಹಿರಿಯ ಪತ್ರಕರ್ತರಾದ ಅರವಿಂದ ಕುಲಕರ್ಣಿ, ಸಂಘಟಿಕರಾದ ಡಾ.ದತ್ತಪ್ಪ ಬಿರಾದಾರ, ಆನಂದ್ ಬಡ್ಡಿ, ಹನುಮಂತ್ ರಾವ್, ರಮೇಶ್ ಕುಲಕರ್ಣಿ, ಕೃಷ್ಣಮೂರ್ತಿ, ಪಿ ಕೆ ದೇಸಾಯಿ, ಡಾ.ಆನಂದ ಪಡ್ನವೀಸ್ ಹಾಗೂ ಇನ್ನೀತರರು ಇದ್ದರು.

## ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರ ತರಬೇತಿ ಕಾರ್ಯಗಾರ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮೇ02-ರಾಜ್ಯಬಾಲಭವನ ಸೊಸೈಟಿ, ಬೆಂಗಳೂರು ಇವರ ವತಿಯಿಂದ ಜಿಲ್ಲಾ ಮಟ್ಟದಲ್ಲಿ ಬೇಸಿಗೆಶಿಬಿರವನ್ನುಆಯೋಜಿಸಿದ್ದು, ಶಿಬಿರವು 15 ದಿನಗಳ ಕಾಲ ಬೆಳಿಗ್ಗೆ 09 ಗಂಟೆಯಿಂದ ಮಧ್ಯಾಹ್ನ 1:30 ಗಂಟೆಯ ವರೆಗೆ ನಡೆಯಲಿದೆ.

ಶಿಬಿರವು ವಿವಿಧ ಸೃಜನಾತ್ಮಕ ಹಾಗೂಕ್ರಿಯಾತ್ಮಕಚಟುವಟಿಕೆಗಳಾದ ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಸಮೂಹ ಸಂಗೀತ, ಸಮೂಹ ನೃತ್ಯ, ಯೋಗ, ಕರಾಟೆ, ಇತರೆ ಚಟುವಟಿಕೆಗಳು ನಡೆಯಲಿದ್ದು, ಕಾರ್ಯಕ್ರಮಕ್ಕೆ 05 ರಿಂದ 16 ವರ್ಷದೊಳಗಿನ ಆಸಕ್ತಿಯುಳ್ಳ ಸರಕಾರಿ ಶಾಲೆ ಮಕ್ಕಳು, ಗ್ರಾಮೀಣ ಪ್ರದೇಶ ಹಾಗೂ ಸೌಲಭ್ಯ ವಂಚಿತ ಮಕ್ಕಳಿಗೆ ಸುಧಾರಣಾ ಸಂಸ್ಥೆಗಳ ಬಾಲಕರು-ಬಾಲಕಿಯರ ಬಾಲ ಮಂದಿರದ ಮಕ್ಕಳಿಗೆ ಮೊದಲನೇ ಆದ್ಯತೆ ಹಾಗೂ ಬೇಸಿಗೆ ಶಿಬಿರದ ಚಟುವಟಿಕೆಗಳಲ್ಲಿ 100 ಮಕ್ಕಳಿಗೆ ಮಾತ್ರ ಭಾಗವಹಿಸಲು ಅವಕಾಶ ಇರುತ್ತದೆ. ಹಾಗಾಗಿ ಮೇ 12 ರಂದು ಸಂಜೆ 05 ಗಂಟೆಯೊಳಗಾಗಿ ನೋಂದಾಯಿಸಿಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು.

## ದೇಶದ ಸಮಗ್ರ ಅಭಿವೃದ್ಧಿಗೆ ಕಾರ್ಮಿಕರ ಶ್ರಮ ಅಪಾರ:- ಮೀನಾಕ್ಷಿ ಬಾಳೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ದೇಶದ ಸಮಗ್ರ ಅಭಿವೃದ್ಧಿಗೆಕಾರ್ಮಿಕರುವಹಿಸುತ್ತಿರುವ ಶ್ರಮ ಅಪಾರವಾಗಿದೆ ಎಂದು ಜನವಾದಿ ಮಹಿಳಾ ಸಂಘಟನೆ ರಾಜ್ಯಾಧ್ಯಕ್ಷೆ ಮೀನಾಕ್ಷಿ ಬಾಳೆ. ಹೇಳಿದರು. ಪಟ್ಟಣದ ಸಂತ ಶಿರೋಮಣಿಮಡಿವಳೇಶ್ವರಗವಿಯ ಆವರಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ನುಡಿದರು. ಶ್ರಮಿಕ ವರ್ಗವೇ ಪ್ರಸ್ತುತ ದೇಶದ ಸಂಪತ್ತು. ರಕ್ತದ ಜತೆ ಶ್ರಮ ಬೆರೆಸಿ ದೊಡ್ಡ ಕಟ್ಟಡ, ಅಣೆಕಟ್ಟು, ಕೆರೆಗಳನ್ನು ಕಟ್ಟುತ್ತಾರೆ. ಶ್ರಮಿಕರಿಗೆ ಸರ್ಕಾರದಿಂದ ನ್ಯಾಯಯುತವಾಗಿ ದೊರೆಯಬೇಕಾದ ಸೌಲಭ್ಯ ಬೇರೆಯವರ ಪಾಲಾಗುತ್ತಿದೆ. ಇದರಿಂದ ನಿಜವಾದ ಕಾರ್ಮಿಕರ ಆರ್ಥಿಕ ಸ್ಥಿತಿಗತಿ ದಿನದಿಂದ ದಿನಕ್ಕೆ ಹದಗೆಟ್ಟು ಹೋಗುತ್ತಿದೆ ಎಂದು ವ್ಯಕ್ತಪಡಿಸಿದರು. ಜಿಲ್ಲಾಧ್ಯಕ್ಷ ಬಸವರಾಜ ಮಾಳಗೆ ಮಾತನಾಡಿ, ಕಾರ್ಮಿಕರ ಶ್ರಮದಿಂದ ಬಂಡವಾಳ ಮಧ್ಯವರ್ತಿಗಳು ಶ್ರೀಮಂತರಾಗಿ ಮೆರೆಯುತ್ತಿದ್ದಾರೆ. ಈ ವ್ಯವಸ್ಥೆ ಬದಲಾಗಿ ಕಾರ್ಮಿಕರಿಗೆ ತಕ್ಕ ಪ್ರತಿಫಲ ದೊರೆಯುವಂತಾಗಲು ಎಲ್ಲ ಕಾರ್ಮಿಕರು ಒಗ್ಗೂಡಿ ಹೋರಾಟ ಮಾಡುವುದು ಅನಿವಾರ್ಯವಾಗಿದೆ ಎಂದರು. ಕಾರ್ಮಿಕರ ಜೀವನ ಹಾಗೂ ಅವರ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಸರಕಾರದ ಸೌಲಭ್ಯಗಳು ನೈಜವಾಗಿ ಕಾರ್ಮಿಕರ ಮನೆ ಬಾಗಿಲಿಗೆ ಮುಟ್ಟಬೇಕು. ಜತೆಗೆ ಕಾರ್ಮಿಕ ಇಲಾಖೆ ಅಧಿಕಾರಿಗಳು ಕೂಡ ಶ್ರಮ ವಹಿಸಿ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು. ಕಟ್ಟಡ ಕಾರ್ಮಿಕರ ಸಂಘದ ತಾಲೂಕಾಧ್ಯಕ್ಷ ಶ್ರೀಮಂತ ಸಿ. ಮೇತ್ರೆ ಮೀನಕೇರಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ತಾಲೂಕ ಕಾರ್ಯದರ್ಶಿ ಸೀಮೋನ್ ಈ. ಮೇತ್ರೆ ಉಡಬಾಳ, ರಾಜಕುಮಾರ ಚಾಂಗಲೇರಾ, ಲಾಲಪ್ಪ ರಾಂಪುರೆ, ತುಕರಾಮ ಸಾಗರ್, ಕ್ರಿಸ್ತಿದಾಸ್, ಅಂಗನವಾಡಿ ಕಾರ್ಯಕರ್ತೆ ಸಿದ್ದಮ್ಮ, ಭಾರತಿ ಸೇರಿದಂತೆ ಕಟ್ಟಡ ಕಾರ್ಮಿಕರು ಉಪಸ್ಥಿತರಿದ್ದರು.

### ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿದವರಲ್ಲಿ
## ಶಂಕರಾಚಾರ್ಯರು ಮೊದಲಿಗರು : ಹೆಚ್ಚುವರಿ ಡಿಸಿ ಕೊಟಪ್ಪಗೋಳ್ ಅಭಿಮತ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಮೇ:2:ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯರಲ್ಲಿ ಶಂಕರಾಚಾರ್ಯರು ಮೊದಲಿಗರು.

ಎಂದು ಹೆಚ್ಚುವರಿ ಡಿಸಿ ಶರಣಬಸಪ್ಪ ಕೋಟೆಪ್ಪಗೋಳ್ ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ , ನಗರಸಭೆ ಇವರ ಸಹಯೋಗದಲ್ಲಿ ಶ್ರೀ ಶಂಕರಾಚಾರ್ಯರ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೇವಲ 32 ವರ್ಷಗಳ ಕಾಲ ಜೀವಿಸಿದ್ದ ಶಂಕರಾಚಾರ್ಯರು, ಈ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆ ಗಳಿಗೆ ಸಂಚರಿಸಿ "ಅದ್ವೈತ" ತತ್ವವನ್ನು ಪ್ರತಿಪಾದಿಸುತ್ತ ಜಗತ್ತಿಗೆ ಸಾರಿ, ಹಲವಾರು ಮತಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದರೆಂದು ಅವರು ಹೇಳಿದರು.

ಆದಿಶಂಕರರು ಭಗವದ್ಗೀತೆ, ಉಪನಿಷತ್ ಹಾಗೂ ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದ ಮೊದಲ ಆಚಾರ್ಯರಾದರು.

ದೇಶದ ಮೂಲೆ ಮೂಲೆಗಳಲ್ಲಿ ಸಂಚರಿಸಿದ ಶಂಕರರು ಅನೇಕರನ್ನು ಅಧ್ಯಾತ್ಮಕ್ಕೆ ಸಂಬಂಧಪಟ್ಟ ವಾದದಲ್ಲಿ ಸೋಲಿಸಿದರೆಂದರು.

ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠ (ಮಠ) ಗಳನ್ನು ಸ್ಥಾಪಿಸಿ, ಪ್ರತಿಯೊಂದು ಪೀಠಕ್ಕೂ ತಮ್ಮ ಒಬ್ಬೊಬ್ಬ ಶಿಷ್ಯರನ್ನು ಪೀಠಾಧಿಪತಿಂಯನ್ನಾಗಿಸಿದರು. "ಅದ್ವೈತ" ಸಿದ್ಧಾಂತ ವನ್ನು ಜನಪ್ರಿಯಗೊಳಿಸಿದರು. ಹಲವಾರು ಪಂಡಿತರನ್ನೂ ಶಾಸ್ತ್ರವೇತ್ತರನ್ನೂ ಜಯಿಸಿ, ಸರ್ವಜ್ಞಪೀಠವನ್ನೇರಿದರೆಂದು ಕೊಟಪ್ಪಗೋಳ್ ವಿವರಿಸಿದರು.

ಗುರುಪ್ರಾಸದ ವೈದ್ಯ ಉಪನ್ಯಾಸ ನೀಡಿದರು. ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ,

ಸಮಾಜದ ಮುಖಂಡರಾದ

ಡಾ. ಪರಶುರಾಮ ಕೆಂಭಾವಿ, ಪ್ರವೀಣ್ ಕುಲಕರ್ಣಿ, ರವಿಂದ್ರ ಕುಲಕರ್ಣಿ, ಶಾರದಾ ಇದ್ದರು.

## ಸನಾತನ ಹಿಂದೂ ಸಂಸ್ಕೃತಿಗೆ ಶ್ರೀ ಶಂಕರಾಚಾರ್ಯರ ಕೊಡುಗೆ ಅಪಾರ: ದತ್ತಾತ್ರೇಯ ಜೋಷಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ02-ಮಹತ್ವದ ಸನಾತನ ಹಿಂದೂ ಧರ್ಮ, ಹಿಂದೂ ಸಂಸ್ಕೃತಿಯನ್ನು ಉಳಿಸುವಲ್ಲಿ ಶ್ರೀ ಶಂಕರಾಚಾರ್ಯರ ಕೊಡುಗೆ-ಯು ಅಪಾರವಾಗಿದೆ ಎಂದು ದತ್ತಾತ್ರೇಯ ಪಂ.ಜೋಷಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರಿಂದ ಮೇ 2ರಂದು ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಶಂಕರಾಚಾರ್ಯರು ಬಾಲ್ಯದಿಂದಲೇ ಅದ್ಯಾತ್ಮದತ್ತ ಒಲವು ಹರಿಸಿದರು. ಶ್ರೀ ಶಂಕರಾಚಾರ್ಯರ ಜಾತಕದ ಬಗ್ಗೆ ಪಂಡಿತರು ವಿಶೇಷ ಇದೆ ಎಂದು ತಿಳಿಸುತ್ತಿದ್ದರು. ಅಪಾರ ವಿದ್ಯೆಯನ್ನು ಹೊಂದುತ್ತಾರೆ. ವೇದಶಾಸ್ತ್ರಗಳಲ್ಲಿ ಸಂಪೂರ್ಣ ಪಾಂಡಿತ್ಯ ಪಡೆಯುತ್ತಾರೆ ಎಂದು ಪಂಡಿತರು ಹೇಳುತ್ತಿದ್ದರು. ಶ್ರೀ ಶಂಕರಾಚಾರ್ಯರು ಅಂದರಂತೆ ಸಾಧನೆ ಮಾಡಿದರು ಎಂದು ತಿಳಿಸಿದರು.

ಮನಸ್ಸೇ ಮನುಷ್ಯನ ಸಾಧನೆ-ಸಂಕಟಗಳಿಗೆ ಕಾರಣ ಎಂದು ಹೇಳುತ್ತಿದ್ದ ಶಂಕರಾಚಾರ್ಯರು ಗಂಗಾ ನದಿ ತೀರದಲ್ಲಿ ಗುರುಪಾದದಿಂದ ಸನ್ಯಾಸ ದೀಕ್ಷೆಯನ್ನು ಪಡೆದರು. ಶ್ರೀ ಶಂಕರಾಚಾರ್ಯರು ಸನಾತನ ಧರ್ಮದ ಪ್ರಥಮ ಆಧುನಿಕ ರಕ್ಷಕರಾಗಿ ಪರಿಗಣಿಸಲ್ಪಡುತ್ತಾರೆ. ಶ್ರೀ ಶಂಕರಾಚಾರ್ಯರು ಕೇವಲ ಒಂದು ಜಾತಿಗೆ ಮಾತ್ರ ಸೀಮಿತವಾಗದೇ, ಸನಾತನ ಧರ್ಮವನ್ನು ಉಳಿಸಿದ ಮಹಾನ್ ಚೇತನರಾಗಿದ್ದಾರೆ ಎಂದು ಜೋಷಿ ಅವರು ತಿಳಿಸಿದರು.

ಸಮಾಜದ ಮುಖಂಡರು, ಹಿರಿಯ ಪತ್ರಕರ್ತರು ಹಾಗೂ ಚಲನಚಿತ್ರ ನಿರ್ದೇಶಕರಾದ ತ್ರಿವಿಕ್ರಮ ಜೋಷಿ ಅವರು ಮಾತನಾಡಿ, ವೇದಗಳು, ಉಪನಿಷತ್ತುಗಳು ಮತ್ತು ಧರ್ಮಶಾಸ್ತ್ರಗಳಂತಹ ಪವಿತ್ರ ಗ್ರಂಥಗಳನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ ರಾಷ್ಟ್ರವನ್ನು ರೂಪಿಸಬೇಕು ಎಂಬುದು ಆದಿ ಶಂಕರಾಚಾರ್ಯರ ವಿಚಾರವಾಗಿತ್ತು. ತಾತ್ವಿಕ ಚಿಂತನೆಗಳನ್ನು ಕೇವಲ ಪಾಠದಲ್ಲಷ್ಟೇ ಅಲ್ಲ ಪ್ರಾಯೋಗಿಕವಾಗಿ ಜಾರಿ ಮಾಡಬೇಕು ಎಂದು ಅವರು ರಾಷ್ಟ್ರೀಯ ಕಲ್ಪನೆಯೊಂದನ್ನು ರೂಪಿಸಿದರು. ಇದು ಆ ಕಾಲದ ಅತ್ಯಂತ ಮಹತ್ವದ ದಾರ್ಶನಿಕ ಕ್ರಾಂತಿ ಎಂದೆನಿಸಬಹುದಾಗಿದೆ ಎಂದರು.

ಶ್ರೀ ಶಂಕರಾಚಾರ್ಯರು ದೇಶದ ವಿವಿಧ ಭಾಗಗಳಲ್ಲಿ ಶಕ್ತಿಪೀಠಗಳನ್ನು ಸ್ಥಾಪಿಸಿದರು. ಉತ್ತರದಲ್ಲಿ ಬದ್ರಿನಾಥ, ಪಶ್ಚಿಮದಲ್ಲಿ ದ್ವಾರಕಾ, ಪೂರ್ವದಲ್ಲಿ ಪೂರಿ ಮತ್ತು ದಕ್ಷಿಣದಲ್ಲಿ ಶೃಂಗೇರಿ ಇವು ಶಕ್ತಿಪೀಠಗಳಾಗಿವೆ. ಈ ಮೂಲಕ ಅವರು "ಭಾರತ" ಎಂಬ ಭಾವನೆಯನ್ನು ಧರ್ಮ, ತಾತ್ವಿಕತೆ ಮತ್ತು ಸಂಸ್ಕೃತಿಯ ಮೂಲಕ ಏಕತೆಯ ರೂಪದಲ್ಲಿ ಸ್ಥಾಪಿಸಿದರು ಎಂದು ಜೋಷಿ ಅವರು ತಿಳಿಸಿದರು.

ಶ್ರೀ ಶಂಕರಾಚಾರ್ಯರು ವೈದಿಕ ಸಂಪ್ರದಾಯವನ್ನು ಪುನರ್ ಸ್ಥಾಪಿಸಿ, ಹಿಂದೂ ಸಮಾಜವನ್ನು "ಸನಾತನ ಧರ್ಮ" ಎಂಬ ಆದಿಕಾಲೀನ ಧರ್ಮ ರೂಪದಲ್ಲಿ ಪಠಿಸಿದರು. ಅವರು ಎಲ್ಲ ದೇವತೆಗಳ ಪೂಜೆಯನ್ನು ಒಪ್ಪಿಕೊಂಡು, ವಿವಿಧ ಮಾರ್ಗಗಳಲ್ಲಿ ದೇವೋಪಾಸನೆಯ ಸಾಧ್ಯತೆಯನ್ನು ಅಂಗೀಕರಿಸಿದರು. ಇದರ ಪರಿಣಾಮವಾಗಿ ಹಿಂದೂ ಧರ್ಮ ಪ್ರಾಯೋಗಿಕ ಜೀವನದ ಭಾಗವಾಗಿ ರೂಢಿಸಿತು ಎಂದು ಜೋಷಿ ಅವರು ತಿಳಿಸಿದರು.

ಮೆರವಣಿಗೆ:ಕಾರ್ಯಕ್ರಮಕ್ಕೆಮೊದಲು ಶ್ರೀ ಶಂಕರಾಚಾರ್ಯರ ಭಾವಚಿತ್ರದ ಮೆರವಣಿಗೆಗೆ ತಹಸೀಲ್ದಾರರಾದ ಸುರೇಶ ವರ್ಮಾ ಅವರು ಚಾಲನೆ ನೀಡಿದರು. ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಸಾಗಿದ ಮೆರವಣಿಗೆಯು ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ರಂಗಮಂದಿರಕ್ಕೆ ಬಂದು ಸೇರಿತು.

ಸಮಾರಂಭದಲ್ಲಿ ತಹಸೀಲ್ದಾರರಾದ ಪರಶುರಾಮ, ಹಿರಿಯ ಪತ್ರಕರ್ತರಾದ ಅರವಿಂದ ಕುಲಕರ್ಣಿ, ಸಂಘಟಿಕರಾದ ಡಾ.ದತ್ತಪ್ಪ ಬಿರಾದಾರ, ಆನಂದ್ ಬಡ್ಡಿ, ಹನುಮಂತ್ ರಾವ್, ರಮೇಶ್ ಕುಲಕರ್ಣಿ, ಕೃಷ್ಣಮೂರ್ತಿ, ಪಿ ಕೆ ದೇಸಾಯಿ, ಡಾ.ಆನಂದ ಪಡ್ನವೀಸ್ ಹಾಗೂ ಇನ್ನೀತರರು ಇದ್ದರು.

## ಸಿದ್ದನಕೊಳ್ಳ ಪೂಜ್ಯರ ಪುಣ್ಯರಾಧನೆ ಕಾರ್ಯಕ್ರಮ ಇಂದು

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ ಜಿಲ್ಲೆಯ ಸಿದ್ದನಕೊಳ್ಳದ ಮಠದಲ್ಲಿ ಲಿಂಗೈಕೆ ಸಿದ್ದಪ್ಪಜ್ಜರ ಪೂಜ್ಯರ ಪುಣ್ಯರಾಧನೆಕಾರ್ಯಕ್ರಮ ಇಂದು ಜರುಗಲಿದ್ದು ಬೆಳಿಗ್ಗೆ 6 ಗಂಟೆಗೆ ಕರ್ತೃ ಗದ್ದಿಗೆಯ ಅಭಿಷೇಕ ದೊಂದಿಗೆ ಪ್ರಾರಂಭವಾಗುವ ಪುಣ್ಯರಾಧನೆ ಕಾರ್ಯಕ್ರಮ ನಂತರ ಮಧ್ಯಾಹ್ನ 11 ಗಂಟೆಗೆ ಡಾ. ಶಿವಕುಮಾರ್ ಸ್ವಾಮಿಗಳ ಸಾನಿಧ್ಯದಲ್ಲಿ ಧರ್ಮಸಭೆ ನಡೆಯಲಿದ್ದು ಮಧ್ಯಾಹ್ನ 12 ಗಂಟೆಗೆ ಮಾನ್ಯ ಅಧ್ಯಕ್ಷರು ವೀರಶೈವ ಅಭಿವೃದ್ಧಿ ನಿಗಮ



ಕರ್ನಾಟಕ ಸರ್ಕಾರದ ಮಾನ್ಯ ಶಾಸಕರು ಡಾ// ವಿಜಯಾನಂದ ಕಾಶಪ್ಪನವರು ಶಾಸಕರ ಅನುದಾನದಲ್ಲಿ ಬೆನಕನವಾರಿ ಸಿದ್ದನ ಕೊಳ್ಳದ ರಸ್ತೆಯ ಭೂಮಿ ಪೂಜ ಕಾರ್ಯಕ್ರಮ ನೆರವೇರಿಸಲಿದ್ದು ನಂತರ ಪೂಜ್ಯರು ಹಾಗೂ ಶಾಸಕರ ಮೈತೃತ್ವದಲ್ಲಿ ಧ್ಯಾನ ಮಂದಿರದ ಭೂಮಿ ಪೂಜೆ ಕಾರ್ಯಕ್ರಮ ನೆರವೇರಲಿದ್ದು ಸಿದ್ದನಕೊಳ್ಳ ಮಠದ ಸಕಲ ಭಕ್ತರು ಪುಣ್ಯಾರಾಧನೆ ಮತ್ತು ಧರ್ಮಸಭೆ ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಪರಮಪೂಜ್ಯ ಡಾ// ಶಿವಕುಮಾರ ಸ್ವಾಮೀಜಿ ಸಿದ್ದನಕೊಳ್ಳಮಠ ಇವರು ಭಕ್ತರಿಗೆ ತಿಳಿಸಿರುತ್ತಾರೆ

## ಜಾಗತಿಕ ಪ್ರಪಂಚಕ್ಕೆ ಬಸವಣ್ಣನವರ ಕೊಡುಗೆ ಅಪಾರ.

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಜಾಗತಿಕ ಪ್ರಪಂಚಕ್ಕೆ ಬಸವಣ್ಣನವರ ಕೊಡುಗೆ ಅಪಾರ ಎಂದು ಅನುಭವ ಮಂಟಪದ ಅಧ್ಯಕ್ಷನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ನುಡಿದರು.

ತಾಲೂಕಿನ ಕಂದಗೋಳ ಗ್ರಾಮದಲ್ಲಿ ವಿಶ್ವ ಗುರು ಬಸವಣ್ಣನವರ ಅಶ್ವರೂಢ ಮೂರ್ತಿ ಅನಾವರಣ ಹಾಗೂ ಬಸವ ಜಯಂತಿ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಬಸವಣ್ಣನವರು ಅಂದು ಸಾಮಾಜಿಕ ನ್ಯಾಯದ ಮೇಲೆ ಸರ್ವ ಜನಾಂಗದ, ಸಕಲ ಜೀವಾತ್ಮರ ಕಲ್ಯಾಣಕ್ಕಾಗಿ ತಮ್ಮ ಜೀವನದ ಹಂಗನ್ನು ತೊರೆದು ಶ್ರಮಿಸಿದ ಮಾಹಾನ ಚೇತನರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಸಿಗಬೇಕೆಂದು ಹೋರಾಟ ಮಾಡಿ, ನ್ಯಾಯ ಒದಗಿಸಿ, ಅದರಂತೆ ನಡೆದವರು. ಕನ್ನಡದಲ್ಲಿ ವಚನಗಳನ್ನು ರಚಿಸಿ, ಕನ್ನಡ ಭಾಷೆಯನ್ನು ದೇವ ಭಾಷೆಯನ್ನಾಗಿ ಮಾಡಿದವರು. ಬಸವಣ್ಣನವರ ತತ್ವ ಚಿಂತನೆಗಳು ಸರ್ವರೂ ಅಳವಡಿಸಿಕೊಂಡು ಇನ್ನೊಬ್ಬರಿಗೆ ಮಾದರಿ ವ್ಯಕ್ತಿಯಾಗಿ ಬಾಳಬೇಕೆಂದು ಕರೆಯನ್ನು ನೀಡಿದರು. ಸನ್ನಿಧಾನ ವಹಿಸಿದ ಬಸವಕಲ್ಯಾಣ ಗುಣತೀರ್ಥವಾಡಿ ಕಲ್ಯಾಣ ಮಾಹಾಮನೆ ಪೀಠಾಧ್ಯಕ್ಷ ಬಸವಪ್ರಭು ಶ್ರೀಗಳು ಮಾತನಾಡಿ, ಬಸವಣ್ಣನವರ ತತ್ವಗಳು ಸಮಾಜದಲ್ಲಿ ಸಮಾನತೆ ಸಾರುತ್ತವೆ. ನಿತ್ಯ ಜೀವನದಲ್ಲಿ ಅವುಗಳನ್ನು ಅನುಸರಿಸಿದರೆ 12ನೇ ಶತಮಾನದ ಶರಣ ಪರಂಪರೆ ಪುನಃ ಮರುಕಳಿಸುತ್ತದೆ. ಬಸವಣ್ಣನವರ ಕಳಬೇಡ, ಕೊಲಬೇಡ. ಎಂಬ ವಚನವನ್ನು ಚಾಚೂ ತಪ್ಪದೇ ಸರ್ವರೂ ಪಾಲಿಸಬೇಕು. ನುಡಿದಂತೆ ನಡೆಯಬೇಕು. ಬಸವಣ್ಣನವರ ವಚನಗಳು ಇಂದಿಗೂ ಪ್ರಸ್ತುತ. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದರಿಂದ ಸಮಾಜದ ಸ್ವಾಸ್ಥ್ಯ ಕಾಪಾಡಲು ಸಹಕಾರಿ ಎಂದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಬೀದರ್ ಜಿಲ್ಲಾಧ್ಯಕ್ಷ ಸಂಗಮೇಶ ಎನ್ ಜವಾದಿ ಮಾತನಾಡಿ ಸಮಾಜದಲ್ಲಿ ಸಮಾನತೆ, ಸಹಬಾಳ್ವೆಯ ತತ್ವಗಳನ್ನು ಬಿತ್ತಿದ ಬಸವಣ್ಣನವರ ಚಿಂತನೆಗಳು ಕೇವಲ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಲ್ಲ. ಜಗತ್ತಿನ ಒಳಿತಿಗಾಗಿ ಶ್ರಮಿಸಿದ ಅವರ ವಿಚಾರಗಳಿಗೆ ಜಾತಿಯ ಲೇಪ ಹಚ್ಚುವ ಅಗತ್ಯವಿಲ್ಲ. ಬಸವಣ್ಣನವರ ವಿಚಾರಗಳನ್ನು ಸಮಾಜದ ತಳಮಟ್ಟದ ಜನರಿಗೂ ತಲುಪಿಸುವ ಪ್ರಯತ್ನ ಆಗಿದ್ದರೆ ಈವರೆಗೆ ಸಮಾಜದಲ್ಲಿ ಸಮಾನತೆಯ ಆಶಯ ಸ್ವಲ್ಪ ಮಟ್ಟಿಗಾದರೂ ಸಾಕಾರವಾಗುತ್ತಿತ್ತು. ಬಸವಣ್ಣನವರ ವಿಚಾರಗಳನ್ನು ಕೇವಲ ಭಾಷಣಗಳಿಗಷ್ಟೇ ಸೀಮಿತಗೊಳಿಸದೇ ವಿಶ್ವದಾದ್ಯಂತ ಪರಿಚಯಿಸುವ ಕೆಲಸವಾಗಬೇಕು ಎಂದರು. ಸಮಾರಂಭದ ವೇದಿಕೆ ಮೇಲೆ ಪೂಜ್ಯ ಡಾ. ಮಾಹಾದೇವಮ್ಮಾ ತಾಯಿ ಹಾಗೂ ಪೂಜ್ಯ ಮೈತ್ರಾದೇವಿ ತಾಯಿ ರವರು ಉಪಸ್ಥಿತರಿದ್ದರು.

ಅಧ್ಯಕ್ಷತೆಯನ್ನು ರಾಚಪ್ಪಾ ಮಾಲಿ ಪಾಟೀಲ ವಹಿಸಿ, ಮಾತನಾಡಿದರು. ಸಮಾರಂಭದಲ್ಲಿ ಬಂಡೆಪ್ಪಾ ಮೂಲಗಿ, ಮಾಣಿಕಪ್ಪಾ ಹೌಶೆಟ್ಟಿ, ಅಣ್ಣೆಪ್ಪಾ ನಾಗನಕೇರಾ,

ಅನಿಲಕುಮಾರ ಸಿಂದಗಿರಿ, ಜಗನ್ನಾಥ ದೇವಣಿ, ಬಸವರಾಜ ಪೊಲೀಸ್ ಪಾಟೀಲ, ಅಮೃತಪ್ಪಾ ದೇವಣಿ, ಬಂಡೆಪ್ಪಾ ಶೇರಿ, ರಾಜಶೇಖರ ದೇವಣಿ, ಸಿದ್ರಾಮೇಶ ಧೋಳಾ ಸೇರಿದಂತೆ ಸಮಸ್ತ ಕಂದಗೋಳ ಗ್ರಾಮಸ್ಥರು ಹಾಜರಿದ್ದರು. ರೇಖಾ ಮಂಜುನಾಥ್ ನಿರೂಪಿಸಿದರು. ಮಾಹಾದೇವ ಶೆಟ್ಟಿಗಾರ್ ವಂದಿಸಿದರು.

# ರವೀಂದ್ರನಾಥ ಟ್ಯಾಗೋರ್ ಶಾಲೆಗೆ 100 ಪ್ರತಿಶತ ಫಲಿತಾಂಶ









ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: 2024-25 ನೇ ಸಾಲಿನಲ್ಲಿ ನಡೆದ 10 ನೇ ಪರೀಕ್ಷೆ 1 ರಲ್ಲಿ ರವೀಂದ್ರನಾಥ ಟ್ಯಾಗೋರ್ ಕಾನ್ವೆಂಟ್ ಪ್ರೌಢ ಶಾಲೆಗೆ ಶೇಕಡ 100 ಪ್ರತಿಶತ ಫಲಿತಾಂಶ ಬಂದಿದೆ.

ಒಟ್ಟು22 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಅದರಲ್ಲಿ 08 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ, 14 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿಉತ್ತೀರ್ಣರಾಗಿದ್ದಾರೆ.

ಕುಮಾರಿ ಮನಶ್ವಿನಿ ತಂದೆ ಜಗನ್ನಾಥ 602 (96.32%) ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನದಲ್ಲಿದ್ದಾಳೆ, ಸಾಕ್ಷಿ ತಂದೆ ಕಾಶೀನಾಥ 600 (96.00%), ಪಡೆದು ಶಾಲೆಗೆ ದ್ವಿತೀಯ ಸ್ಥಾನದಲ್ಲಿದ್ದಾಳೆ, ಕಾವ್ಯ ತಂದೆ ರಾಜಕುಮಾರ್ 555 (88.80%), ಯೋಹಾನ ತಂದೆ ಪ್ರಕಾಶ 552 (88.32%), ವರ್ಷಿಣಿ ತಂದೆ ನಾಗಯ್ಯಾ 548 (87.68%), ಆದಿತ್ಯ ತಂದೆ ರಾಜಕುಮಾರ್ 538 (86.08%), ಮಹೇಶ್ವರಿ ತಂದೆ ಅನೀಲರೆಡ್ಡಿ 536 (85.76%), ಸಯ್ಯದ್ ಫರಿದ್ ಸಾಬ 527 (84.32%) ಅಂಕಗಳನ್ನುಪಡೆದಿದ್ದಾರೆ.

ವಿದ್ಯಾರ್ಥಿನಿ ಮನಶ್ವಿನಿ ತಂದೆ ಜಗನ್ನಾಥ ಶಾಲೆಗೆ ಅತಿ ಹೆಚ್ಚು ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ, ಈ ಸಾಧನೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗು ಎಲ್ಲಾ ಶಿಕ್ಷಕರಿಗೆ ಶಾಲಾ ಆಡಳಿತ ಮಂಡಳಿಯ ಮಹಾ ಪೋಷಕರಾದ ರಾಜಣ್ಣ ಹುಡುಗಿಕರ್, ಸಂಸ್ಥೆಯ ಅಧ್ಯಕ್ಷರಾದ ಸುರೇಂದ್ರನಾಥ ಹುಡುಗಿಕರ್ ಹಾಗೂ ಕಾರ್ಯದರ್ಶಿಗಳಾದ ವೀರೇಂದ್ರನಾಥ ಹುಡುಗಿಕರ್ ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಮಾನವೀಯತೆಯೇ ಬಸವಧರ್ಮದ ಜೀವಾಳ: ಎಸ್ ದಿವಾಕರ್ ಅಭಿಮತ

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಮೆ 2 ದೀನರ, ದು:ಖಿತರ, ನೊಂದವರ, ಪತೀತರ ಸೇವೆಯನ್ನು ಮಾಡಿದ ಬಸವಣ್ಣನವರು ಮಾನವೀಯತೆಯೇ ಧರ್ಮದ ಜೀವಾಳ ಎಂದು ಭಾವಿಸಿದ್ದರು ಎಂದು ನಿವೃತ್ತ ಕೆ ಎ ಎಸ್ ಅಧಿಕಾರಿ ಎಸ್ ದಿವಾಕರ್ ಅಭಿಪ್ರಾಯ ಪಟ್ಟರು.

ತಾಲೂಕಿನ ಗುಣತೀರ್ಥವಾಡಿ ಕಲ್ಯಾಣ ಮಹಾಮನೆಯಲ್ಲಿ ಆಯೋಜಿಸಿದ್ದ 892ನೇ ಬಸವ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಈ ಜಗತ್ತಿನಲ್ಲಿ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ, ಆರ್ಥಿಕ ಕ್ಷೇತ್ರದಲ್ಲಿದ್ದ ಅಸಮಾನತೆ ತಾಂಡವವಾಡುತ್ತಿದ್ದಾಗ ಅದನ್ನು ಹೊಗಲಾಡಿಸಲು ಬಸವಣ್ಣನವರು ಮಾನವೀಯತೆಯ ಸೂತ್ರ ಹಿಡಿದು ಪ್ರಾಯೋಗಿಕವಾಗಿ ಸಮಾನತೆಯನ್ನು ತಂದರು. ಅವರ ಈ ಕಾರ್ಯಕ್ಕೆ ಸರ್ವ ಜಾತಿಯ ಜನರು ಕಲ್ಯಾಣದಲ್ಲಿ ಬಂದು ನೆಲೆ ನಿಂತು ಕಾಯಕ- ದಾಸೋಹ ಮಾಡುತ್ತ ಶರಣ- ರಾದರು. ಕೇವಲ ಶರಣರಾಗಿ ಉಳಿಯದೆ; ವಚನಗಳ ಮೂಲಕ ಮಾನವೀಯ ಸಂದೇಶಗಳನ್ನು ಕೊಟ್ಟರು ಎಂದು ಮಾರ್ಮಿಕವಾಗಿ ಹೇಳಿದರು.



ಪ್ರಿಯಂಕಾ ಎಮ್ ಪರಸಂಗ ಮಾತನಾಡಿ ಬಸವಣ್ಣನವರು ಅಪ್ಪಟ ಮಹಿಳಾವಾದಿಯಾಗಿದ್ದರಲ್ಲದೆ ಮಾತೃಪ್ರೇಮದಿಂದ ಸರ್ವರನ್ನೂ ಇಂಬಿಟ್ಟುಕೊಳ್ಳುವ ಶ್ರೇಷ್ಠಗುಣ ಹೊಂದಿದ್ದರು. ಪ್ರಾಚ್ಯ ಮತ್ತು ಪಾಶ್ಚಿಮಾತ್ಯ ವಿದ್ವಾಂಸರು ಬಸವಣ್ಣನವರ ಜೀವನ ಸಾಧನೆಗೆ ಮಾರುಹೋಗಿ ಅವರನ್ನು ವಿಶ್ವದ ಮೊದಲ ಸ್ವತಂತ್ರವಾದಿ ಎಂದು ಬಣ್ಣಿಸಿದ್ದಾರೆ ಎಂದರು.

ಸಂಗಮೇಶ ತೊಗರಖೇಡ ಮಾತನಾಡಿ ಕರ್ನಾಟಕ ಸರಕಾರ ಗುರುಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದ್ದು ಅಭಿನಂದನಾರ್ಹ ಆದರೆ ಇಷ್ಟಕ್ಕೆ ಸರಕಾರ ನಿಲ್ಲದೆ ಸರಕಾರದ ಸಚಿವರು ಮತ್ತು ಅಧಿಕಾರಿಗಳು ಭ್ರಷ್ಟಾಚಾರದಿಂದ ಮುಕ್ತರಾಗಲು ಬಸವಣ್ಣನವರ ವಚನಗಳ ಸಂದೇಶ ಪ್ರಚಾರಕ್ಕಾಗಿ ಸರಕಾರದ ಕಛೇರಿ ಮತ್ತು ಶಾಲಾ ಕಾಲೇಜುಗಳಲ್ಲಿ ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸಬೇಕೆಂದರು.

ದಿವ್ಯ ಸಾನಿಧ್ಯ ಕಲ್ಯಾಣ ಮಹಾಮನೆಯ ಪೂಜ್ಯಶ್ರೀ ಸದ್ಗುರು ಬಸವಪ್ರಭು ಸ್ವಾಮೀಜಿಯವರು ವಹಿಸಿ ಮಾತನಾಡಿ ಬಸವಣ್ಣನವರ ತತ್ವವನ್ನು ಎತ್ತಿ ಹಿಡಿದ ಕೇಂದ್ರ ಸರಕಾರ ಪ್ರಪ್ರಥಮ ಬಾರಿಗೆ ಸಂಸತ್ ಭವನದಲ್ಲಿ ಬಸವ ಜಯಂತಿಯನ್ನು ಆಚರಿಸಿರುವುದು ಹೆಮ್ಮೆಯ ಸಂಗತಿ. ಇಂದು ಇಡೀ ವಿಶ್ವವೇ ಬಸವತತ್ವದ ಕಡೆ ಮುಖ ಮಾಡುವ ಕಾಲ ಕೂಡಿ ಬಂದಿದೆ ಎಂದರಲ್ಲದೆ ಗುರು ಬಸವಣ್ಣನವರನ್ನು ಭಾರತದಲ್ಲಿ ಕೇವಲ ಉತ್ಸವಗಳಿಗೆ ಸೀಮಿತ ಮಾಡದೆ, ಅವರ ಸಂದೇಶಗಳನ್ನು ನಿಜ ಬದುಕಿನಲ್ಲಿ ಆಚರಣೆ ತರುವಂತೆ ಕರೆ ಕೊಟ್ಟರು.

ಸಿದ್ಧಪ್ಪ ಮುಗನೂರು, ಶಶಿಕಾಂತ ಮಾಳಿ ಮಾತನಾಡಿದರು.

ಪಂಚಾಯತ್ ರಾಜ್ ಕಾಲೇಜಿನ ಪ್ರಾಂಶುಪಾಲರಾದ ಸಿದ್ಧಾರ್ಥ ಬಾವಿದೊಡ್ಡಿ ಷಟಸ್ಥಲಧ್ವಜಾರೋಹಣ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಶರಣೆ ದಾನಮ್ಮ ಬಳಗ ಉದ್ಘಾಟಿಸಲಾಯಿತು. ಈ ಸಂಘಟನೆಯ ನೂತನ ಅಧ್ಯಕ್ಷರಾದ ಸುಮಿತ್ರಾದೇವಿ ದಾವಣಗಾವೆ ಮತ್ತು ಪ್ರಧಾನ ಕಾರ್ಯದರ್ಶಿ ರಾಣಿ ವಡ್ಡೆ ಜೊತೆಗೆ ಪದಾಧಿಕಾರಿಗಳಾಗಿ ಆಯ್ಕೆಯಾದ 21 ಜನಕ್ಕೆ ಸತ್ಕರಿಸಲಾಯಿತು.

ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಪ್ರಭು ಶೆಟ್ಟಿ, ತೀರ್ಥಪ್ಪ, ಅಡಿವೆಪ್ಪ ಪಟ್ನೆ, ಶಶಿಕಾಂತ ಕೋಡ್ಲಿ ಇವರನ್ನು ಸತ್ಕರಿಸಲಾಯಿತು.

ಔರಾದ್ ತಾಲೂಕಿನ ಸಂಗಮ ಗ್ರಾಮದ ಮಹಿಳೆಯರು ಆಡಿದ ಕೋಲಾಟ ಎಲ್ಲರ ಗಮನ ಸೆಳೆಯಿತು.

ಮಲ್ಲಿಕಾರ್ಜುನ ಸಂಗಮದ, ದಿಲೀಪ ಶಿಂದೆ, ಗಿರಿಜಾ ಸಿದ್ಧಣ್ಣ, ಶ್ರೀದೇವಿ ಉಜಳಂಬೆ, ರಾಮ ಮಜಿಗೆ, ಜಯಪ್ರಕಾಶ ಸದಾನಂದೆ, ನೀಲಕಂಠ ಸ್ವಾಮಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ವಿಜಯಲಕ್ಷ್ಮಿ ಕೆಂಗನಾಳ ಕಲಬುರಗಿಯವರು ವಚನಸಂಗೀತ ನಡೆಸಿಕೊಟ್ಟರು. ಪ್ರಾಸ್ತಾವಿಕವಾಗಿ ಕುಮಾರಿ ಕೀರ್ತಿ ಓಂಕಾರ ದುಬಲಗುಂಡಿ ಮಾತನಾಡಿದರು. ಸಂಗಮೇಶ ಮಾಲಿ ಪಾಟೀಲ ಸ್ವಾಗತಿಸಿದರು. ಬಸವಜ್ಯೋತಿ ನಿರೂಪಿಸಿದರು. ಭೀಮಶ್ರೀ ವಂದಿಸಿದರು.

# ತ್ರಿಪುರಾಂತಿನ ಗವಿಮಠದಲ್ಲಿ ಬಸವ ಜಯಂತಿ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ : ಮೇ 2 ಇಲ್ಲಿನ ತ್ರಿಪುರಾಂತಿನ ಇತಿಹಾಸ ಪ್ರಸಿದ್ಧ ಶ್ರೀಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಪೂಜ್ಯಶ್ರೀ ಷ. ಬ್ರ. ಡಾ. ಅಭಿನವಘನಲಿಂಗರುದ್ರಮುನಿ ಶಿವಾಚಾರ್ಯರ ದಿವ್ಯಸಾನಿಧ್ಯದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಬಸವ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಸವಂತಪ್ಪ ಮಾಲಿಪಾಟೀಲ, ಗುರುಲಿಂಗಯ್ಯಾ ಸ್ವಾಮಿ, ರೇವಣಸಿದ್ದ ಬಿರಾದಾರ, ಚಂದ್ರಶೇಖರ ಕುಂಬಾರ, ಮಹಾಂತೇಶ ಪಾಟೀಲ, ಮಲ್ಲಮ್ಮ ಗುರುಲಿಂಗಯ್ಯಾ ಸ್ವಾಮಿ, ಸಂಗಮೇಶ ಕಿಣಗಿ ಮುಂತಾದವರು ಪಾಲ್ಗೊಂಡಿದ್ದರು.

# ಗುರುಕುಲ ಶಾಲೆಗೆ ಐಶ್ವರ್ಯ ಅಗ್ರಶ್ರೇಣಿಯಲ್ಲಿ ಉತ್ತೀರ್ಣ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಗಡಿ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ನಿರ್ಮಿಸುತ್ತಿರುವ ಕನ್ನಡ ಮಾಧ್ಯಮ ಗ್ರಾಮೀಣ ಗುರುಕುಲ ಶಾಲೆ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ (ರಿ) ಭಾಲ್ಕಿ ಅಡಿಯಲ್ಲಿ ನಡೆಯುತ್ತಿರುವ ತಾಲೂಕಿನ ಕಂದಗುಳ ಗ್ರಾಮದ ಡಾ. ಚನ್ನಬಸವ ಪಟ್ಟದ್ದೇವ 'ರು ಗುರುಕುಲ ಪ್ರೌಢ ಶಾಲೆ ಎಸ್ಎಸ್ಎಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದಿದೆ. ಐಶ್ವರ್ಯ ಅಂಬಣ್ಣ 618 ಅಂಕ ಪಡೆದು 98.88% ಪ್ರತಿಶತ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ, ಭವಾನಿ ಪೆಂಟೆಪ್ಪ 587.ಅಂಕ ಪಡೆದು 93.92% ದ್ವಿತೀಯ ಸ್ಥಾನ ಪಡೆದಿದ್ದಾಳೆ, ಜ್ಯೋತಿ ರಾಮಯ್ಯ 583 ಅಂಕ ಪಡೆದು 93.28 % ಪಡೆದು ತೃತೀಯ ಸ್ಥಾನ ಪಡೆದಿದ್ದಾಳೆ ಪರೀಕ್ಷೆ ಬರೆದ 34 ವಿದ್ಯಾರ್ಥಿಗಳಲ್ಲಿ 13 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಶಂಭುಲಿಂಗ ಅಪ್ಪಾರಾವ್ 580,92.80%, ಅರ್ಜುನ್ ಸಂಜುಕುಮಾರ್ 577-92.32% ಪೂಜಾ ಮಲ್ಲಪ್ಪ 575-92.00% ಕಾವ್ಯಾ ಗೀರೀಶ್ 571-91.36% ಸುಮಿತ ಸಂತೋಷ್ 571-91.36% ಶ್ವೇತಾ ಶಿವರಾಜ್ 567-90.72% ದೇವಿಕಾ ಶಿವಕುಮಾರ 562 ರಾಧಿಕಾ ದಶರಥ 549 ಪ್ರಿಯಾಂಕಾ ಮಹದೇವ್ 545 ಪ್ರೀತಿ ರೇವಣೆಪ್ಪಾ 539 ಸುಮಿತ್ ಮಲ್ಲಿಕಾರ್ಜುನ್ 508 ನಿಖಿತಾ ಶ್ರೀಮಂತ 500 ಅಂಕಗಳನ್ನು ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ, ಮಕ್ಕಳ ಸಾಧನೆಗೆ ಮೆಚ್ಚಿ ಸನ್ಮಾನಿಸಿ ಅಭಿನಂದಿಸಿದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ನಾಡೋಜ ಡಾ ಬಸವಲಿಂಗ ಪಟ್ಟದೇವರು, ಪೀಠಾಧಿಪತಿಗಳಾದ ಗುರುಬಸವ ಪಟ್ಟದ್ದೇವರು, ಆಡಳಿತಾಧಿಕಾರಿ ಮೋಹನ್ ರೆಡ್ಡಿ, ಸ್ಥಾನಿಕ ಕಮಿಟಿಯ ಅಧ್ಯಕ್ಷ ಮಾಣಿಕರಾವ್ ಹೌಶೆಟ್ಟಿ, ಮುಖ್ಯ ಗುರುಗಳಾದ ರೇಖಾ ಮಂಜುನಾಥ್ ಚಾಳಕ್ಕನವರ ಮತ್ತು ಸಿಬ್ಬಂದಿ ವರ್ಗ, ಸ್ಥಾನಿಕ ಕಮಿಟಿಯ ಎಲ್ಲಾ ಸದಸ್ಯರು ಪಾಲಕರು ಹರ್ಷ ವ್ಯಕ್ತಪಡಿಸಿದರು.

ಜಾಹೀರಾತಿಗಾಗಿ ಇಂದೆ ಸಂಪರ್ಕಿಸಿ:9449732000

ರಾಯಣ್ಣನ ಮೂರ್ತಿ ನಿರ್ಮಾಣ ಕಾರ್ಯಕ್ಕೆ ಚಾಲನೆ

# ದೇಶಕ್ಕೆ ರಾಯಣ್ಣನ ಕೊಡುಗೆ ಅನನ್ಯ : ಗಣಪತಿ ಅಷ್ಟೂರೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ : ಸ್ವಾತಂತ್ರ್ಯ ಹೋರಾಟಗಾರ, ದೇಶಭಕ್ತ ಸಂಗೊಳ್ಳಿ ರಾಯಣ್ಣ ದೇಶಕ್ಕೆ ನೀಡಿದ ಕೊಡುಗೆ ಅನನ್ಯವಾಗಿದೆ ಎಂದು ಹುಮನಾಬಾದ್ ತಾಲೂಕಿನ ಭಾರತೀಯ ದಲಿತ ಪ್ಯಾಂಥರ್ ಸಂಘಟನೆ ಅಧ್ಯಕ್ಷ ಗಣಪತಿ ಅಷ್ಟೂರೆ ಹೇಳಿದರು.

ತಾಲೂಕಿನ ರಾಂಪೂರ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಸಂಘದ ವತಿಯಿಂದ ನಡೆದ ಸಂಗೊಳ್ಳಿ ರಾಯಣ್ಣನ ನೂತನ ವೃತ್ತ ಹಾಗೂ ಮೂರ್ತಿ ನಿರ್ಮಾಣ ಕಾರ್ಯಕ್ರಮಕ್ಕೆ ಚಾಲನೆ ನೀಡ ಮಾತನಾಡಿದರು.

ಗ್ರಾಮೀಣ ಭಾಗದ ಹಳ್ಳಿಗಳಲ್ಲಿ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ನೂತನ ವೃತ್ತ ಹಾಗೂ ಮೂರ್ತಿ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡುತ್ತಿರುವುದು ನನ್ನ ಜೀವನದ ಬಹುದೊಡ್ಡ ಸೌಭಾಗ್ಯವಾಗಿದೆ. ರಾಯಣ್ಣನ ಅಭಿಮಾನಿಗಳು ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುವುದರ ಜತೆಗೆ ಅವರ ದೇಶ ಪ್ರೇಮ ಮತ್ತು ಹೋರಾಟದ ಕುರಿತು ಜಾಗೃತಿ ಮೂಡಿಸುವ ಪ್ರಯತ್ನ ಮಾಡಬೇಕು ಎಂದರು.

ಈ ವೇಳೆ ಯುವ ಮುಖಂಡರಾದ ಉಮೇಶ ಪೂಜಾರಿ, ಗೌತಮ ಜಾನವೀರ, ವಿಠಲ ಶಿವನಾಯಕ, ಉಮಾಕಾಂತ ಹಲಗೆ, ರಾಮಶೆಟ್ಟಿ ಪೋಲಾ, ಸಂಜುಕುಮಾರ ಬಾವಿಕಟ್ಟಿ, ನಾಗೇಶ ಪೂಜಾರಿ, ಶರಣು ಕಾಂಬಳೆ, ಕರಣ ಪೂಜಾರಿ, ರಾಹುಲ್ ಬಾವಿಕಟ್ಟಿ ಇದ್ದರು.

ಎನ್ಎಸ್ಎಸ್ ವಾರ್ಷಿಕ ಶಿಬಿರ ಉದ್ಘಾಟನೆ

# ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಯಾವುದೇ ಸಾಧನೆ ಮಾಡಲು ಸಾಧ್ಯ: ಡಾ. ಚಂದ್ರಶೇಖರ್ ಪಾಟೀಲ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2024-25 ನೇ ಸಾಲಿನ ಎನ್ಎಸ್ಎಸ್ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಕಾರ್ಯಕ್ರಮ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್ ಸಸಿಗೆ ನೀರು ಹಾಕುವ ಮೂಲಕ ಚಾಲನೆ ನೀಡುತ್ತಾ ಮಾತನಾಡಿದ ಅವರು ವಿದ್ಯಾರ್ಥಿಗಳು ಆಧುನಿಕ ಯುಗದಲ್ಲಿ ಶ್ರಮದಾನದ ಬಗ್ಗೆ ಜಾಗ್ರತಿರಾಗಬೇಕಾಗಿದೆ. ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಎಂತಹ ಸಾಧನೆ ಮಾಡಲು ಸಾಧ್ಯ, ಹಳ್ಳಿಯ ಪ್ರತಿಭೆಗೆ ಸೂಕ್ತ ಅವಕಾಶ ಕಲ್ಪಿಸುವ ವ್ಯವಸ್ಥೆಯಾಗಬೇಕಾಗಿದೆ ಎಂದು ನುಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಜಯಕುಮಾರ ಎ. ಸಿಂಧೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಡಾ. ರವೀಂದ್ರನಾಥ ಗಬಾಡೆ, ಪುರಸಭೆ ಮಾಜಿ ಸದಸ್ಯ ಮಲ್ಲಿಕಾರ್ಜುನ ಪಾಟೀಲ್ ಡಾ. ಸತೀಷಕುಮಾರ ಡೋಂಗರೆ, ಡಾ. ಕೆ.ಶಿವಕುಮಾರ, ಡಾ. ವೀರಶೆಟ್ಟಿ ಮೈಲೂರಕರ, ಡಾ. ಮೀನಾಕುಮಾರ ಪಾಟೀಲ್, ಶಾಂತಕುಮಾರ ಪಾಟೀಲ್, ರವೀಂದ್ರ ಟಿಳೆಕರ್, ಅನೀಲಕುಮಾರ ಎಂ. ಸಿಂಧೆ, ಡಾ. ಯೇಸುಮಿತ್ರ, ಡಾ. ಶೇಷರಾವ, ಡಾ. ಸೈದಾಬಾನು, ರಮೇಶ ಬಿರಾದರ್, ಪವನಕುಮಾರ ಸೇರಿದಂತೆ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಡಾ.ಬಾಬು ಜಗಜೀವನರಾಮ ಭವನ ಕಟ್ಟಡ ಕಾಮಗಾರಿಗಾಗಿ

# 5 ಕೋಟಿ ವಿಶೇಷ ಅನುದಾನ ಮಂಜೂರು ಮಾಡಲು ಕೆಪಿಸಿಸಿ ಕಾರ್ಯದರ್ಶಿ ಘೋಡೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 02 :- ಬೀದರ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಮ ಭವನ ನಿರ್ಮಿಸಲು ಬೀದರ ನಗರದ ಚಿಕ ಪೇಟ್ ಗ್ರಾಮದ ಜಮೀನ ಸರ್ವೆ ನಂ.61 ರಲ್ಲಿ ವಿಸ್ತೀರ್ಣ 1 ಎಕರೆ ಜಮೀನ ಸರ್ಕಾರದ ವತಿಯಿಂದ ಮಂಜೂರು ಮಾಡಲಾಗಿರುತ್ತದೆ.

ಬೀದರ ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಈ ಸಮುದಾಯ ಭವನಕ್ಕೆ ಸರ್ಕಾರದಿಂದ ವಿಶೇಷ ಅನುದಾನದಲ್ಲಿ ರೂ.5.00 ಕೋಟಿ ಮೊತ್ತ ಮಂಜೂರು ಮಾಡಲು ಕೆಪಿಸಿಸಿ ಕಾರ್ಯದರ್ಶಿ ಕಾರ್ಮಿಕ ವಿಭಾಗ ಜಾನಸನ ಘೋಡೆ ಅವರು ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಮತ್ತು ಪೌರಾಡಳಿತ ಸಚಿವರಿಗೆ ಈ ಕುರಿತು ಪ್ರತ್ಯೇಕ ಮನವಿ ಪತ್ರ ಸಲ್ಲಿಸಿದ್ದಾರೆ.

# ಆರಾಧನಾ ಅಶೋಕ್ ದಂಡೆ ಅಗ್ರ ಶ್ರೇಣಿಯಲ್ಲಿ ಉತ್ತಿರ್ಣ



ಮಲ್ಲಮ್ಮ ನುಡಿ ವಾರ್ತೆ

ಹುಮ್ನಾಬಾದ್ : ಪಟ್ಟಣದ ರಾಮ ಮತ್ತು ರಾಜ ಆಂಗ್ಲ ಮಾಧ್ಯಮ ಪ್ರೌಢಶಾಲೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಆರಾಧನಾ ಅಶೋಕ್ ದಂಡೆ ಈ ವಿದ್ಯಾರ್ಥಿನಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 607% ಅಂಕ ಪಡೆದು ಅಗ್ರ ಶ್ರೇಣಿಯಲ್ಲಿಉತ್ತೀರ್ಣಗೊಂಡಿದ್ದಾಳೆ. ಹಿಂದಿಯಲ್ಲಿ 100 ಕ್ಕೆ 100 ಅಂಕ ಪಡೆದರೆ ಗಣಿತದಲ್ಲಿ 100 ಕ್ಕೆ 99 ಅಂಕಪಟ್ಟಿದ್ದಾಳೆ ತಾಲೂಕಿನ ಸರ್ಕಾರಿ ಪ್ರೌಢಶಾಲೆ ದುಬಲಗುಂಡಿ ಮುಖ್ಯಗುರುಗಳಾದ ಅಶೋಕ್ ದಂಡೆಯವರ ಸುಪುತ್ರಿಯಾಗಿದ್ದಾಳೆ.

ವಿದ್ಯಾರ್ಥಿಯ ಸಾಧನೆಗೆ ವಿವೇಕಾನಂದಸ ಶಿಕ್ಷಣ ಸಂಸ್ಥೆ ಅಧ್ಯಕ್ಷರು ಮತ್ತು ರಾಮ ಮತ್ತು ರಾಜ್ ಪ್ರೌಢಶಾಲೆ ಮುಖ್ಯಗುರುಗಳು ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ, ವಿದ್ಯಾರ್ಥಿಯಗೆ ಅಭಿನಂದನೆ ಸಲ್ಲಿಸಿದ್ದಾರೆ.

# ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರ ತರಬೇತಿ ಕಾರ್ಯಗಾರ

ಬಳ್ಳಾರಿ,ಮೇ02-ರಾಜ್ಯಬಾಲಭವನ ಸೊಸೈಟಿ, ಬೆಂಗಳೂರು ಇವರ ವತಿಯಿಂದ ಜಿಲ್ಲಾ ಮಟ್ಟದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಿದ್ದು, ಶಿಬಿರವು 15 ದಿನಗಳ ಕಾಲ ಬೆಳಿಗ್ಗೆ 09 ಗಂಟೆಯಿಂದ ಮಧ್ಯಾಹ್ನ 1:30 ಗಂಟೆಯ ವರೆಗೆ ನಡೆಯಲಿದೆ. ಶಿಬಿರವು ವಿವಿಧ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಾದ ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಸಮೂಹ ಸಂಗೀತ, ಸಮೂಹ ನೃತ್ಯ, ಯೋಗ, ಕರಾಟೆ, ಇತರೆ ಚಟುವಟಿಕೆಗಳು ನಡೆಯಲಿದ್ದು, ಕಾರ್ಯಕ್ರಮಕ್ಕೆ 05 ರಿಂದ 16 ವರ್ಷದೊಳಗಿನ ಆಸಕ್ತಿಯುಳ್ಳ ಸರಕಾರಿ ಶಾಲೆ ಮಕ್ಕಳು, ಗ್ರಾಮೀಣ ಪ್ರದೇಶ ಹಾಗೂ ಸೌಲಭ್ಯ ವಂಚಿತ ಮಕ್ಕಳಿಗೆ ಸುಧಾರಣಾ ಸಂಸ್ಥೆಗಳ ಬಾಲಕರು-ಬಾಲಕಿಯರ ಬಾಲ ಮಂದಿರದ ಮಕ್ಕಳಿಗೆ ಮೊದಲನೇ ಆದ್ಯತೆ ಹಾಗೂ ಬೇಸಿಗೆ ಶಿಬಿರದ ಚಟುವಟಿಕೆಗಳಲ್ಲಿ 100 ಮಕ್ಕಳಿಗೆ ಮಾತ್ರ ಭಾಗವಹಿಸಲು ಅವಕಾಶ ಇರುತ್ತದೆ. ಹಾಗಾಗಿ ಮೇ 12 ರಂದು ಸಂಜೆ 05 ಗಂಟೆಯೊಳಗಾಗಿ ನೋಂದಾಯಿಸಿಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು.

ಮೊದಲು ಬಂದು ತಮ್ಮ ಮಕ್ಕಳ ಹೆಸರು ನೋಂದಾಯಿಸಿದಲ್ಲಿ ಬೇಸಿಗೆ ಶಿಬಿರ ಚಟುವಟಿಕೆಗಳಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.08392-266219, ಕಚೇರಿ ಸಹಾಯಕ ಜೀರ್ ಮಲ್ಲಿಕಾರ್ಜುನ (ಮೊ.9741965198) ಇವರಿಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಸ್ ನಿಲ್ದಾಣದ ಮುಂದೆ ಬಾಯಿತೆರೆದ ಬಾವಿ! ಕಂಡು ಕೆಳರಿಯದಂತೆ ಕುಳಿತ ವ್ಯವಸ್ಥಾಪಕ ಭೋವಿ.



ಮಲ್ಲಮ್ಮ ನುಡಿ ವಾರ್ತೆ

ಅಫಜಲಪುರ: ತಾಲೂಕಿನ ಬಸ್ ನಿಲ್ದಾಣದಿಂದ ಪ್ರತಿನಿತ್ಯ ಸಾವಿರಾರು ಬಸಗಳು ಸಂಚಾರ ಮಾಡುತ್ತವೆ.ಆದರೆ ಅಫಜಲಪುರ ಪಟ್ಟಣದಲ್ಲಿರುವ ಬಸ್ ನಿಲ್ದಾಣದ ಮುಖ್ಯದ್ವಾರದಲ್ಲಿ ಬಾಯಿ ಆಕಾರದಲ್ಲಿ ಬಾಯಿ ತೆರೆದ ತೆಗ್ಗು ಗುಂಡಿಯ ಮುಚ್ಚುವ ಗೋಜಿಗೆ ಹೋಗದ ಬಸ್ ಘಟಕ ವ್ಯವಸ್ಥಾಪಕ ಎ.ಎ.ಭೋವಿ ಅವರಿಗೆ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

ಕಳೆದ ಒಂದು ವಾರದಿಂದ ಬಸ್ ನಿಲ್ದಾಣದ ಮುಖ್ಯದ್ವಾರದಲ್ಲಿ ಅಷ್ಟುದೊಡ್ಡ ಗುಂಡಿ ಬಾಯಿ ತೆ-ರೆದರೂ, ಅಧಿಕಾರಿಗಳಾದವರು ಸೌಜನ್ಯಕ್ಕೂ ತಾತ್ಕಾಲಿಕ ಪರಿಹಾರವೂ ಮಾಡದೆ ಮೊಂಡುತನದ ಅಧಿಕಾರ ಮಾಡುತ್ತಿರುವುದು ಸಂಚಾರಿಕರಿಗೆ ಹಾಗೂ ಸಾರ್ವಜನಿಕರ ಕೋಪಕ್ಕೆ ಕಾರಣವಾಗಿದೆ.ಎರಡು ದಿನಗಳ ಹಿಂದೆ ಕಲಬುರಗಿ ಯಿಂದ ವಿಜಯಪುರಕ್ಕೆ ಹೊರಣ ಬಸ್ಸು ತೆಗ್ಗು ಗುಂಡಿಯಲ್ಲಿ ಮುಂದಿನ ಚಕ್ರಗಳು ಸಿಕ್ಕಿಬಿದ್ದು ಬಸ್ಸಿನಲ್ಲಿರುವ ಪ್ರಯಾಣಿಕರಿಗೆ ಆತಂಕ ಉಂಟು ಮಾಡಿರುವ ಘಟನೆ ನಡೆದಿತ್ತು. ಆದರೂ ಸಹ ಅದರ ಪರಿಹಾರಕ್ಕೆ ಯಾರೂ ಕೂಡಾ ಬಂದಿಲ್ಲ. ಕೂಡಲೇ ವ್ಯವಸ್ಥಾಪಕರು ತಗ್ಗು ಗುಂಡಿ ಮುಚ್ಚಿ ಶಾಸ್ವತ ಪರಿಹಾರ ಮಾಡುತ್ತಾರೋ ಇಲ್ಲ ಇನ್ನೂ ಬಸ್ ಗುಂಡಿಗೆ ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗುವದನ್ನು ನೋಡುತ್ತಾ ಕುಳಿತುಕೊಳ್ಳುತ್ತಾರೋ ಕಾದು ನೋಡೋಣ..

## ಭಾಲ್ಕಿ ತಾಲೂಕಿನಲ್ಲಿ ಒಳ ಮೀಸಲಾತಿ ದತ್ತಾಂಶ ಮೇ 5 ರಿಂದ ಸಮೀಕ್ಷೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ತಾಲೂಕಿನಲ್ಲಿ ಮೇ 5 ರಿಂದ 17ರ ವರೆಗೆ ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣ ಕುರಿತು ನ್ಯಾಯಮೂರ್ತಿ ಎಚ್. ಎನ್.ನಾಗಮೋಹನ್ ದಾಸ್ ಅವರ ಏಕಸದಸ್ಯ ವಿಚಾರಣಾ ಆಯೋಗದಿಂದದತ್ತಾಂಶಸಂಗ್ರಹಿಸುವ ಸಮೀಕ್ಷೆ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಸತೀಶ್ ಸಂಗನ್ ಹೇಳಿದರು.

ಪಟ್ಟಣದ ಟೌನ್‌ಹಾಲ್ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪರಿಶಿಷ್ಟ ಜಾತಿ ಒಳ ಮೀಸಲಾತಿ ವರ್ಗೀಕರಣ, ಸಮೀಕ್ಷೆ ಕುರಿತು ಮೇಲ್ವಿಚಾರಕರು ಮತ್ತು ಗಣತಿದಾರರಿಗೆ ನಡೆದ ಒಂದು ದಿನದ ತರಬೇತಿ ಕಾರ್ಯಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮೇಲ್ವಾಚರಕರು ಮತ್ತು ಗಣತಿ-ದಾರರು ತರಬೇತಿಯಲ್ಲಿ ಸಂಪೂರ್ಣ ಮಾಹಿತಿ ಪಡೆದು ತಾಲೂಕಿನಲ್ಲಿ ಸಮೀಕ್ಷೆ ನಡೆಯುವ ಸಂದರ್ಭದಲ್ಲಿ ಯಾವುದೇ ಪರಿಶಿಷ್ಟ ಜಾತಿಯ ಕುಟುಂಬವು ಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಕುಟುಂಬದ ಉಪಜಾತಿ, ಆರ್ಥಿಕ ಮತ್ತು ಸಾಮಾಜಿಕ ಮಟ್ಟ ಸೇರಿದಂತೆ ಸಮೀಕ್ಷೆಯಲ್ಲಿ ನೀಡಲಾಗುವ ಎಲ್ಲ ಪ್ರಶ್ನೆಗಳಿಗೆ ನಿಖರ ಉತ್ತರ ಪಡೆದು ಅಪಲೋಡ್ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಪ್ಪ ಹಳ್ಳದ, ಪುರಸಭೆ ಮುಖ್ಯಾಧಿಕಾರಿ ಸಂಗಮೇಶ ಕಾರಬಾರಿ, ಸಿಡಿಪಿಓ ಶ್ರೀನಿವಾಸ ಬಾಳವಾಲೆ ಸೇರಿದಂತೆ ಹಲವರು ಇದ್ದರು.

ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿ:

## ಭೌತಿಕವಾಗಿ ತೊಗರಿ ಖರೀದಿಗೆ ಮೇ 31ರ ವರೆಗೆ ಕಾಲಾವಧಿ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.02-ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ 2024-25ನೇ ಸಾಲಿನ ಮುಂಗಾರು ಹಂಗಾಮಿನ ತೊಗರಿ ಖರೀದಿಗೆ ಈಗಾಗಲೆ ನೋಂದಣಿ ಮಾಡಿಕೊಂಡು ಮಾರಾಟ ಮಾಡದೆ ಇರುವ 15,067 ರೈತರಿಂದ ಭೌತಿಕ ತೊಗರಿ ಖರೀದಿ ಮಾಡಲು ಕಾಲಾವಧಿಯನ್ನು ಮೇ 1ರಿಂದ 31ರ ವರೆಗೆ ಅಂತಿಮವಾಗಿ ವಿಸ್ತರಿಸಿದ್ದು, ರೈತರು ಲಾಭ ಪಡೆಯಬೇಕೆಂದು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಮನವಿ ಮಾಡಿದ್ದಾರೆ.

ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್ಗ ತೊಗರಿಗೆ 7,550 ರೂ. ನಿಗದಿಪಡಿಸಿದ್ದು, ಇದಕ್ಕೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹ ಧನ 450 ರೂ. ಸೇರಿ ಒಟ್ಟು ಪ್ರತಿ ಕ್ವಿಂಟಾಲ್‌ಗೆ 8,000 ರೂ. ದರದಂತೆ ಪ್ರತಿ ಎಕರೆಗೆ 4 ಕ್ವಿಂಟಾಲ್ ಮತ್ತು ಪ್ರತಿ ರೈತರಿಂದ ಗರಿಷ್ಠ 40 ಕ್ವಿಂಟಲ್ ಎಫ‌ಎಕ್ಯೂ ಗುಣಮಟ್ಟದ ತೊಗರಿಯನ್ನು ಖರೀದಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಮೂಲಕ ಜಿಲ್ಲೆಯಲ್ಲಿ ಒಟ್ಟು 189 ಖರೀದಿ ಕೇಂದ್ರಗಳನ್ನು ತೆರೆದು ರೈತರಿಂದ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಖರೀದಿ ಮಾಡಲಾಗುತ್ತಿದೆ ಎಂದು ಡಿ.ಸಿ. ತಿಳಿಸಿದ್ದಾರೆ.

ಇನ್ನು ಇದುವರೆಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಸಂಸ್ಥೆಯವರು 33,518 ಮತ್ತು ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯವರು 14,730 ರೈತರು ನೊಂದಣಿ ಕೈಗೊಂಡಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟಾರೆ 48,248 ರೈತರು ನೋಂದಣಿ ಮಾಡಿಕೊಂಡಿದ್ದು, ಇದರಲ್ಲಿ 33,181 ರೈತರಿಂದ 4,98,303 ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗಿರುತ್ತದೆ. ನೋಂದಣಿ ಮಾಡಿಕೊಂಡು ಮಾರಾಟ ಮಾಡದೆ ಬಾಕಿ ಉಳಿದುಕೊಂಡ 15,067 ರೈತರಿಂದ ಭೌತಿಕ ತೊಗರಿ ಖರೀದಿಗೆ ಕಾಲಾವಧಿಯನ್ನು ಮೇ 31ರ ವರೆಗೆ ವಿಸ್ತರಿಸಲಾಗಿದೆ.

ಬೆಳೆಗಾರ ರೈತನಿಗೆ ಗಾಯದ ಮೇಲೆ ಬರೆ ಎಳೆದ ಕೇಂದ್ರ ಸರ್ಕಾರ.ಕಬ್ಬು

## ಬೆಳೆಗಾರ ರೈತನಿಗೆ ಗಾಯದ ಮೇಲೆ ಬರೆ ಎಳೆದ ಕೇಂದ್ರ ಸರ್ಕಾರ ಕಬ್ಬು



ಮಲ್ಲಮ್ಮ ನುಡಿ ವಾರ್ತೆ

ಅಫಜಲಪುರ: ಕೇಂದ್ರ ಸರ್ಕಾರ 2025,, 26 ನೇ ಸಾಲಿನ ಕಬ್ಬಿಗೆ ಅವೈಜ್ಞಾನಿಕ ಬೆಲೆ ನಿಗದಿಪಡಿಸಿರುವುದು ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯ ಕಬು ಬೆಳೆಗಾರರ ಸಂಘದ ಜಿಲ್ಲಾ ಅಧ್ಯಕ್ಷರಾದ ರಮೇಶ್ ಎಸ್ ಹೂಗಾರ ಅವರು

ರಾಜ್ಯದಲ್ಲಿ ಮತ್ತು ದೇಶದಲ್ಲಿ ರೈತ ಸಂಕಷ್ಟದ ಜೀವನ ಸಾಗಿಸುತ್ತಿದ್ದು ರೈತ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಸಾಲದ ಸುಳಿಗೆ ಸಿಲುಕಿ ಸಾಯುವ ಪರಿಸ್ಥಿತಿಯಲ್ಲೂ ಕೂಡ ಕೇಂದ್ರ ಸರ್ಕಾರ 2025,,26ನೇ ಸಾಲಿಗೆ ಕಬ್ಬಿನ ಬೆಲೆ ಕೇವಲ ಒಂದು ಕ್ವಿಂಟಲ್ ಗೆ 15 ರೂಪಾಯಿ ನಿಗದಿ ಮಾಡಿ 10, ಪೈಂಟ್ 25 ಸಕ್ಕರೆ ಇಳುವರಿ ಬರುವ ಮಾನದಂಡಕ್ಕೆ ಪ್ರತಿ ಟನ್ ಕಬ್ಬಿಗೆ ಕಟೌವು ಮತ್ತು ಸಾಗಾಣಿಕೆ ಒಳಗೊಂಡಂತೆ 3550 ರೂಪಾಯಿ ನಿಗದಿಪಡಿಸಿದೆ ಇದು ರೈತನಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ರೈತ ಕಬ್ಬು ಬೆಳೆಯಲು ಆಗುವ ಖರ್ಚು ವೆಚ್ಚವನ್ನು ಲೆಕ್ಕಿಸದೆ ಅ ವೈಜ್ಞಾನಿಕವಾಗಿ ಬೆಲೆ ನಿಗದಿಪಡಿಸಿರುವುದನ್ನು ರಾಜ್ಯ ಕಬ್ಬು ಬೆಳೆಗಾರರ ಸಂಘ ಕಲಬುರ್ಗಿ ವತಿಯಿಂದ ಖಂಡಿಸುತ್ತೇವೆ ಕಾರಣ ಕೂಡಲೇ ಎಫ್,ಆರ್,ಪಿ ಬೆಲೆಯನ್ನು ಮರುಪರಿಶೀಲನೆ ಮಾಡಿ ರೈತರಿಗೆ ನ್ಯಾಯ ಸಮ್ಮತ ಬೆಲೆ ಕನಿಷ್ಠ ಎಫ್ ಆರ್ ಪಿ 5000 ನಿಗದಿಪಡಿಸಬೇಕೆಂದು ಒತ್ತಾಯಿಸುತ್ತೇನೆ ಕೇಂದ್ರ ಸರ್ಕಾರದ ಎಫ್ಆರ್ಪಿ ಬೆಲೆ ಆಧಾರವಾಗಿಟ್ಟುಕೊಂಡು ಸಕ್ಕರೆ ಕಾರ್ಖಾನೆಗಳು ಇಳುವರಿಯಲ್ಲಿ ಸರ್ಕಾರಕ್ಕೆ ತಪ್ಪು ಮಾಹಿತಿ ತೋರಿಸಿ ರೈತರಿಗೆ ಕಡಿಮೆ ಬೆಲೆ ನೀಡುವ ಹುನ್ನಾರ ಮಾಡುತ್ತಾರೆ ಆ ಕಾರಣಕ್ಕಾಗಿ ರಾಜ್ಯ ಸರ್ಕಾರ ಕೂಡ ಸಕ್ಕರೆ ಕಾರ್ಖಾನೆಗಳ ಮೇಲೆ ಸೂಕ್ತ ನಿಗವಹಿಸಿ ತೂಕದಲ್ಲಿ ಇಳುವರಿಯಲ್ಲಿ ಮೋಸ ಆಗುವುದನ್ನು ತಡೆಯಬೇಕು ಮತ್ತು ಕೇಂದ್ರ ಸರ್ಕಾರದ ಎಫ್ ಆರ್ ಪಿ ಹಣ ಬಿಟ್ಟು ರಾಜ್ಯ ಸರ್ಕಾರ ಕೂಡ ಹೆಚ್ಚುವರಿ ಬೆಲೆ ನಿಗದಿಪಡಿಸಲು ಮುಂದಾಗಬೇಕು. ರಾಜ್ಯದಲ್ಲಿ ತೊಗರಿ ಬೆಳೆ ನೆಟಿರೋಗ ಆವರಿಸಿ ತೊಗರಿ ಇಳುವರಿಯಲ್ಲಿ ಕುಂಠಿತವಾದರೂ ಕೂಡ ರೈತನಿಗೆ ಸರ್ಕಾರ ಪರಿಹಾರ ಕೊಡುತ್ತಿಲ್ಲ ಮತ್ತು ವಿಮೆ ಕಟ್ಟಿದ ರೈತರಿಗೆ ಬೆಳೆ ವಿಮೆ ಕೂಡಾ ಸಂದಾಯವಾಗುತ್ತಿಲ್ಲ

ರೈತನ ಸಂಕಷ್ಟವನ್ನು ಅರಿತುಕೊಂಡು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ರೈತರ ಏಳಿಗೆಯನ್ನು ಬಯಸಬೇಕು ಎಂದರು.

ಮೇ 5 ರಿಂದ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಕುರಿತು

## ಗಣತಿದಾರರಿಂದ ಮನೆ ಮನೆಗೆ ತೆರಳಿ ಸಮೀಕ್ಷೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ.ಮೇ.02.-ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಕುರಿತಂತೆ ಗಣತಿದಾರರು 2025ರ ಮೇ 5 ರಿಂದ 24 ರವರೆಗೆ ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸಲಿದ್ದಾರೆ ಎಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

ಗಣತಿದಾರರು ಸಮೀಕ್ಷೆ ನಡೆಸುವ ಸಂದರ್ಭದಲ್ಲಿ ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ವಿವಿಧ ಸಂಘ-ಸಂಸ್ಥೆಗಳ ಅಧ್ಯಕ್ಷರು/ ಪದಾಧಿಕಾರಿಗಳು, ಸಾರ್ವಜನಿಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಗಣತಿದಾರರಿಗೆ ಸಹಕರಿಸಿ ಈ ಸಮೀಕ್ಷೆಯ ಯಶಸ್ವಿಗೊಳಿಸಲು ಅವರು ಕೋರಿದ್ದಾರೆ.

ಈ ಸಮೀಕ್ಷೆಗಾಗಿ ಕಲಬುರಗಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಹಾಗೂ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ತಾಲೂಕಾ ಮಟ್ಟದ ಸಮನ್ವಯ ಸಮಿತಿ ರಚಿಸಲಾಗಿದೆ. ಈ ಸಮೀಕ್ಷೆ ಕುರಿತು ಈಗಾಗಲೇ ಗಣತಿ-ದಾರರಿಗೆ ಮತ್ತು ಮೇಲ್ವಿಚಾರಕರಿಗೆ ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಲಾಗಿದೆ.

ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತಂತೆ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗವನ್ನು ರಚಿಸಲಾಗಿದೆ. ಸದರಿ ಆಯೋಗದಿಂದ ಪರಿಶಿಷ್ಟ ಜಾತಿಗಳ ವಿವಿಧ ಅಂಶಗಳ ಬಗ್ಗೆ ದತ್ತಾಂಶಗಳನ್ನು ಶೇಖರಿಸಲು ಸಮೀಕ್ಷೆಯನ್ನು ನಡೆಸಲು ತಿರ್ಮಾನಿಸಿ, ರಾಜ್ಯ ಮಟ್ಟದ, ಬಿ.ಬಿ.ಎಂ.ಪಿ, ಜಿಲ್ಲಾ ಮಟ್ಟದ ಮತ್ತು ತಾಲೂಕಾ ಮಟ್ಟದ ಸಮನ್ವಯ ಸಮಿತಿಗಳನ್ನು ಸರಕಾರ ರಚಿಸಿ ಆದೇಶಿಸಿದೆ.

ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿರುವ ಜನರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಔದ್ಯೋಗಿಕ ಪ್ರಾತಿನಿಧ್ಯತೆ ಇತ್ಯಾದಿ ಸ್ಥಿತಿಗಳ ಬಗ್ಗೆ ವೈಜ್ಞಾನಿಕವಾಗಿ ಮತ್ತು ವಾಸ್ತವಿಕ ಮಾಹಿತಿ ಪಡೆದುಕೊಳ್ಳುವುದು ಈ ಸಮೀಕ್ಷೆಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದ್ದಾರೆ.

## ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಇರುವ ಜಾತಿಗಳನ್ನು ಉಪ ವರ್ಗೀಕರಣ ಮಾಡಿ



ಮಲ್ಲಮ್ಮ ನುಡಿ ವಾರ್ತೆ

ಕಲ್ಬುರ್ಗಿ:ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ (ರಿ.) ಕಲಬುರಗಿ ಜಿಲ್ಲಾ ಘಟಕ ಜಾತಿಸರ್ವೋಚ್ಚ ನ್ಯಾಯಲಯವು ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ನೀಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆ ಮತ್ತು ಪಲಶಿಷ್ಟ ಜಾತಿಯ ಪಟ್ಟಿಯಲ್ಲಿ ಇರುವ ಜಾತಿಗಳನ್ನು ಉಪ ವರ್ಗೀಕರಣ ಮಾಡಿ ಒಳಮೀಸಲಾತಿಯನ್ನು ನೀಡಬಹುದು ಎಂದು ದಿನಾಂಕ 01.08.2024 ರಂದು ತೀರ್ಪು ನೀಡಿರುತ್ತದೆ. ಕರ್ನಾಟಕ ಸರ್ಕಾರವು ಒಳಮೀಸಲಾತಿಯನ್ನು ಜಾರಿಮಾಡಲು ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕ ವ್ಯಕ್ತಿ ವಿಚಾರಣಾ ಆಯೋಗವನ್ನು ನೇಮಿಸಿ ಒಳಮೀಸಲಾತಿಯನ್ನು ವರ್ಗೀಕರಿಸಲು ಸೂಚಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಆಯೋಗವು ಉಪ ವರ್ಗೀಕರಣಕ್ಕೆ ಅವಶ್ಯವಿರುವ ದತ್ತಾಂಶಗಳನ್ನು ಸಂಗ್ರಹಿಸಲು ಸಮೀಕ್ಷೆಯನ್ನು ಕೈಗೊಳ್ಳಬೇಕೆಂದು ದಿನಾಂಕ 27.03.2025 ರಂದು ಸಲ್ಲಿಸಿದ ಮಧ್ಯಂತರ ವರದಿಯಲ್ಲಿ ಉದ್ದೇಶಿಸಿರುತ್ತದೆ.

ಹಾಗಾಗಿ ಒಳಮೀಸಲಾತಿಗಾಗಿ ಸಂಬಂಧಪಟ್ಟ ಜಾತಿಗಳ ಸಮೀಕ್ಷೆ ಮಾಡಲು ಸರ್ಕಾರ ಆದೇಶಿಸಿರುವುದು ಸ್ವಾಗತಾರ್ಹ ಹಾಗೂ ಛಲವಾದಿ ಸಮುದಾಯಕ್ಕೆ ದೊರಕಿರುವ ಬಹುದೊಡ್ಡ ಅವಕಾಶ. ಈ ನಿಟ್ಟಿನಲ್ಲಿ ಹೋರಾಟ ನಡೆಸಿದ ಸಮುದಾಯದ ನಾಯಕರುಗಳಿಗೆ ಮತ್ತು ಎಲ್ಲರಿಗೂ ಸಮುದಾಯ ಚಿರರುಣಿಯಾಗಿದೆ. ಆದ್ದರಿಂದ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾವು ಕರ್ನಾಟಕದ ಎಲ್ಲಾ ಛಲವಾದಿ ಬಂಧುಗಳಿಗೆ ಈ ಮೂಲಕ ಕೋರಿಕೊಳ್ಳುವುದೇನೆಂದರೆ.

ಐತಿಹಾಸಿಕವಾಗಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಇವು ಜಾತಿಗಳ ಹೆಸರುಗಳಲ್ಲ. ಅನೇಕ ಜಾತಿಗಳ ಗುಂಪುಗಳಿಗೆ ನೀಡಿದ ಹೆಸರುಗಳಾಗಿರುತ್ತವೆ. ಆದ್ದರಿಂದ ಕೆಲವು ಜಿಲ್ಲೆಗಳಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂದರೆ ಬಲಗೈ ಮತ್ತು ಎಡಗೈ ಎರಡು ಗುಂಪುಗಳು ಸೇರಿವೆ.

ಹಾಗಾಗಿ ಜಾತಿ ಸಮೀಕ್ಷೆಯ ಸಮಯದಲ್ಲಿ ಮೂಲ ಜಾತಿ / ಉಪ ಜಾತಿ ಕಾಲಂನಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂದು ನಮೂದಿಸದೆ ಸ್ಥಳೀಯವಾಗಿ ಆಡುಭಾಷೆಯಲ್ಲಿ ಕರೆಯಿಸಿಕೊಳ್ಳುವ ಮೂಲ ಜಾತಿ /ಉಪ ಜಾತಿಯನ್ನು ಕಡ್ಡಾಯವಾಗಿ ಹಾಗೂ ನಿಖರವಾಗಿ ನಮೂದಿಸಬೇಕೆಂದು ವಿನಂತಿಸಲಾಗುತ್ತಿದೆ. ಮುಂದೆ ಸರ್ಕಾರವು ಒಳಮೀಸಲಾತಿಯನ್ನು ಜಾತಿ ಸಮೀಕ್ಷೆಯಲ್ಲಿ ದೊರಕಿದ ಜನಸಂಖ್ಯೆಗೆ ಅನುಗುಣವಾಗಿ ನೀಡುವದರಿಂದ, ಸಮುದಾಯಕ್ಕೆ ಸೇರಿದ ಪ್ರತಿ ವ್ಯಕ್ತಿ ಮತ್ತು ಕುಟುಂಬವನ್ನು ಸಮೀಕ್ಷೆಗೆ ಒಳಪಡಿಸುವ ಜವಾಬ್ದಾಲ ಇಡೀ ಸಮುದಾಯದ ಮೇಲಿದೆ.

ಆದುದರಿಂದ ಒಂದು ವೇಳೆ ಮೂಲ ಜಾತಿ /ಉಪ ಜಾತಿಯನ್ನು ನಮೂದಿಸದ್ದಿದರೇ, ಬಲಗೈ ಗುಂಪಿಗೆ ಸಂಬಂಧಿಸಿದ ಜಾತಿಗಳ ಜನಸಂಖ್ಯೆಯಲ್ಲಿ ಗಣನೀಯ ಏರುಪೇರಾಗಿ ನಮ್ಮ ಈ ಬಲಗೈ ಗುಂಪಿಗೆ ವಾಸ್ತವಿಕವಾಗಿ ದೊರಕಬೇಕಿರುವ ಮೀಸಲಾತಿ ಪ್ರಮಾಣದಲ್ಲಿ ಹೆಚ್ಚು-ಕಡಿಮೆಯಾಗಿ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳಾದ ಶಿಕ್ಷಣ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ, ಆರೋಗ್ಯ, ಕೃಷಿ, ತೋಟಗಾರಿಕೆ, ಕೈಗಾರಿಕೆ, ವಾಣಿಜ್ಯ, ಪಶುಸಂಗೋಪನೆ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಸಿಗುವ ಸೌಲಭ್ಯಗಳಿಂದ ನಾವು ಶಾಶ್ವತವಾಗಿ ವಂಚಿತರಾಗಬೇಕಾಗುತ್ತದೆ. ಇದರ ಪರಿಣಾಮದಿಂದ ನಮ್ಮ ಜನಾಂಗದ ಪೀಳಿಗೆ ಶತಶತಮಾನಗಳವರೆಗೆ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಅದಕ್ಕಾಗಿ ಸಮುದಾಯದ ಪ್ರತಿಯೊಬ್ಬ ನಾಯಕರು, ಯುವಕರು, ಸಂಘಟನಕಾರರು, ಜನಪ್ರತಿನಿಧಿಗಳು ದಿನಾಂಕ 05.05.2025 ರಂದು ನಡೆಯುವ ಜಾತಿಗಣತಿಯಲ್ಲಿ ಭಾಗವಹಿಸಿ ಸಮುದಾಯವನ್ನು ಜಾಗ್ರತಗೊಳಿಸಿ ಮೂಲಜಾತಿ (ಹೊಲೆಯ) ಎಂದು ನಮೂದಿಸುವ ಮೂಲಕ ನಮ್ಮ ಜನಸಂಖ್ಯೆ ಅಗ್ರಸ್ಥಾನದಲ್ಲಿರುವಂತೆ ನೋಡಿಕೊಳ್ಳಬೇಕೆಂದು ಅವರು ಮಹಾದೇವ ಸಿ.ಮೋಘಾ ತಿಳಿಸಿದರು. ಇದೇ ಸಂದರ್ಭದಲ್ಲಿ ಸಂಪತ್ ವಳಕೇರಿ ಮಹೇಶ ಮದಿನಕರ್ ಚಂದ್ರಕಾಂತ/ವಾಲಿ, ಪ್ರಭು ಪಟ್ಟಣಕರ್, ಆಯಣ ಭರಣಿ, ಚಂದ್ರಕಾಂತ ಜಂಗಲೆ, ಭಗವಂತ ವಗ್ಗೆ, ಬಸವರಾಜ ಮಯೂರ, ರಾಜು ಕೊರಳ್ಳಿ, ಗೌತಮ್ ಬುರ್ಲೆ, ಶಾಂತಕುಮಾರ ಹೆಬ್ಬಳೆ, ಪರಮಾನಂದ ಯಲಗೋಡ, ಅರುಣಕುಮಾರ ಹತಗುಂದಾಡಾ. ಶಿವಪ್ಪ ಭೂಸನೂರ ಇದ್ದರು.

## ಹಳೆ ದಿನಪತ್ರಿಕೆಗಳ ವಿಲೇವಾರಿಗಾಗಿ ದರಪಟ್ಟಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ.ಮೇ.02-ಕಲಬುರಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿರುವ 2024ನೇ ಸಾಲಿನ ಹಳೆಯ ದಿನಪತ್ರಿಕೆಗಳ ವಿಲೇವಾರಿಗಾಗಿ ಅರ್ಹರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಕನ್ನಡ, ಉರ್ದು ಹಾಗೂ ಇಂಗ್ಲೀಷ್ ದಿನಪತ್ರಿಕೆಗಳ ಪ್ರತಿ ಕೆ.ಜಿ.ಗೆ ದರವನ್ನು ನಮೂದಿಸಿ ಮುಚ್ಚಿದ ಭದ್ರಪಡಿಸಿದ ಲಕೋಟೆಗಳಲ್ಲಿ ಉಪನಿರ್ದೇಶಕರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮಿನಿ ವಿಧಾನಸೌಧ ಆವರಣ, ಕಲಬುರಗಿ-585102 ಕಚೇರಿಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ದಿನಾಂಕ 30-05-2025ರ ಮಧ್ಯಾಹ್ನ 1.30 ಗಂಟೆಯೊಳಗೆ ಸಲ್ಲಿಸಬೇಕು ಎಂದು ಉಪನಿರ್ದೇಶಕರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಿನಿ ವಿಧಾನಸೌಧ ಆವರಣ, ಕಲಬುರಗಿ-585102 ಕಚೇರಿಯನ್ನು ಸಂಪರ್ಕಿಸುವಂತೆ ಅವರು ಕೋರಿದ್ದಾರೆ.

## ಅಂಚೆ ಇಲಾಖೆಯಿಂದ "ಜ್ಞಾನ ಪೋಸ್ಟ್" ಸೇವೆ ಆರಂಭ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ.ಮೇ.02-ಭಾರತೀಯ ಅಂಚೆ ಇಲಾಖೆಯು ಪೋಸ್ಟ್ ಆಫೀಸ್ ರೇಗ್ಯೂಲೇಷನ್ 2025 (ಎರಡನೇ ತಿದ್ದುಪಡಿ) ಮೂಲಕ 2025ರ ಮೇ 1 ರಿಂದ "ಜ್ಞಾನ ಪೋಸ್ಟ್"ಸೇವೆಯನ್ನು ದೇಶದ ಎಲ್ಲಾ ಅಂಚೆ ಕಚೇರಿಗಳಲ್ಲಿ ಪ್ರಾರಂಭಿಸಿದೆ. ಗುರುವಾರದಂದು ಕಲಬುರಗಿ ಪ್ರದಾನ ಅಂಚೆ ಕಚೇರಿಯಲ್ಲಿ ಲೇಖಕರು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಮಲ್ಲಿನಾಥ ಹೆಮಾಡಿ ಅವರು ತಮ್ಮ ಕೆಲವು ಕೃತಿಗಳನ್ನು "ಜ್ಞಾನ ಪೋಸ್ಟ್"ಸೇವೆಯಡಿ ಬುಕ್ ಮಾಡಿ ಸಂತೋಷ ವ್ಯಕ್ತಪಡಿಸುತ್ತಾ ಮಾತನಾಡಿ, ಇಲಾಖೆಯಲ್ಲಿ ಈ ಮೊದಲು ಜಾರಿಯಲ್ಲಿದ್ದ ಬುಕ್ ಪೋಸ್ಟ್ ಸೇವೆ ಸ್ಥಗಿತಗೊಂಡ ನಂತರ ಎಲ್ಲಾ ಪ್ರಕಾಶಕರು, ಮುದ್ರಣಕಾರರು, ಲೇಖಕರು ಹಾಗೂ ಸಾಹಿತ್ಯಾಸಕ್ತರ ಮನವಿಯ ಮೇರೆಗೆ "ಜ್ಞಾನ ಪೋಸ್ಟ್" ಸೇವೆ ಪ್ರಾರಂಭಿಸಿದ್ದು, ಖುಷಿ ತಂದಿದೆ ಎಂದರು ಹೇಳಿದರು.

ಈ ಸಂದರ್ಭದಲ್ಲಿ ಕಲಬುರಗಿ ವಿಭಾಗೀಯ ಕಚೇರಿಯ ಅಂಚೆ ನಿರೀಕ್ಷಕ ಮಲ್ಲಿಕಾರ್ಜುನ ಕಲಶೆಟ್ಟಿ ಮಾತನಾಡಿ, ಈ "ಜ್ಞಾನ ಪೋಸ್ಟ್" ಸೇವೆಯಡಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಅಥವಾ ಈ ನೆಲದ ಕಾನೂನಿನಡಿ ಪ್ರಕಟಣೆಗೊಂಡ ಪುಸ್ತಕಗಳನ್ನು ಮತ್ತು ಸ್ಪರ್ಧಾತ್ಮಕ ಪರೀಕ್ಷೆ ಪುಸ್ತಕಗಳನ್ನು ಹಾಗೂ ವಿವಿಧ ವಿಶ್ವವಿದ್ಯಾಲಯ, ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳ ಪಠ್ಯಪುಸ್ತಕಗಳನ್ನು ಗರಿಷ್ಠ 5 ಕಿಲೋ ಗ್ರಾಮ ತೂಕದವರೆಗೆ ಕಳುಹಿಸಬಹುದು. ಈ ಸೇವೆಯಲ್ಲಿ ಟ್ರ್ಯಾಕ್ ಮಾಡುವ, ವಿಮೆ ಮಾಡಿಸುವ ಹಾಗೂ ಬಟವಾಡೆ ಪ್ರೂಫ್ ಪಡೆಯುವ ಸೌಲಭ್ಯ ಇರುತ್ತದೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸಹಾಯಕ ಅಂಚೆ ಅಧೀಕ್ಷಕ ಲಕ್ಷ್ಮೀಕಾಂತ ಕೋಡ್ಲಿ, ಪ್ರಧಾನ ಅಂಚೆ ಪಾಲಕ ವಿದ್ಯಾಧರ ಗೊಟೂರ, ಮಾರುಕಟ್ಟೆ ಪ್ರತಿನಿಧಿ ಚಂದ್ರಶೇಖರ ನಿಗಂದೆ, ಸಹಾಯಕ ಅಂಚೆ ಪಾಲಕ ಭೀಮಶಾ ಹುಡಗಿ, ಪವನ್ ಕುಲಕರ್ಣಿ, ಶ್ರೀಕಾಂತರೆಡ್ಡಿ, ಸಂಕಪ್ಪಾ, ದೇವರಾಜ್, ಪ್ರಕಾಶ, ರಮೇಶ, ಅರುಣಾ ಮೊದಲಾದ ಮತ್ತಿತರ ಪ್ರಧಾನ ಅಂಚೆ ಕಚೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವ್ಯಕ್ತಿ ಕಾಣೆ: ಪತ್ತೆಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ 02-: ಬ್ಯಾಂಕೊಂದರಲ್ಲಿ ಕೆಲಸ ಮಾಡುತ್ತಿದ್ದ ಕುರ್ವಕುರ್ದಾದ ಬಸವರಾಜ ತಂದೆ ದಿ.ಬೂದೆಪ್ಪ ಈತನು ಕಾಣೆಯಾದ ಬಗ್ಗೆ ರಾಯಚೂರು ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆ ಗುನ್ನೆ ನಂ.24/2025ರಲ್ಲಿ ಪ್ರಕರಣ ದಾಖಲಾಗಿದೆ.

ಈತನು ಹಿಂದೆ ಆಗಾಗ ಮನೆ ಬಿಟ್ಟು ಹೋಗುತ್ತಿದ್ದು ದಿನಾಂಕ: 23-02-2025 ರಂದು ರಾತ್ರಿ 09 ಗಂಟೆಗೆ ಊಟ ಮಾಡಿ ವಾಕಿಂಗ್ ಮಾಡುತ್ತೇನೆ ಎಂದು ಹೊರಗಡೆ ಹೋದವನು ವಾಪಸ್ ಮನೆಗೆ ಬಾರದೆ ಕಾಣೆಯಾಗಿರುತ್ತಾರೆ. ಕಾಣೆಯಾದ ವ್ಯಕ್ತಿಯನ್ನು ಪತ್ತೆ ಹಚ್ಚಿಕೊಡಬೇಕು ಎಂದು ತಾಯಿ ಶ್ರೀಮತಿ ಪಾರಿಜಾತ ಗಂಡ ದಿ.ಬೂದೆಪ್ಪ ಇವರು ದೂರು ನೀಡಿದ್ದಾರೆ.

ಕಾಣೆಯಾದ ಬಸವರಾಜ ಅವರು 167 ಸೆಂ.ಮೀ. ಎತ್ತರ, ಗೋಧಿ ಮೈ ಬಣ್ಣ, ಉದ್ದನೆಯ ಮುಖ, ಉದ್ದನೆಯ ಮೂಗು, ಸಾಧಾರಣ ಮೈಕಟ್ಟು ಹೊಂದಿದ್ದಾನೆ. ನೀಲಿ ಬಣ್ಣದ ಶರ್ಟ್, ಕಪ್ಪು ಬಣ್ಣದ ಶಾರ್ಟ್ ಹಾಕಿದ್ದಾನೆ. ಕನ್ನಡ, ಹಿಂದಿ, ತೆಲುಗು ಮತ್ತು ಇಂಗ್ಲೀಷ್ ಮಾತಾಡುತ್ತಾನೆ.

ಈ ಮೇಲ್ಕಂಡ ಕಾಣೆಯಾದ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಾದಲ್ಲಿ ಸಿಪಿಐ ಪಶ್ಚಿಮ ವೃತ್ತ 08532-226856, 9480803831 ಅಥವಾ ಪಿ.ಎಸ್.ಐ ಮಾರ್ಕೆಟ್ ಯಾರ್ಡ್ ಠಾಣೆ 08532-235600,9480803849 ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಮಾರ್ಕೆಟ್ ಯಾರ್ಡ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ಧಾರೆ

## ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೆ ತುಂಬು ಹೃದಯದ ಅಭಿನಂದನೆಗಳು.

ಮಲ್ಲಮ್ಮ ನುಡಿ ವಾರ್ತೆ

ಕಲಬುರ್ಗಿ: ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಹಾಗೂ ಅಫಜಲಪುರ ಬಿಜೆಪಿ ಯುವ ಮುಖಂಡರು

ನಿತಿನ್ ವ್ಹಿ ಗುತ್ತೇದಾರ್ ಅವರಿಂದ ರಾಜ್ಯದಲ್ಲಿ ಇಂದು ಪ್ರಕಟಗೊಂಡಿರುವ ಎಸ್.ಎಸ್. ಎಲ್.ಸಿ ಪರೀಕ್ಷಾ ಫಲಿತಾಂಶದಲ್ಲಿ ಸಾಧನೆಯ ಗುರಿ ತಲುಪಿ ಶಿಕ್ಷಣದ ತಿರುವಿನ ಹಾದಿಯಲ್ಲಿ ಮಹತ್ವದ ಹೆಜ್ಜೆ ಇಟ್ಟು ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳಿಗೆ ಅಭಿನಂದನೆಗಳು! ಅನುತ್ತೀರ್ಣರಾದ ವಿದ್ಯಾರ್ಥಿಗಳು ಅಳುಕಬೇಕಿಲ್ಲ. ಮರಳಿ ಪ್ರಯತ್ನದಲ್ಲಿ ನಿಮಗೆ ಮಹತ್ವದ ತಿರುವು ಸಿಗುವುದು ನಿಶ್ಚಿತ, ಈ ನಿಟ್ಟಿನಲ್ಲಿ ಆತ್ಮವಿಶ್ವಾಸದ ಹೆಜ್ಜೆ ಇಡಿ ಗೆಲುವು ನಿಮ್ಮನ್ನು ಹಿಂಬಾಲಿಸಲಿದೆ, ಅವಕಾಶಗಳ ಬಾಗಿಲು ತೆರೆದು ನಿಮಗಾಗಿ



ಕಾಯುತ್ತಿವೆ. ವಿದ್ಯಾರ್ಥಿಗಳೆಲ್ಲರ ಮುಂದಿನ ಶೈಕ್ಷಣಿಕ ಭವಿಷ್ಯ ಉಜ್ವಲವಾಗಲೆಂದು ಹಾರೈಸುತ್ತೇನೆ.

## ಜಲಾಲ ನಗರದ ನರಸಮ್ಮ ಕಾಣೆ: ಪ್ರಕರಣ ದಾಖಲು

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ 02 -ರಾಯಚೂರನ ಜಲಾಲ್ ನಗರದ ನರಸಮ್ಮ ಗಂಡ ನರಸಪ್ಪ (ವಯಸ್ಸು 65) ಕಾಣೆಯಾದ ಬಗ್ಗೆ ರಾಯಚೂರು ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆ ಗುನ್ನೆ ಸಂ: 37/2025ರಲ್ಲಿ ಪ್ರಕರಣ ದಾಖಲಾಗಿದೆ. ದಿನಾಂಕ 17.03.2025 ರಂದು ರಾತ್ರಿ ತಮ್ಮ ತಾಯಿಯನ್ನು ಮನೆಯ ಹೊರಗಡೆ ಹಾಸಿಗೆ ಹಾಸಿ ಮಲಗಿಸಿದ್ದು ತಾವು ಸಹ ರಾತ್ರಿ 11 ಗಂಟೆಗೆ ಮನೆಯ ಹೊರಗಡೆ ಮಲಗಿದ್ದು ನಂತರ ತಮಗೆ ನಿದ್ದೆ ಹತ್ತಿದ್ದು ದಿನಾಂಕ 18.03.2025 ರಂದು ಬೆಳಗಿನ ಜಾವ 3 ಗಂಟೆಗೆ ಎದ್ದು ನೋಡಲಾಗಿ ತಮ್ಮ ತಾಯಿಯು ಇರಲಿಲ್ಲ. ಗಂಜಿನೊಳಗೆ ಮತ್ತು ಎಲ್ಲಾ ಕಡೆಗೆ ನೋಡಲಾಗಿ ಸಿಗದೇ ಕಾಣೆಯಾಗಿರುತ್ತಾಳೆ ಎಂದು ದೂರು ದಾಖಲಾಗಿದೆ.

### ಶಿರೂರಿನ ರಡ್ಡಿ ಸಮಾಜದ ಶ್ರಮ ಅನಾವರಣ ಮಲ್ಲಮ್ಮನ ಅದ್ದೂರಿ ದೇವಸ್ಥಾನ ಸ್ಥಾಪನೆ

# ತ್ಯಾಗಮಯಿ ರಡ್ಡಿ ಕುಲದ ಮಹಾ ಶಿವಶರಣೆಯ ದೇವಸ್ಥಾನ ಅನಾವರಣ




ಪ್ರಾಚೀನಕಾಲದಇತಿಹಾಸದಿಂದಲೂ ಜಾತಿ ಆಧಾರಿತ ಸಮಾಜ ನೋಡಿಕೊಂಡು ಬಂದಂತೆಲ್ಲ ಒಂದೊಂದುಸಮಾಜಕ್ಕೆಒಬ್ಬೊಬ್ಬರು ಪೀಠಾಧಿಪತಿಗಳಾಗಿ ಸಮಾಜ ಸುಧಾರಣೆಗಾಗಿ ತಮ್ಮದೇ ತಪಸ್ಸು ತ್ಯಾಗಮಯ ಶಕ್ತಿಯಿಂದ ಆಯಾ ಸಮಾಜಕ್ಕೆ ಏನು ಎನ್ನುವುದು ತೋರಿಸಿಕೊಟ್ಟಿದ್ದಾರೆ ಇವತ್ತು ಸಮಾಜ ಸರ್ವ ಜನಾಂಗದ ಶಾಂತಿಯ ತೋಟವಾಗಿ ಈ ನಾಡು ಹೊರಹೊಮ್ಮಿದೆ ತಮ್ಮ ತಮ್ಮ ಧರ್ಮಕ್ಕೆ ತಾವು ಕಟಿಬದ್ಧರಾಗಿದ್ದರು ದೇಶಭಕ್ತಿ ದೇಶದ ಸ್ವಾಯತತೆಕ್ಕೆ ಧಕ್ಕೆ ಬಂದಾಗ ಎಲ್ಲರೂ ಒಂದಾಗಿ ಹೋರಾಡಿದ್ದರ ಫಲವೇ ಇವತ್ತು ನಮ್ಮ ದೇಶ ಸ್ವತಂತ್ರ ಪಡೆದು ತನ್ನದೇ ಸಾಮ್ರಾಜ್ಯ ಸ್ಥಾಪಿಸಿಕೊಂಡಿದೆ ಸಮಾಜದ ಕೆಲಸ ಅಂತಾ ಬಂದಾಗ ನಾವೆಲ್ಲರೂ ಒಂದು ಎಂಬ ಸಂದೇಶ ಸಾರುತ್ತ ಯಾವುದೇ ಜಾತಿಭೇದಭಾವಗಳನ್ನುಮಾಡದೆ ಸರ್ವ ಜನಾಂಗದ ಒಳತಿಗಾಗಿ ಬ್ರಿಟಿಷರ ಬಹುಮನಿ ಸುಲ್ತಾನರು ಆದಿಲ್ ಶಾಹಿಗಳು ಇಗೆ ಅನೇಕರು ನಮ್ಮ ದೇಶ ಆಳಲು ಬಂದ ಎಲ್ಲರಿಗೂ ತಕ್ಕ ಪಾಠ ಕಲಿಸುವ ನಿಟ್ಟಿನಲ್ಲಿ ಎಲ್ಲ ಜನಾಂಗದವರು ಒಂದಾಗಿ ಹೋರಾಟ ಮಾಡಿದ್ದರ ಫಲವಾಗಿ ಇವತ್ತು ನಮ್ಮ ದೇಶ ಸಮಾಜಗಳು ಹೇಮ್ಮರವಾಗಿ ಬೆಳೆದು ಇಡೀ ಪ್ರಪಂಚದಲ್ಲಿಯೇ ಜಗತ್ತಿಗೆ ಮಾದರಿ ದೇಶವಾಗಿ ಭಾರತ ರಾರಾಜಿಸುತ್ತಿದೆ.

ಇದಕ್ಕೆಲ್ಲ ಕಾರಣವೇನೆಂದರೆ ಸಮಯ ಸಂದರ್ಭ ಬಂದಾಗ ಎಲ್ಲಾ ಜಾತಿ ಭೇದ ಭಾವ ಮರೆತು ಎಲ್ಲರೂ ಒಂದಾಗಿ ಸರ್ವ ಜನಾಂಗದ ಶಾಂತಿಯ ತೋಟ ಎಂಬಂತೆ ಭಾರತೀಯರ ವಿರುದ್ಧ ಯುದ್ಧ ಮಾಡಲು ಬಂದ ಎಲ್ಲರನ್ನು ಓಡಿಸಿದ್ದರ ಪಲವೇ ಇವತ್ತು ನಮ್ಮ ಭಾರತ ದೇಶದ ಜನ ಸುಭಿಕ್ಷವಾಗಿ ಬದುಕುತ್ತಿದ್ದಾರೆ ನಮ್ಮ ದೇಶ ಅಂತ ಬಂದಾಗ ಎಲ್ಲ ಜಾತಿ ಭೇದ ಭಾವ ಮರೆತು ಅವರವರ ಕುಲದೇವರುಗಳು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದರ ಪರವಾಗಿ ಇವತ್ತು ಭಾರತ ದೇಶ ಜಗತ್ತನ್ನೇ ಎದುರಿಸಬಲ್ಲ ಬಲಿಷ್ಠ ರಾಷ್ಟ್ರವಾಗಿ ಬೆಳೆದಿದೆ ಅನೇಕ ಜಾತಿಗಳ ರಾಜ ಮಹಾರಾಜರು ರಾಣಿಯರು ಹೋರಾಡಿದ್ದರ ಫಲವೇ ನಾವು ಇವತ್ತು ಸುರಕ್ಷಿತವಾಗಿ ಇರಲು ಕಾರಣವಾಗಿದೆ.

ಈ ನಾಡಿನಲ್ಲಿ ಅನೇಕ ದೇವಾನು ದೇವತೆಗಳು ತಪಸ್ಸು ಕಾರ್ಯಸಿದ್ಧಿ ಕೈಗೊಂಡಿದ್ದರ ಪಲವಾಗಿ ಇಡೀ ಮಾನವ ಕುಲವೇ ಸಂತೃಪ್ತಿಯಿಂದ ಬದುಕುತ್ತಿದೆ ಎಲ್ಲಾ ಕಾರಣಿಕ ಮಾಹಾಪುರುಷರು ಯೋಗಿಗಳು ಜ್ಞಾನಿಗಳು ಸತ್ಪುರುಷರು ಮಹಾಮಾತೆಯರು ಸ್ವತಂತ್ರ ಹೋರಾಟಗಾರರು ಸಾಕಷ್ಟು ತಪಸ್ಸು ಹೋರಾಟಗಳನ್ನು ಮಾಡಿ ತಮ್ಮದೇ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಜೀವನ ತ್ಯಾಗ ಮಾಡಿ ಸಮಾಜವನ್ನು ಸನ್ಮಾರ್ಗದಡೆಗೆ ಒಯ್ಯುವ ಕೆಲಸ ಮಾಡುತ್ತಾ ಬಂದಿದ್ದಾರೆ ಪ್ರಾಚೀನ ಕಾಲದಲ್ಲಿ ಹೋರಾಟ ಮಾಡುವುದಾಗಲಿ ತಪಸ್ಸು ಮಾಡುವುದಾಗಲಿ ದೇವರನ್ನು ಒಲಿಸಿಕೊಂಡವರೇಲ್ಲ ದೈವಿ ಪುರುಷರು ಎಂದೂ ಜಾತಿ ಭೇದ ಬಾವ ಮಾಡಿಲ್ಲ ಆದರೆ ಇವತ್ತು ನಾವೆಲ್ಲರೂ ಒಂದೊಂದು ಜಾತಿ ಹೆಸರಿನಲ್ಲಿ ಒಂದೊಂದು ಸಮಾಜ ನಿರ್ಮಿಸಿಕೊಂಡು ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇವೆ.

ಹೀಗೆ ಎಲ್ಲಾ ಸಮಾಜದಲ್ಲೂ ಒಬ್ಬೊಬ್ಬ ಧರ್ಮ ಗುರುಗಳನ್ನು ನೇಮಿಸಿಕೊಂಡು ಇವತ್ತು ಸಮಾಜಗಳು ತಮ್ಮ ತಮ್ಮ ಜಾತಿಯ ಬೇಕು ಬೇಡಗಳನ್ನು ಈಡೇರಿಸಿಕೊಳ್ಳುವಲ್ಲಿ ಸಂಘಟನೆಯೊಂದಿಗೆ ತಮ್ಮದೇ ಆದ ಮಠವನ್ನು ಕಟ್ಟಿಕೊಂಡು ಅದಕ್ಕೆ ಪೀಠಾಧಿಪತಿಗಳನ್ನು ನೇಮಿಸಿ ಸರ್ಕಾರದಿಂದ ಬರತಕ್ಕಂತ ಸೌಲಭ್ಯಗಳನ್ನು ಹೋರಾಟದ ಮೂಲಕವಾಗಲಿ ಮನವಿಗಳ ಮೂಲಕವಾಗಲಿ ಸರ್ಕಾರಗಳನ್ನು ಮನವೊಲಿಸುವ ಮೂಲಕ ತಮ್ಮ ತಮ್ಮ ಸಮಾಜದ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತಿವೆ ಇದೇ ಮಾದರಿಯಲ್ಲಿ ಕರ್ನಾಟಕದ ಪ್ರಬಲ ರಡ್ಡಿ ಜನಾಂಗದ ರಾಜಕೀಯ ನಾಯಕರುಗಳು ಜನಾಂಗದ ಮುಖಂಡರು ಹಿರಿಯರು ಹಾಗೂ ರಡ್ಡಿ ಸಮಾಜದ ಹಿತೈಷಿಗಳು ಹರಿಹರ ತಾಲೂಕಿನ ಹೊಸಳ್ಳಿಯಲ್ಲಿ ರಡ್ಡಿ ಪೀಠ ಸ್ಥಾಪನೆ ಮಾಡಿ ಪರಮಪೂಜ್ಯ ಶ್ರೀ ವೇಮಾನಂದ ಸ್ವಾಮೀಜಿಯವರನ್ನು ರಡ್ಡಿ ಸಮಾಜದ ಗುರುಗಳನ್ನಾಗಿ ನೇಮಿಸಿ ರಡ್ಡಿ ಸಮಾಜದ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಾ ಬಂದಿರುತ್ತಾರೆ ರಡ್ಡಿ ಸಮಾಜ ಮುನ್ನಡೆಸುವದಕ್ಕೆ ಮುಖ್ಯಕಾರಣವೇ ಮಹಾಮಾತೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮನ ಹಾಗೂ ವೇಮನ. ರಡ್ಡಿ ಸಮಾಜದ ಕುಲದೈವರೆಂದು ಸಮಾಜದವರು ಪೂಜಿಸುತ್ತಾರೆ ಹೇಮರಡ್ಡಿ ಮಲ್ಲಮ್ಮ ತಾಯಿಯು ತನಗಾಗಿ ಏನು ಮಾಡಿಕೊಳ್ಳದೆ ಸುಮಾರು 600 ವರ್ಷಗಳ ಹಿಂದೆ ಶ್ರೀಶೈಲ ಪ್ರಾಂತ್ಯದ ಕರ್ನೂಲ್ ಜಿಲ್ಲೆಯ ಆತ್ಮಕೂರ ತಾಲೂಕಿನ ರಾಮಾಪುರ ಗ್ರಾಮದಲ್ಲಿ ತಂದೆ ನಾಗರೆಡ್ಡಿ ತಾಯಿ ಗೌರಮ್ಮನ ಉದರದಲ್ಲಿ ಶ್ರೀಮಂತ ಕುಟುಂಬದಲ್ಲಿ ಜನಿಸುತ್ತಾಳೆ 16 ವರ್ಷ ತುಂಬಿದಾಗ ಅದೇ ಸಂಸ್ಥಾನದ ಒಡೆಯರಾದ ಸಿದ್ದಾಪುರದ ಶ್ರೀ ಹೇಮರೆಡ್ಡಿ ಅವರ ಮೂರನೇ ಮಗನಾದ ಭರಮರೆಡ್ಡಿಗೆ ಕೊಟ್ಟು ಮದುವೆ ಮಾಡಿದ ನಂತರ ಸಿದ್ದಾಪುರದ ಸೊಸೆಯಾಗಿ ಮನೆಯಲ್ಲಿ ಗಂಡ ಅತ್ತೆ–ಮಾವ ನಾದಿನಿಯರನ್ನು ತುಂಬಾ ಗೌರವದಿಂದ ಪೂಜ್ಯನೀಯ ಸ್ಥಾನ ನೀಡಿ ಗೌರವಿಸುತ್ತಾಳೆ ಇಷ್ಟೆಲ್ಲ ಗೌರವಿಸುವ ಸೊಸೆಗೆ ಅತ್ತೆ ಮಾವನ ನಾದನಿಯರ ಕಾಟದಿಂದ ಕೌಟುಂಬಿಕ ಜೀವನದಲ್ಲಿ ಹಲವಾರು ಏರುಪೇರು ಸಂಕಷ್ಟ ಅನುಭವಿಸಿದಳು.

ಡಿವಿಜಿ ಅವರ ನುಡಿಯಂತೆ " ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆ ಹಾಗೂ ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ ಬೆಲ್ಲ ಸಕ್ಕರೆ ಹಾಗೂ ದೀನ ದುರ್ಬಲರಿಗೆ ಎಲ್ಲರೊಳಗೆಒಂದಾಗು ಮಂಕುತಿಮ್ಮ" ಎನ್ನುವಂತೆ ಹೇಮರೆಡ್ಡಿ ಮಲ್ಲಮ್ಮ ಕಷ್ಟಗಳ ಮಳೆಯ ಸುರಿದರು ಅದೆಲ್ಲವನ್ನು ಧೈರ್ಯದಿಂದ ಎದುರಿಸಿ ಸಾಮರಸ್ಯದ ಬಾಳನ್ನು ಬದುಕಿದಳು. ಗಂಡನ ಮನೆಯಲ್ಲಿ ಎಷ್ಟೇ ಕಿರುಕುಳ ತೊಂದರೆ ಇದ್ದರೂ ಅದನ್ನು ಇನ್ನೊಬ್ಬರಿಗೆ ಹೇಳದೆ ತಂದೆ ತಾಯಿಯ ತವರ ಮನೆ ಹೆಸರನ್ನು ನಾಡಿಗೆ ಬೆಳಗಿದಳು ಗಂಡನ ಮನೆಯ ಸಾಕಷ್ಟು ಕಿರಿಕಿರಿ ತೊಂದರೆಗಳಿದ್ದರು ಅದರಿಂದ ಕುಗ್ಗದೇ ಕರಗದೆ ಎಲ್ಲವನ್ನು ಎದುರಿಸಿ ಸಾಕ್ಷಾತ್ ಶ್ರೀಶೈಲ ಮಲ್ಲಯ್ಯನಿಗೆ ಪರಮ ಭಕ್ತೆ ಯಾದಳು .

ಜೀವನದಿದ್ದಕ್ಕೂ ಭೋಗಿಯಾಗಿ ಭೋಗಿ ಜೀವನ ನಡೆಸಿದ ವೇಮನನ್ನು ಯೋಗಿಯನ್ನಾಗಿ ಮಾಡಿ ಮಹಾಮಾತೆ ಮಲ್ಲಮ್ಮಳಾದಳು ಮಲ್ಲಮ್ಮ ಕಾಯಕದಿಂದಲೇ ಮುಕ್ತಿ ಎನ್ನುವ ಶರಣ ಸಿದ್ಧಾಂತವನ್ನು ಪಾಲಿಸಿಕೊಂಡು ಬಂದವಳು ಕೃಷಿ ಕಾಯಕದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಸಂಸಾರಿಕ ಬದುಕು ಜಯಿಸಿದ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ತನ್ನ ಕೊನೆಯ ದಿನಗಳನ್ನು ಶ್ರೀಶೈಲದ ಮಲ್ಲಿಕಾರ್ಜುನ ಗುಡ್ಡದಲ್ಲಿ ಆಶ್ರಯ ನಿರ್ಮಿಸಿಕೊಂಡು ಪತಿ ಭರಮರೆಡ್ಡಿ ಹಾಗೂ ಮಲ್ಲಿಕಾರ್ಜುನ ಸ್ವಾಮಿಯೆನ್ನೆಸದಾಕಾಲನೆನೆಯುತ್ತ ತಪಸ್ಸು ಮಾಡುತ್ತಾ ಜೀವನ ಸಾಗಿಸಿದಳು. ಮಲ್ಲಮ್ಮನ ಭಕ್ತಿಗೆ ಮಾರುಹೊದ ಮಲ್ಲಯ್ಯ ಒಂದು ದಿನ ಪ್ರತ್ಯಕ್ಷನಾಗಿ ನಿನ್ನ ಸಾವು ಸಮಿತಿಸುತ್ತಿದೆ ನಿನಗೆ ಏನು ವರ ಬೇಕು ಕೇಳು ಅದನ್ನು ಕರುಣಿಸುತ್ತೇನೆ ಎಂದಾಗ ನನಗೆ ಯಾವುದೇ ಆಸೆ ಆಕಾಂಕ್ಷೆಗಳಿಲ್ಲ ನನ್ನ ರಡ್ಡಿ ಸಮಸ್ತ ಕುಲಕ್ಕೆ ಎಂದಿಗೂ ಬಡತನ ಭಾರದಿರಲಿ ರಡ್ಡಿ ಯಾವಾಗಲೂ ಬಂಗಾರ ಕಡ್ಡಿಯಾಗಿರಲಿ ಎಂದು ಬೇಡಿಕೊಂಡಾಗ ಒಂದು ಕ್ಷಣ ಮಲ್ಲಯ್ಯನ ದಿಗ್ರಾಂತನಾದನು. ತನಗಾಗಿ ಏನು ಬೇಡಿಕೊಳ್ಳದ ಈ ತಾಯಿ ಇಡಿ ಸಮಾಜವನ್ನು ರಕ್ಷಣೆ ಇಡೀ ಕುಲದ ಸಮಾಜಿಕ ಕಳಕಳಿ ಮಾಡುವ ಇವಳೆಂಥ ಭಕ್ತಳು ಎಂದು ಮನಸ್ಸಿನಲ್ಲಿ ಅಂದುಕೊಂಡು ಮಲ್ಲಮ್ಮಳ ತಪಸ್ಸಿಗೆ ಮೆಚ್ಚಿ ಆಯ್ತು ನಿನ್ನ ಆಸೆ ಈಡೇರಲಿ ಈ ಭೂಮಿ ಮೇಲೆ ವಾಸಿಸುವ ಸಕಲ ರಡ್ಡಿ ಕುಲದವರಿಗೆ ಯಾವತ್ತೂ ಬಡತನ ಬಾರದಿರಲಿ ಎಂದು ಮಲ್ಲಯ್ಯನು ಆಶೀರ್ವಾದ ಕರುಣಿಸಿದನು ಅವತ್ತಿನಿಂದ ಇವತ್ತಿನವರೆಗೂ ರಡ್ಡಿ ಸಮಾಜವನ್ನು ಬಂಗಾರದ ಕಡ್ಡಿ ಎಂದು ಕರೆಯುತ್ತಾರೆ

ತನಗಾಗಿ ತಾನು ಏನು ಮಾಡಿಕೊಳ್ಳದ ಮಲ್ಲಮ್ಮ ತಾಯಿ, ತನ್ನ ಗಂಡನ ಮನೆಗಾಗಲಿ ತನ್ನ ತವರಮನಿಗಾಗಲಿ ಏನು ಕೇಳಲಿಲ್ಲ ಮಲ್ಲಯ್ಯನ ಒಲಿದಾಗ ತನಗಾಗಿ ಬೇಕಾದ್ದನ್ನು ಬೇಡಬಹುದಿತ್ತು ಕೇಳಬಹುದಿತ್ತು ಆದರೆ ಮಲ್ಲಮ್ಮ ತಾಯಿ ತ್ಯಾಗ ಮತ್ತು ಭೋಗಿಯಾಗಿರುವುದರಿಂದ ತನಗಾಗಲಿ ತನ್ನ ಮನೆಯವರಿಗಾಗಿ ಏನು ಆಸೆಪಡದ ಮಲ್ಲಮ್ಮ ತಾಯಿ ಇಡೀ ಸಮಸ್ತ ರಡ್ಡಿ ಕುಲವನ್ನೇ ಸುರಕ್ಷಿತ ಸುಭಿಕ್ಷೆ ಚೆನ್ನಾಗಿರುವಂತೆ ಬೇಡಿಕೊಂಡ ರಡ್ಡಿ ಸಮಾಜದ ಏಕೈಕ ಮಾತೆ ಹೇಮರೆಡ್ಡಿ ಮಲ್ಲಮ್ಮ ಮಹಾತಾಯಿ ಇಷ್ಟೆಲ್ಲ ರಡ್ಡಿ ಸಮಾಜಕ್ಕೆ ಮಾಡಿದಾಗ ಮಲ್ಲಮ್ಮ ತಾಯಿಯ ಭಕ್ತಿಗೆ ನಾವು ಯಾವಾಗಲೂ ತಲೆಬಾಗಲೇಬೇಕು ಮಲ್ಲಮ್ಮ ತಾಯಿ ನೆಲೆಸಿದ ಶ್ರೀಶೈಲ ಪ್ರಾಂತ್ಯದಲ್ಲಿ ಮಲ್ಲಯ್ಯನ ದೇವಸ್ಥಾನದ ಹಿಂದುಗಡೆ ವಿಶಾಲವಾದ ಮಲ್ಲಮ್ಮನ ದೇವಸ್ಥಾನ ನಿರ್ಮಿಸಿದ ರಡ್ಡಿ ಸಮಾಜದ ಎಲ್ಲ ಗುರು ಹಿರಿಯರು ಇವತ್ತು ಸಾಕ್ಷಾತ್ ಮಲ್ಲಮ್ಮನನ್ನು ಕಣ್ಮುಂದೆ ಗೋಚರಿಸುವಂತೆ ಶ್ರೀಶೈಲದಲ್ಲಿ ದೇವಸ್ಥಾನ ನಿರ್ಮಿಸಿ, ಮಲ್ಲಮ್ಮನ ಕೃಪೆಗೆ ಪಾತ್ರರಾಗಿರುತ್ತಾರೆ.

ಹೇಮರಡ್ಡಿ ಮಲ್ಲಮ್ಮ ಬರಿ ಮಹಾಮಾತೆಯಾಗದೆ ಇಡೀ ರಡ್ಡಿ ಸಮಾಜಕ್ಕೆ ಶಕ್ತಿಯಾಗಿ ಮಲ್ಲಯ್ಯನಲ್ಲಿ ಬೇಡಿಕೊಂಡ ಪ್ರಯುಕ್ತ ಸಮಸ್ತ ರಡ್ಡಿ ಕುಲಬಾಂಧವರೆಲ್ಲರೂ ಸಾಮಾಜಿಕವಾಗಿ ಆರ್ಥಿಕವಾಗಿ ಕೌಟುಂಬಿಕವಾಗಿ ಈ ಭೂಮಿ ಮೇಲೆ ಚೆನ್ನಾಗಿ ಸುಖ ಶಾಂತಿ ನೆಮ್ಮದಿಯಿಂದ ಬದುಕುತ್ತಿದ್ದಾರೆ ಹಾಗಾಗಿ ಮಲ್ಲಮ್ಮನ ಕರುಣಿಸಿದ ದಯದಿಂದಾಗಿ ಪ್ರತಿಯೊಂದು ರಡ್ಡಿ ಸಮಾಜ ವಾಸವಾಗಿರುವ ಊರುಗಳಲ್ಲಿ ಮಲ್ಲಮ್ಮನ ದೇವಸ್ಥಾನ ನಿರ್ಮಿಸಿ ಮಲ್ಲಮ್ಮ ಕೃಪೆಗೆ ಪಾತ್ರರಾಗುತ್ತಿದ್ದಾರೆ.

ಅದರಂತೆಯೇ ಇದಕ್ಕೆ ಸ್ಫೂರ್ತಿ ಎನ್ನುವಂತೆ ಶಿರೂರಿನ ರಡ್ಡಿ ಸಮಾಜ ಮಾದರಿಯಾಗಿದೆ 2019 ರಲ್ಲಿ ಗ್ರಾಮದ ರಡ್ಡಿ ಸಮಾಜದ ಹಿರಿಯರೆಲ್ಲರೂ ಸೇರಿ ಸಮಿತಿ ರಚಿಸಿ 2022 ರಲ್ಲಿ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ನಿರ್ಮಾಣ ಮಾಡಬೇಕೆಂಬ ಅಚಲ ನಿರ್ಧಾರದೊಂದಿಗೆ ಶಿರೂರಿನ ಅನೇಕ ಕೊಡಗೈ ದಾನಿಗಳಿಂದ ಪ್ರಾರಂಭವಾದ ದೇಣಿಗೆಯ ಹಣದಿಂದ ಅದ್ದೂ–ರಿಯಾದ ಅಡಿಗಲ್ಲು ಸಮಾರಂಭ ಮಾಡಿ ಗ್ರಾಮದ ಅನೇಕ ಕೊಡಗೈ ದಾನಿಗಳಿಂದ ಹಾಗೂ ಪ್ರತಿ ಮನೆ ಮನೆಯಿಂದ ಕಾಣಿಕೆ ಪಡೆದು ಶಿರೂರಿನ ಗ್ರಾಮದ ಅನೇಕ ದಾನಿಗಳ ಸಹಾಯ ಮತ್ತು ಮುಜರಾಯಿ ಇಲಾಖೆ ಸಹಾಯಧನ ಪಡೆದು ಮಲ್ಲಮ್ಮನ ದೇವಸ್ಥಾನಕ್ಕೆ ಕಟ್ಟಡ ನಿರ್ಮಾಣ ಮಾಡಲಾಗಿದ್ದು ಸಮುದಾಯ ಭವನಕ್ಕೆ ಸಂಸದರು ಮತ್ತು ಶಾಸಕರ ಅನುದಾನದ ಸಹಾಯದಿಂದ ಅನುದಾನ ಹೊಂದಿಸಿ ಮಲ್ಲಮ್ಮನ ದೇವಸ್ಥಾನ ಮತ್ತು ಸಮುದಾಯ ಭವನ ನಿರ್ಮಾಣ ಮಾಡಬೇಕೆಂಬ ಕಮಿಟಿಯ ನಿರ್ಧಾರದ ಫಲವಾಗಿ ದಿವಂಗತ ಶ್ರೀಮತಿ ಲಕ್ಷ್ಮೀಬಾಯಿ ಶ್ರೀ ಸಕ್ರಪ್ಪ ಗುಲಗುಂಜಿ ಹಾಗೂ ಶ್ರೀಮತಿ ಮಲ್ಲಮ್ಮ ನೀಲಪ್ಪ ಗುಲಗಂಜಿ ಕೊಡ ಮಾಡಿದ ಐದು ಎಕರೆ ಜಾಗದಲ್ಲಿ ಅದ್ದೂ–ರಿಯಾದ ದೇವಸ್ಥಾನ ನಿರ್ಮಾಣ ಮಾಡುವ ಚಲ ದೊಂದಿಗೆ ಮುನ್ನಡೆದಾಗ ದೇವಸ್ಥಾನಕ್ಕೆ ತೆರಳುವ ದಾರಿಯ ಸಮಸ್ಯೆಯೂ ಕೊರತೆ ಕಂಡು ಬಂದಾಗ ಇದೇ ಊರಿನವರಾದ ಶ್ರೀಮತಿ ಸಾವಿತ್ರಿ ಸಿದ್ದಪ್ಪ ಕೆಂಪಲಿಂಗಣ್ಣವರ ದಾರಿಗೆ ಭೂಮಿ ದಾನ ಮಾಡಿದ್ದಾರೆ ಪ್ರಯುಕ್ತ ಇವತ್ತು ಇಡೀ ರಾಜ್ಯವೇ ತೆಲೆ ಎತ್ತಿ ನೋಡುವಂತ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ನಿರ್ಮಾಣ ಮಾಡಿದ ಶ್ರೇಯಸ್ಸು ಶ್ರೀ ಹೇಮರಡ್ಡಿ ಮಲ್ಲಮ್ಮ ವಿಕಾಸ ಸಂಸ್ಥೆ ಶಿರೂರಿಗೆ ಸಲ್ಲುತ್ತದೆ ಎಂದರೆ ತಪ್ಪಾಗಲಾರದು ಇಷ್ಟೆಲ್ಲ ಅಚಲ ನಿರ್ಧಾರದೊಂದಿಗೆ ಅನೇಕರ ಸಹಾಯ ಪಡೆದು ಕಮಿಟಿಯ ಕಾರ್ಯ ಅಧ್ಯಕ್ಷರಾದ ಶ್ರೀ ನೀಲಪ್ಪ ಕೃಷ್ಣಪ್ಪ ಕೋಟೆಕಲ್ ಹಾಗೂ ಸಮಿತಿಯ ಅಧ್ಯಕ್ಷರಾದ ರವಿ ಗಿರಿಜಾ ಅವರ ತಂಡದ ಕಮಿಟಿಯ ಸದಸ್ಯರೆಲ್ಲರ ಶ್ರಮದ ಫಲವಾಗಿ ಇದೆ ದಿನಾಂಕ 03 ರಂದು ಹೇಮರೆಡ್ಡಿ ಮಲ್ಲಮ್ಮನ ಮೂರ್ತಿ ಹಾಗೂ ಸಿದ್ದಲಿಂಗೇಶ್ವರನ ಮೂರ್ತಿ ಮೆರವಣಿಗೆ ಕಾರ್ಯಕ್ರಮ ಮಾಡುವುದರ ಜೊತೆಗೆ ಹೇಮರಡ್ಡಿ ಮಲ್ಲಮ್ಮ ಸಮುದಾಯ ಭವನ ಇದೇ ಮೇ 03&04 ರಂದು ಉದ್ಘಾಟನೆಯಾಗಲಿದ್ದು ಗ್ರಾಮದ ಸುತ್ತಮುತ್ತಲು ತಾಲೂಕು ಜಿಲ್ಲೆಯ ಎಲ್ಲ ರಡ್ಡಿ ಸಮಾಜದ ಮುಖಂಡರು ಆಗಮಿಸಬೇಕೆಂದು ಸಮಿತಿಯ ಕಾರ್ಯಾಧ್ಯಕ್ಷರು ಅಧ್ಯಕ್ಷರು ಹಾಗೂ ಕಮಿಟಿಯ ಸರ್ವ ಸದಸ್ಯರು ಹಾಗೂ ಗ್ರಾಮದ ಎಲ್ಲ ಗುರುಹಿರಿಯರು ರವರು ತಿಳಿಸಿರುತ್ತಾರೆ ಬಾಗಲಕೋಟ ಜಿಲ್ಲೆ ಶಿರೂರು ಗ್ರಾಮದಲ್ಲಿ ಸುಂದರ ಮಹಾಶಿವಶರಣೆ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ಹಾಗೂ ಸಿದ್ದೇಶ್ವರ ಮೂರ್ತಿ ಮತ್ತು ಸಮುದಾಯ ಭವನ ನಿರ್ಮಿಸಿ ಉದ್ಘಾಟನೆಗೆ ಸಜ್ಜುಗೊಳಿಸಿದ್ದು ನಾಡಿನ ಹರ–ಗುರು ಚರ ಮೂರ್ತಿಗಳ ಸಮ್ಮುಖದಲ್ಲಿ ದೇವಸ್ಥಾನ ಲೋಕಾರ್ಪಣೆ ಯಾಗುತ್ತಿದ್ದು ಸಮಸ್ತ ರಡ್ಡಿ ಸಮಾಜದ ಎಲ್ಲಾ ಕುಲಬಾಂಧವರು ಈ ದೇವಸ್ಥಾನದ ಉದ್ಘಾಟನೆಗೆ ಆಗಮಿಸಿ ಶಿರೂರು ಗ್ರಾಮದ ಹಿರಿಯರು ಯುವಕ ಮಿತ್ರರ ರಡ್ಡಿ ಸಮಾಜದ ಮೇಲಿನ ಕಳಕಳಿ ಮತ್ತು ಕಾಳಜಿಯಿಂದಾಗಿ ಅನೇಕ ಹಿರಿಯರು ರಾಜಕೀಯ ನಾಯಕರುಗಳಲ್ಲಿ ಧನ ಸಂಗ್ರಹಣ ಮಾಡಿ ಅದ್ದೂರಿಯಾಗಿ ದೇವಸ್ಥಾನ ನಿರ್ಮಾಣ ಮಾಡಿದ್ದು ಸಮಸ್ತ ರಡ್ಡಿ ಕುಲದ ಬಾಂಧವರೆಲ್ಲರೂ ಈ ದೇವಸ್ಥಾನದ ಉದ್ಘಾಟನೆಗೆ ಆಗಮಿಸಬೇಕೆಂದು ಹಾಗೂ ಇದೇ ದಿನಾಲೂ 03–05–2025 ರಂದು ಶನಿವಾರ ದಿವಸ ನೂರಾರು ಕುಂಭ ಮೆರವಣಿಗೆಯೊಂದಿಗೆ ಗ್ರಾಮದ ಸಿದ್ದೇಶ್ವರ ಪ್ರೌಢಶಾಲೆಯಿಂದ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದವರೆಗೆ ಅದ್ದೂರಿ ಮೆರವಣಿಗೆ ಹಾಗೂ ದಿನಾಂಕ 04–05–2025 ರಂದು, ರವಿವಾರ ದೇವಸ್ಥಾನದ ಲೋಕಾರ್ಪಣೆ ಜರುಗಲಿದೆ ಕಾರ್ಯಕ್ರಮಕ್ಕೆ ಎಲ್ಲ ಸಮಾಜದ ಗುರುಹಿರಿಯರು ಯುವಕ ಮಿತ್ರರು ತಾಯಂದಿರು ಸಹೋದರಿಯರು ಆಗಮಿಸಬೇಕೆಂದು ವಿನಂತಿಸಿಕೊಂಡಿದ್ದಾರೆ.....



ಜಗದೀಶ.ಎಸ್.ಗಿರಡ್ಡಿ.
ಲೇಖಕರು. ಗೊರಬಾಳ
9902470856

---

## ಭಾರತೀಯ ಸೇನೆಯಿಂದ ನಿವೃತ್ತಿ ಹೊಂದಿ ತಾಯ್ನಾಡಿಗೆ ಆಗಮಿಸಿದ ಯೋಧನಿಗೆ ಅದ್ದೂರಿ ಸ್ವಾಗತ



ಮಲ್ಲಮ್ಮ ನುಡಿ ವಾರ್ತೆ

ಕುಕನೂರು : ತಾಲೂಕಿನ ಕುದರಿಮೋತಿ ಗ್ರಾಮದ ವೀರಯೋಧ ಶಿವಾನಂದ ಮಹಾಂತಪ್ಪದೊಡ್ಡಮನಿ ಇವರು ಸತತ 22 ವರ್ಷ ಹಾಗೂ 28 ದಿನ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಸ್ವಗ್ರಾಮಕ್ಕೆ ಆಗಮಿಸಿದ ಹಿನ್ನಲೆಯಲ್ಲಿ ಯೋಧನಿಗೆ ಊರಿನ ಪ್ರಮುಖರು ಹಾಗೂ ಮಾಜಿ ಸೈನಿಕರು ಯುವಕರು ಗುರುವಾರ ಅದ್ದೂರಿಯಾಗಿ ಸ್ವಾಗತಿಸಲಾಯಿತು. ತಾಲೂಕಿನ ಕುದರಿಮೋತಿ ಗ್ರಾಮದ ವೀರ ಯೋಧ ಶಿವಾನಂದ ತಂದೆ ಮಹಾಂತಪ್ಪದೊಡ್ಡಮನಿ ಹಾಗೂ ಅವರ ಧರ್ಮಪತ್ನಿ ಅವರನ್ನು ಕುದರಿಮೋತಿ ಕ್ರಾಸ್ ಯಿಂದ ಆರತಿ ಎತ್ತಿ ಹೂಮಳೆ ಸುರಿಸಿ, ಶಾಲು ಹೊದಿಸಿ ಸನ್ಮಾನಿಸಿ ಆತ್ಮೀಯವಾಗಿ ಬರಮಾಡಿಕೊಳ್ಳಲಯಿತು. ಬಳಿಕ ತೆರೆದ ವಾಹನ, ಮೂಲಕ ಜಯಘೋಷಗಳೊಂದಿಗೆ ಊರಿಗೆ ಕರೆ ತರಲಾಯಿತು.

ನಂತರ ಗ್ರಾಮದ ದಳಪತಿ ಹನುಮಗೌಡ ಪೊಲೀಸ್ ಪಾಟೀಲ್, ಮಾತನಾಡಿ ವೀರ ಯೋಧ ಶಿವಾನಂದ ದೊಡ್ಡಮನಿ ಅವರು ಭಾರತ ಸೇನೆಯಲ್ಲಿ ಸುಮಾರು 22 ವರ್ಷ 28 ದಿನ ಕಾಲ ಮಧ್ಯಪ್ರದೇಶ, ಜಮ್ಮು ಕಾಶ್ಮೀರ, ಉತ್ತರ ಪ್ರದೇಶ, ರಾಜಸ್ಥಾನ್, ತೀಲಡಕ್, ಅರುಣಾಚಲ ಪ್ರದೇಶ, ಅಸಾಂ, ಗುಜರಾತ್, ಹೀಗೆ ಅನೇಕ ರಾಜ್ಯಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಯೋಧರು ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಗಾಳಿ, ಬಿಸಿಲು, ಮಳೆ ಎನ್ನದೆ ದೇಶಕ್ಕಾಗಿ ಶ್ರಮ ವಹಿಸುತ್ತಾರೆ. ಗಡಿಯಲ್ಲಿ ನಮ್ಮನ್ನು ಕಾಯ್ದು ನಿವೃತ್ತಿ ಹೊಂದಿ ಸಾಮಾಜಿಕ ಜೀವನದಲ್ಲಿ ಭಾಗವಹಿಸುತ್ತಾರೆ. ಅವರ ನಿವೃತ್ತ ಜೀವನ ಸುಖಕರವಾಗಿರಲಿ. ಸಾರ್ವಜನಿಕರು ಹಾಗೂ ದೇಶಭಕ್ತರು ಅವರ ಜೊತೆ ಉತ್ತಮ ಬಾಂದವ್ಯ ಹೊಂದಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಸೈನಿಕ ಗವಿಸಿದ್ದಪ್ಪ ದೊಡ್ಡಮನಿ, ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಅಶೋಕ ತೋಟದ, ಗ್ರಾಮ ಪಂಚಾಯತಿ ಅಧ್ಯಕ್ಷ ಫರೀದಾಬೇಗಂ ತಂಬಾಕಾದರ್, ಮಾಜಿ ತಾಲ್ಲೂಕು ಪಂಚಾಯತಿ ಅಧ್ಯಕ್ಷ ಕಳಕಪ್ಪ ಕಂಬಳಿ, ಮಾಜಿ ತಾಲ್ಲೂಕು ಪಂಚಾಯತಿ ಸದಸ್ಯ ಮಲ್ಲನಗೌಡ ಕೋನನಗೌಡ್ರು, ಬಿಜೆಪಿ ತಾಲ್ಲೂಕು ಅಧ್ಯಕ್ಷ ಮಾರುತಿ ಗೌರಾಳ, ಶರಣಪ್ಪ ಗುಂಗಾಡಿ, ಬಸವನಗೌಡ ವಟಪರ್ವಿ, ಮಹಾಂತಪ್ಪ ದೊಡ್ಡಮನಿ, ಗ್ರಾ.ಪಂ. ಸದಸ್ಯರಾದ ರವಿ, ಕಟಗಿ, ಮಂಜುನಾಥ ಸಜ್ಜನ್, ಮಾಬುಸಾಬ ಮಕಂದಾರ್, ಗ್ರಾಮದ ಹಿರಿಯ ಮುಖಂಡರಾದ ಬಸಪ್ಪ ದೊಡ್ಡಮನಿ,, ಸುಭಾಷ್ ಈಡಿಗೇರ್, ಮಂಜುನಾಥ ಗಟ್ಟೆಪ್ಪನವರ್, ಮಾಜಿ ಗ್ರಾ.ಪಂ. ಉಪಾಧ್ಯಕ್ಷ ದ್ಯಾಮಣ್ಣ ಉಚ್ಚಲಕುಂಟಿ, ಶಂಕರ್ ದೊಡ್ಡಮನಿ, ಅಮರೇಶ ತಲ್ಲೂರು, ದುರಗಪ್ಪ ದೂಪಂ, ಹಾಗೂ ಕುಟುಂಬದವರು, ಗ್ರಾಮದ ಯುವಕರು ಸೇರಿದಂತೆ ಇತರರು ಇದ್ದರು.

---

## ಖುದಾವಂದಪೂರ: ಅಧಿಕಾರಿಗಳ ನೇತೃತ್ವದಲ್ಲಿ ಶಾಂತಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಕೋಮು ಸೌಹಾರ್ದತೆ ಕಾಪಾಡಿಕೊಂಡು ಗ್ರಾಮದ ಎಲ್ಲರು ಸಹೋದರರಂತೆ ಕೂಡಿ ಬಾಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದರು.

ತಾಲ್ಲೂಕಿನ ಖುದಾವಂದಪೂರ ಗ್ರಾಮದಲ್ಲಿ ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ನಡೆದ ಗಲಾಟೆ ನಿಮಿತ್ತ ಆಯೋಜಿಸಿದ್ದ ಶಾಂತಿ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮದಲ್ಲಿ ನಡೆದಿರುವ ಕಹಿ ಘಟನೆ ಬೇರೆ ರೂಪ ಪಡೆದುಕೊಳ್ಳುತ್ತಿದೆ. ಅದಕ್ಕೆ ಅವಕಾಶ ಕೊಡದೆ ಎಲ್ಲರೂ ಒಂದಾಗಿ ಸಂತೋಷದ ಬದುಕು ಸಾಗಿಸಬೇಕು ಎಂದು ತಿಳಿಸಿದರು.

ಗ್ರಾಮದಲ್ಲಿ ನಡೆದಿರುವ ಘಟನೆಯ ನಿಷ್ಪಕ್ಷಪಾತ

ತನಿಖೆ ನಡೆಸುವ ಜವಾಬ್ದಾರಿ ಪೊಲೀಸ್ ಇಲಾಖೆಯದ್ದಾಗಿರುತ್ತದೆ. ಹಾಗಾಗಿ ಗ್ರಾಮಸ್ಥರು ಶಾಂತಿಯುತವಾಗಿ ಇರಬೇಕು ಎಂದು ಹೇಳಿದರು.

ಪ್ರಮುಖರಾದ ವಿಠಲದಾಸ್ ಪ್ಯಾಗೆ ಮಾತನಾಡಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ ಪೂಜಾರಿ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕ ಸಿಂಧೂ ಎಚ್.ಎಸ್., ತಹಶೀಲ್ದಾರ್ ಮಲ್ಲಿಕಾರ್ಜುನ ವಡ್ಡನಕೇರಿ, ಡಿವೈಎಸ್ಪಿ ಶಿವಾನಂದ ಪವಾಡಶೆಟ್ಟಿ, ಗ್ರೇಡ್–1

ತಹಶೀಲ್ದಾರ್ ಪಲ್ಲವಿ, ಗ್ರಾಮೀಣ ಪೊಲೀಸ್ ಠಾಣೆ ಸಿಪಿಐ ಹನುಮರೆಡ್ಡಿ, ಪ್ರಮುಖರಾದ ಮಹೇಶ ಗೋರನಾಳಕರ್, ವಿಲಾಸ ಮೋರೆ ಸೇರಿದಂತೆ ಪರಿಶಿಷ್ಟ ಜಾತಿ, ಮರಾಠಾ, ಲಿಂಗಾಯತ ಸಮುದಾಯದ ಪ್ರಮುಖರು ಇದ್ದರು.

---

## ಗುರುವಿನ ಕೃಪೆಯಿಂದ ಜೀವನದ ಸಾರ್ಥಕತೆ ಸಾಧ್ಯ

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಅತ್ಯಂತ ಶ್ರೇಷ್ಠ ಸ್ಥಾನವನ್ನು ನೀಡಲಾಗಿದೆ. ಹೇಮರೆಡ್ಡಿ ಮಲ್ಲಮ್ಮ ತನ್ನ ಗುರು ಶ್ರೀಶೈಲ ಮಲ್ಲಿಕಾರ್ಜುನನ್ನು ಭಕ್ತಿಯಿಂದ ವಲಸಿಕೊಂಡು ಮಹಾನ್ ಶಿವಶರಣೆಯಾದಳು, ಮಬ್ಬುಗಂಡನನ್ನು ಮಹಾದೇವನೆಂದು ಮನ್ನಿಸಿ, ಮತಿಗೇಡಿ ಮೈದುನನ್ನು ವೇಮನನ್ನಾಗಿ ಮಾಡಿದಳು ಇದೆಲ್ಲವೂ ಅವಳಿಗೆ ಗುರುವಿನ ಕೃಪೆಯಿಂದಲೇ ಸಾಧ್ಯವಾಯಿತು ಎಂದು ವೇದಮೂರ್ತಿ ಬಸಯ್ಯ ಶಾಸ್ತ್ರಿ(ಯಾಳಗಿ) ಹೇಳಿದರು. ಪಟ್ಟಣದ ಎಸ್ ಕೆ ಬಡಾವಣೆಯ ಶ್ರೀ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನ ಆವರಣದಲ್ಲಿ ಮಲ್ಲಮ್ಮನ 603 ನೇ ಜಯಂತೋತ್ಸವದ ಅಂಗವಾಗಿ ಬುಧವಾರ ಸಂಜೆ ಹಮ್ಮಿಕೊಂಡ ಶ್ರೀ ಹೇಮರೆಡ್ಡಿ ಮಲ್ಲಮ್ಮ ಪುರಾಣ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇಂದು ಮಕ್ಕಳಿಗೆ ವೇದ, ಉಪನಿಷತ್ತು ಹಾಗೂ ವಚನ ಸಾಹಿತ್ಯದ ಅಧ್ಯಯನ ಮಾಡಿಸುವುದು ಅವಶ್ಯವಾಗಿದೆ ಇದರಿಂದ ಮಕ್ಕಳಲ್ಲಿ ಉತ್ತಮ ಸಂಸ್ಕಾರಗಳು ಬೆಳೆಯುತ್ತವೆ ಎಂದರು. ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಜ್ಯೋತಿಷ್ಯರತ್ನ ರಾಮಲಿಂಗಯ್ಯ ಮಹಾಸ್ವಾಮಿಗಳು ಜಗತ್ತಿಗೆ ಬಂದ ಮಹಾಪುರುಷರ ಸಂತರ ಶರಣ–ಶರಣೇಯರ ಬದುಕಿನ ಆದರ್ಶಗಳನ್ನು ತಿಳಿಸಿಕೊಡಲು ಪುರಾಣ ಪ್ರವಚನಗಳನ್ನು ನಡೆಸಲಾಗುತ್ತದೆ ಇಲ್ಲಿ 10 ದಿನಗಳ ಕಾಲ ಬಸಯ್ಯ ಶಾಸ್ತ್ರಿಗಳು ಪುರಾಣ ನಡೆಸಿಕೊಡಲಿದ್ದಾರೆ, ಇದರ ಸದುಪಯೋಗ ಮಾಡಿಕೊಳ್ಳಿ ಎಂದರು. ಕಾರ್ಯಕ್ರಮದಲ್ಲಿ ಕುಮಾರಿ ಗೌರಿ ಹಜೇರಿ ಭರತನಾಟ್ಯ, ಕುಮಾರಿ ಸಾನ್ವಿ ಪಾಟೀಲ ಹೇಮರೆಡ್ಡಿ ಮಲ್ಲಮ್ಮನ ಪಾತ್ರ ಹಾಗೂ ಕುಮಾರ ಸದ್ಭವ ಪಾಟೀಲ ಬಸವಣ್ಣನ ಪಾತ್ರ ಪ್ರದರ್ಶಿಸಿದರು. ಮುಖಂಡ ಸಂಗನಗೌಡ ಅಸ್ಕಿ ಪ್ರಸಾದ ವ್ಯವಸ್ಥೆ ಮಾಡಿದರು. ಮುಖ್ಯ ಶಿಕ್ಷಕಿ ಸುಮಂಗಲಾ ಕೋಳೂರ ಕಾರ್ಯಕ್ರಮ ನಿರ್ವಹಿಸಿದರು. ಈ ವೇಳೆ ಪುರಾಣಿಕ ಸಿ.ಎನ್.ಹಿರೇಮಠ, ಎಸ್.ಎಂ.ಬೇನಾಳ ಮಠ, ಶರಣೆ ಶಾಂತಮ್ಮ ಕೋಳೂರ, ಕಾಶಿಬಾಯಿ ಅಮ್ಮನವರು, ಹೇಮರೆಡ್ಡಿ ಮಲ್ಲಮ್ಮ ಅಸೋಸಿಯೇಷನ್ ಉಪಾಧ್ಯಕ್ಷ ಎಚ್.ಎಸ್.ಪಾಟೀಲ, ಪ್ರಧಾನ ಕಾರ್ಯದರ್ಶಿ ಪ್ರಭುಗೌಡ ಮದರಕಲ್ಲ, ಸಿದ್ದನಗೌಡ ಪಾಟೀಲ (ನಾವದಗಿ), ಬಿ.ಎನ್.ಹಿಪ್ಪರಗಿ, ಚೆನ್ನಪ್ಪ ಮಾಳಿ, ಬಿ.ಆರ್.ಪೊಲೀಸ್ ಪಾಟೀಲ, ಹಾಗೂ ಸಮಾಜದ ಗಣ್ಯರು ಹಿರಿಯರು ಇದ್ದರು.

# ವಿಶ್ವ ಕಾರ್ಮಿಕರ ದಿನಾಚರಣೆ; ಕಾರ್ಮಿಕರು ಪರಿಶ್ರಮದಿಂದಲೇ ದೇಶ ಕಟ್ಟುವ ಛಲಗಾರರಿವರು,




ಮಲ್ಲಮ್ಮ ನುಡಿ ವಾರ್ತೆ

ಶಹಾಪುರ.ಕಾರ್ಮಿಕರಿಗೆ ಗೌರವಯುತ ಬದುಕು ಕಟ್ಟಿಕೊಡಬೇಕು. ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಬೇಕು. ಕಠಿಣ ಪರಿಶ್ರಮದಿಂದಲೇ ದೇಶ ಕಟ್ಟುವ ಛಲಗಾರರಿವರು ಎಂದು ಅಂಗನವಾಡಿ ನೌಕರರ ಸಂಘದ ತಾಲೂಕ ಅಧ್ಯಕ್ಷ ಬಸಲಿಂಗಮ್ಮ ನಾಟೇಕರ್ ತಿಳಿಸಿದರು.

ತಾಲೂಕಿನ ಹತ್ತಿಗೂಡೂರು ಗ್ರಾಮದಲ್ಲಿ ಅಂಗನವಾಡಿ ನೌಕರರ ಸಂಘ ಸಿಐಟಿಯು ಸಂಯೋಜನೆಯಲ್ಲಿ ಆಯೋಜಿಸಲಾದ ವಿಶ್ವ ಕಾರ್ಮಿಕ ದಿನಾಚರಣೆ ಅಂಗವಾಗಿ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಕಾರ್ಮಿಕರಿದ್ದರೆಉತ್ಪಾದನೆಯಾಗುತ್ತದೆ. ಉತ್ಪಾದನೆಯಾದರೆ ಮಾತ್ರ ದೇಶದಲ್ಲಿ ಸುಭೀಕ್ಷೆಯಿರುತ್ತದೆ. ದೇಶ ಸುಭೀಕ್ಷೆಯಿಂದಿದ್ದರೆ ದೇಶ ಆರ್ಥಿಕವಾಗಿ ಅಭಿವೃದ್ಧಿಯಾಗಲು ಸಾಧ್ಯ. ಇಂತಹ ಕಾರ್ಮಿಕ ವರ್ಗಕ್ಕೆ ಸರಕಾರ ನ್ಯಾಯಯುತವಾಗಿ ಸಲ್ಲಬೇಕಾದ ಸೌಲಭ್ಯಗಳನ್ನು ಕೊಡಬೇಕು. ಅಂಗನವಾಡಿ, ಅಕ್ಷರ ದಾಸೋಹ, ಪಂಚಾಯಿತಿ ಸೇರಿದಂತೆ ಹಲೋ ಸಂಸ್ಥೆಗಳಲ್ಲಿ ಕೆಲಸನಿರ್ವಹಿಸುವ ಕಾರ್ಮಿಕರನ್ನು ಖಾಯಂಗೊಳಿಸಬೇಕು. ಅಲ್ಲಿವರೆಗೆ ಕನಿಷ್ಠ 31 ಸಾವಿರ ರೂಪಾಯಿ ವೇತನ ನೀಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಈ ಕಾರ್ಯಕ್ರಮದಲ್ಲಿ ಕಾರ್ಮಿಕ ಧ್ವಜಾರೋಹಣ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಗ್ರಾಮ ಪಂಚಾಯಿತಿ ಅಧ್ಯಕ್ಷ ಷಣ್ಮುಖಪ್ಪ ಹೊಸಮನಿ ಅವರು, ಹೆಚ್ಚಾಗಿ ಬಹುತೇಕ ಕಾರ್ಮಿಕರು ಕೆಲಸಕ್ಕಾಗಿ ವಲಸೆ ದೂರದ ನಗರ, ಪಟ್ಟಣಗಳಿಗೆ ಹೋಗುತ್ತಾರೆ. ಕೆಲಸದ ಸ್ಥಳದಲ್ಲಿ, ವಿಶೇಷವಾಗಿ ಆರೋಗ್ಯಕ್ಕೆಸಂಬಂಧಿಸಿದಂತೆ ವಿಶಿಷ್ಟ ಸವಾಲುಗಳನ್ನು ಎದುರಿಸುತ್ತಾರೆ. ಕಾರ್ಮಿಕರಲ್ಲಿ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಿಂದ ಬಂದವರು, ನಗರಗಳಲ್ಲಿ ವಸತಿ ಪಡೆಯಲು ಸಾಧ್ಯವಿಲ್ಲ ಮತ್ತು ಹೀಗಾಗಿ ಕೊಳೆಗೇರಿಗಳಲ್ಲಿ ವಾಸಿಸುತ್ತಾರೆ. ಅನೇಕ ರೋಗ ರುಜಿನಗಳಿಗೆ ತುತ್ತಾಗುತ್ತಾರೆ. ಕಾರ್ಮಿಕರಿಗೆ ಸರ್ಕಾರ ವಿಶೇಷ ರಕ್ಷಣೆ ಮತ್ತು ಸೌಲಭ್ಯಗಳನ್ನು ನೀಡಬೇಕು. ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಒಗ್ಗಟ್ಟಾಗಿ ಹೋರಾಟ ಮಾಡಬೇಕು ಎಂದರು.

ಇದೆವೇಳೆ ಮಾತನಾಡಿದ ಸಿಐಟಿಯು ತಾಲೂಕ ಸಂಚಾಲಕ ಮಲ್ಲಯ್ಯ ಪೋಲಂಪಲ್ಲಿ ಅವರು, ಅಂದಿನ ದಿನಮಾನಗಳಲ್ಲಿ ಕಾರ್ಮಿಕರಿಗೆ ಕನಿಷ್ಠ ಸೌಲಭ್ಯವೂ ಸಿಗುತ್ತಿರಲಿಲ್ಲ. ಪ್ರಾಣಿಗಳ ರೀತಿ ಕಾರ್ಮಿಕರನ್ನು ನಡೆಸಿಕೊಳ್ಳಲಾಗುತಿತ್ತು. ಕಾರ್ಮಿಕರ ಶ್ರಮ, ಬೆವರು ಮಾಲೀಕರ ಖಜಾನೆ ತುಂಬಿಸುತಿತ್ತೇ ಹೊರತು ಲಾಭದ ಒಂದಂಶವೂ ಕಾರ್ಮಿಕರಿಗೆ ತಲುಪುತ್ತಿರಲಿಲ್ಲ. ಮೂಲಭೂತ ಸೌಕರ್ಯ, ವೈದ್ಯಕೀಯ, ಶಿಕ್ಷಣ ಸೌಲಭ್ಯಗಳಂತೂ ಮರೀಚಿಕೆಯಾಗಿತ್ತು. ಕಾರ್ಮಿಕರ ಹಿತ ರಕ್ಷಣೆಯ ಯಾವುದೇ ಕಾನೂನುಗಳು, ಒಪ್ಪಂದಗಳು ಇರದಿದ್ದ ಕಾಲವದು. ಅಂತಹ ಪ್ರತಿಕೂಲದ ಕಾಲಘಟ್ಟದಲ್ಲಿ ಕಾರ್ಮಿಕರನ್ನು ಸಂಘಟಿಸಿ, ಒಗ್ಗೂಡಿಸಿ, ಹೋರಾಟಕ್ಕೆ ಅಣಿಗೊಳಿಸಿ 1886 ರಲ್ಲಿ ನಡೆದ ಹೋರಾಟ ಚಾರಿತ್ರಿಕವಾಗಿ ದಾಖಲಾಯಿತು. ಕೊನೆಗೂ ಹೋರಾಟ, ತ್ಯಾಗ, ಬಲಿದಾನದ ಫಲವಾಗಿ ಕಾರ್ಮಿಕರ ಹೋರಾಟವು ವಿಜಯದಲ್ಲಿ ಅಂತ್ಯಗೊಂಡಿತು. ನ್ಯಾಯಯುತ ಬೇಡಿಕೆಯಾದ ಕಾರ್ಮಿಕರಿಗೆ ದಿನದ 8 ಘಂ–ಟೆಯ ಕೆಲಸದ ಅವಧಿ ಜಾರಿಗೆ ಬಂತು. 8 ಘಂಟೆ ಕೆಲಸ – 8 ಘಂಟೆ ಸಾಮಾಜಿಕ ಜೀವನ – 8 ಘಂಟೆ ವಿಶ್ರಾಂತಿ ಎಂಬ ಪರಿಕಲ್ಪನೆಯು ವಿಶ್ವದಾದ್ಯಂತ ಜಾರಿಯಾಯಿತು. ಲಕ್ಷಾಂತರ ಕಾರ್ಮಿಕರ ತ್ಯಾಗ ಬಲಿದಾನದ ಮೂಲಕ ನ್ಯಾಯಯುತ ಕಾರ್ಮಿಕರ ಬೇಡಿಕೆ ಈಡೇರಿದೆ ಎಂದರು.

ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಮುಖಂಡ ಹಣಮಂತ ಕೊಂಗಂಡಿ ಅವರು, ಅನೇಕ ಸಮಸ್ಯೆ, ಸವಾಲುಗಳ ನಡುವೆಯೇ ಮೇ ಡೇ ಆಚರಣೆ ಮಾಡಲಾಗುತ್ತಿದೆ. ಪ್ರತಿಯೊಬ್ಬ ಶ್ರಮಿಕನು ಕಾರ್ಮಿಕ ವರ್ಗದ ಪ್ರಸ್ತುತ ಸನ್ನಿವೇಶ, ಮುಂದಿರುವ ಸಮಸ್ಯೆಗಳು ಸವಾಲುಗಳು, ಅದಕ್ಕೆ ತಕ್ಕನಾಗಿ ಭವಿಷ್ಯದಲ್ಲಿ ರೂಪಿಸಬೇಕಾದ ಹೋರಾಟ ಇವುಗಳ ಕುರಿತಾಗಿ ಚಿಂತನೆ ನಡೆಸಿ ತತ್ವ ಸಿದ್ಧಾಂತಗಳ ಮೂಲಕ ಪ್ರಬಲ ಕಾರ್ಮಿಕ ಮುಖಂಡನಾಗಿ ಹೊರಹೊಮ್ಮಿ ಕಾರ್ಮಿಕ ವರ್ಗವನ್ನು ಮುನ್ನೆಡೆಸುವ ಪ್ರತಿಜ್ಞೆಯನ್ನು ಮಾಡುವ ಮೂಲಕ ಕಾರ್ಮಿಕ ದಿನವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಬೇಕಾದ ಅಗತ್ಯವಿದೆ ಎಂದರು.

ಈ ಕಾರ್ಯಕ್ರಮದಲ್ಲಿ, ಅಂಗನವಾಡಿ ನೌಕರರ ಸಂಘದ ವಡಗೇರ ತಾಲೂಕ ಅಧ್ಯಕ್ಷೆ ಇಂದಿರಾ ದೇವಿ ಕೊಂಕಲ್, ಶಹಾಪುರ ತಾಲೂಕ ಖಜಾಂಚಿ ಲಕ್ಷ್ಮೀ ಶಹಾಪುರ, ಪಂಚಾಯಿತಿ ನೌಕರ ಸಂಘದ ಜಿಲ್ಲಾ ಖಜಾಂಚಿ ಮಲ್ಲಣ್ಣ ಬಿರಾದಾರ್, ಪಂಚಾಯಿತಿ ನೌಕರ ಸಂಘದ ತಾಲೂಕ ಅಧ್ಯಕ್ಷ ಅಮ್ರಪ್ಪ ಸಗರ್ ಸೇರಿದಂತೆ ಅಂಗನವಾಡಿ, ಪಂಚಾಯಿತಿ, ಅಕ್ಷರ ದಾಸೋಹ ಹಾಗೂ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

# ಭಾರತೀಯ ತತ್ವ ಶಾಸ್ತ್ರಕಕ್ಕೆ ಹೊಸ ಜೀವಕಳೆಯನ್ನು ಒದಗಿಸಿದವರು,ಶಂಕರಚಾರ್ಯರು–ಎಸ್.ಬಿ.ಹುಲಸೂರೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ–ತಮ್ಮ ಎಂಟು ವರುಷದ ವರಿರುವಾಗಲೇ ಶಂಕರಚಾರ್ಯರು ನಾಲ್ಕುವೇದಗಳನ್ನು ಅಧ್ಯಯನ ಮಾಡಿದವರು, ಹನ್ನೆರಡನೇಯ ವಯಸ್ಸಿನಲ್ಲಿ ಎಲ್ಲ ಶಾಸ್ತ್ರಗಳನ್ನು ಅರಿತಿದ್ದರು ಹಾಗೂ ಹದಿನಾರನೇ ವಯಸ್ಸಿನಲ್ಲಿ ಭಾಷ್ಯಯನ್ನು ಬರೆದು ಮೂವತೆರಡನೇ ವಯಸ್ಸಿಗೆ ತಮ್ಮ ಶಶರೀರವನ್ನು ತ್ಯಾಗಮಾಡಿದವರು. ಈ ಅಪ್ರತಿಮ ಸಾಧನೆಯನ್ನು ಕಂಡು ಜನರು ಅವರನ್ನು ಶಿವನ ಅವತಾರವೇ ಎಂದು ಗುರುತಿಸಿಕೊಂಡಿದ್ದರು. ಈ ಸೃಷ್ಟೀಕರ್ತನ ಸೃಷ್ಟಿಯಲ್ಲಿರುವುದು ಒಂದೇ ವಸ್ತು ಅದೇ ಬ್ರಹ್ಮ ಈ ಬ್ರಹ್ಮಾಂಡದ ಅನುಭಾವವೇ ಆನಂದ ಅನುಭವವಾಗಿದೆ ಹೀಗಾಗಿ ಎಲ್ಲಲ್ಲಿಯೂ ಬ್ರಹ್ಮವೇ ಆಗಿರುವಾಗ ಎಲ್ಲವೂ ಬ್ರಹ್ಮವೇ ಆಗಿದೆ ಇಲ್ಲಿ ಬೇಧ ಭಾವಕ್ಕೆ ಅವಕಾಶ ಇಲ್ಲ ನಮ್ಮಲ್ಲಿರುವ ಅಜ್ಞಾನವನ್ನು ಹೊಗಲಾಡಿಸಿಕೊಂಡರೆ ಸಾಕು ಎಂದು ತಮ್ಮ ಕಾಲದಲ್ಲಿಯೇ ಪ್ರತಿಪಾದಿಸಿದ್ದಾರೆ. ಸಂಸ್ಕೃತದಲ್ಲಿ ಅದ್ವೈತ ಎಂದರೆ ಎರಡಲ್ಲದ್ದು ಎಂದರ್ಥ ಈ ಸಿದ್ದಂತದ ಮೂಲ ಸಾರ ಆತ್ಮ ಮತ್ತು ಪರಮಾತ್ಮ ಎಂಬ ಬೇರೆ ಅಲ್ಲ ಪರ ಆತ್ಮದ ಪರಮಾತ್ಮ ಅಹಂ ಬ್ರಹ್ಮಾಸ್ಮಿ ತತ್ ತ್ವಮ್ ಅಸಿ ಎಂದು ಅದ್ವೈತ ತತ್ವದ ಮೂಲಕ ಸನಾತನ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಶಂಕರಚಾರ್ಯರು ಮೊದಲಿಗರು ಹೀಗಾಗಿ ನಮ್ಮ ಭಾರತೀಯ ತತ್ವ ಶಾಸ್ತ್ರಕ್ಕೆ ಹೊಸ ಜೀವಕಳೆಯನ್ನು ನೀಡಿದವರು ಎಂದು ಎಸ. ಬಿ ಹುಲಸೂರೆ ಅಭಿಪ್ರಾಯ ಪಟ್ಟರು ಇವರು ದಿನಾಂಕ: 02.05.2025 ರಂದು ಪಟ್ಟಣದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಬಾಲಭಾರತಿ ವಿದ್ಯಾಮಂದಿರ ಶಾಲೆಯಲ್ಲಿ ಶಂಕರಚಾರ್ಯರ ಜಯಂತಿಯಂದು ಶಂಕರರ ಭಾವಚಿತ್ರಕ್ಕೆ ಪೂಜೆನೆರವೇರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶಾಲೆಯ ಸಿಬ್ಬಂದ್ದಿಯವರು ರಾಜಕುಮಾರ ಹೊಸಮನಿ ಸಂಗೀತಾ ಬೇನೂರ ವೀರಶೆಟ್ಟಿ ಜೀರಗಿ ಶ್ರೀಮತಿ ಸರಸ್ವತಿ ಪಟವಾದಿ ಹಾಗೂ ಶಾಲೆಯ ಮುದ್ದುಮಕ್ಕಳು ಮುಂತಾದವರು ಭಾಗವಹಿಸಿದರು.

# ಸಂತೋಷ್ ಲಾಡ್ ರವರು ಭಾಷಣ ಕಮ್ಮಿ ಮಾಡಿ ಕಾರ್ಮಿಕರ ಕಡೆಗೆ ಗಮನಹರಿಸಲಿ: ಬಂಡೆಪ್ಪ ಖಾಶೆಂಪುರ್




ಮಲ್ಲಮ್ಮ ನುಡಿ ವಾರ್ತೆ

ಬೀದರ್ (ಮೇ.02): ಕಾರ್ಮಿಕ ಸಚಿವರಾದ ಸಂತೋಷ್ ಲಾಡ್ ರವರು ಭಾಷಣ ಮಾಡುವುದನ್ನು ಕಮ್ಮಿ ಮಾಡಿ, ತಮ್ಮ ಇಲಾಖೆಯ ಕಾರ್ಮಿಕರ ಕಲ್ಯಾಣದ ಕಡೆಗೆ ಗಮನಹರಿಸಬೇಕು ಎಂದು ಮಾಜಿ ಸಚಿವರು, ಜೆಡಿಎಸ್ ಪಕ್ಷದ ಹಿರಿಯ ನಾಯಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರು ಆಗ್ರಹಿಸಿದರು.

ಕರುನಾಡ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಹಾಗೂ ಗಿಲಾವ್ ಕಾರ್ಮಿಕರ ಸಂಘ ಬೀದರ್, ಇಂಡಿಯನ್ ಕಾಂಕ್ರೀಟ್ ಇನ್ಸಿಟ್ಯೂಟ್, ಕ್ರೆಡೈ ಬೀದರ್ ಸಂಘ, ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಬೀದರ್ ನಗರದ ಮಯೂರಾ ಕನ್ವೆನ್ಷನ್ ಹಾಲ್ ನಲ್ಲಿ ಗುರುವಾರ ನಡೆದ ವಿಶ್ವಕಾರ್ಮಿಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಕಾರ್ಮಿಕರಿಗೆ ಶುಭ ಕೋರಿ ಅವರು ಮಾತನಾಡಿದರು.

ಸಂತೋಷ್ ಲಾಡ್ ರವರು ಯುವಕರಿದ್ದಾರೆ. ಯುವ ಸಚಿವರಾಗಿರುವ ಅವರು ರಾಜ್ಯ ಮತ್ತು ಅವರ ಇಲಾಖೆಯನ್ನು ನೋಡಿಕೊಂಡ್ರೆ ಒಳ್ಳೆಯದು. ಕೇಂದ್ರ ಮತ್ತು ಮೋದಿಯವರ ಬಗ್ಗೆ ಬೇರೆಯವರು ಚಿಂತೆ ಮಾಡಲಿ ಬಟ್ ಲಾಡ್ ರವರು ಚಿಂತೆ ಮಾಡುವುದು ಬೇಕಾಗಿಲ್ಲ. ಇತ್ತೀಚಿನ ದಿನಗಳಲ್ಲಿ ಸಂತೋಷ್ ಲಾಡ್ ರವರು ತಮ್ಮ ಇಲಾಖೆಯ ಬಗ್ಗೆ ಮಾತಾಡ್ತಿಲ್ಲ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳ ಬಗ್ಗೆ ಮಾತಾಡ್ತಿದ್ದಾರೆ.

ಲಾಡ್ ಅವರು ರಾಜ್ಯದಲ್ಲಿ ಮಾಡಬೇಕಾಗಿರುವ ಕೆಲಸ ಬಹಳಷ್ಟು ಇದೆ. ಬೇರೆಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಕಾರ್ಮಿಕರಿಗೆ ಒಳ್ಳೆಯ ಯೋಜನೆ, ಸೌಲಭ್ಯ ನೀಡಿದ್ದಿವಿ ಎಂಬ ಒಳ್ಳೆಯ ಉದಾಹಾರಣೆ ಅವರಾಗಲಿ. ಸಂತೋಷ್ ಲಾಡ್ ರವರು ನನ್ನ ಸ್ನೇಹಿತರಾಗಿರುವುದರಿಂದ ನಾನು ಅವರಿಗೆ ಈ ಮಾತುಗಳನ್ನು ಹೇಳ್ತಿದ್ದಿನಿ ಎಂದು ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ರವರು ತಿಳಿಸಿದರು.

ಕಾರ್ಮಿಕರ ದಿನ ಅನ್ನೋದು ವಿಶ್ವದಲ್ಲಿಯೇ ದೊಡ್ಡ ಹಬ್ಬ ಇದ್ದಂತೆ:

ಕಾರ್ಮಿಕರ ದಿನ ಅನ್ನೋದು ವಿಶ್ವದಲ್ಲಿಯೇ ದೊಡ್ಡ ಹಬ್ಬ ಇದ್ದಂತೆ. ಈ ದಿನ ವಿಶ್ವದೆಲ್ಲಡೇ ರಜೆ ಇರುತ್ತದೆ. ಬೇರೆಬೇರೆ ಹಬ್ಬ ಹರಿದಿನಗಳು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿ ಕಂಡುಬರುತ್ತವೆ. ಆದರೇ ಕಾರ್ಮಿಕರ ದಿನಾಚರಣೆ ವಿಶ್ವದೆಲ್ಲೆಡೆ ಒಂದೇ ದಿನ ಆಚರಿಸಲಾಗುತ್ತದೆ.

ಎಲ್ಲಾ ರಂಗಗಳಲ್ಲಿ ಕಾರ್ಮಿಕರ ಅವಶ್ಯಕತೆ ಇದ್ದೆ ಇರುತ್ತದೆ. ಕಲ್ಲು ಎಂತದ್ದೆ ಇದ್ದರು .

ಕೂಡ ಕಾರ್ಮಿಕ ಅದನ್ನು ಕೆತ್ತನೆ ಮಾಡುತ್ತಾನೆ. ಅದು ಮುಖ್ಯವಾಗಿರುತ್ತದೆ. ಕಾರ್ಮಿಕರ ಹೆಸರಲ್ಲಿ ಸಾಕಷ್ಟು ಸೇಸ್ ಸಂಗ್ರಹವಾಗುತ್ತದೆ. ಕಲೆಕ್ಟ್ ಆಗಿ–ರೋ ಸೇಸ್ ದುಡ್ಡಿನ ಬಡ್ಡಿಯ ಮೇಲೆಯೇ ಸರ್ಕಾರಗಳು ನಡೆಯುತ್ತವೆ. ಕಾರ್ಮಿಕರ ನಿಧಿ ಸಾವಿರಾರು ಕೋಟಿ ರೂ. ಇರುತ್ತದೆ. ಅಷ್ಟೊಂದು ದೊಡ್ಡ ಬಜೆಟ್ ಕಾರ್ಮಿಕ ಇಲಾಖೆಯಲ್ಲಿ ಇರುತ್ತದೆ.

ಕಾರ್ಮಿಕರಿಂದ ಕಲೆಕ್ಟ್ ಆಗುವ ದುಡ್ಡನ್ನು ಬೇರೆ ಬೇರೆ ಕಾರಣಗಳಿಗೆ ಬಳಸಿಕೊಳ್ಳಬಾರದು. ಆ ದುಡ್ಡು ಕೇವಲ ಕಾರ್ಮಿಕರಿಗಾಗಿ ಮಾತ್ರ ಬಳಕೆಯಾಗಬೇಕು ಎಂಬ ಒತ್ತಾಯವನ್ನು ನಾನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇನೆ.

ತಂತ್ರಜ್ಞಾನ ದ ಫಲವಾಗಿ ಕಾರ್ಮಿಕರ ಕೆಲಸಗಳಿಗೆ ಕುತ್ತು ಬರುತ್ತಿದೆ.

ಹತ್ತು ದಿನದ ಕೆಲಸ ಒಂದೇ ದಿನದಲ್ಲಿ ಆಗುತ್ತಿದೆ. ಇದು ಕಾರ್ಮಿಕ ವರ್ಗಕ್ಕೆ ಸಾಕಷ್ಟು ಪೆಟ್ಟುಂಟು ಮಾಡುತ್ತಿದೆ. ಸರ್ಕಾರಗಳು ಮತ್ತೆ ಮತ್ತೆ ಕಾರ್ಮಿಕರಿಗೆ ಕೆಲಸಗಳನ್ನು ಒದಗಿಸಿಕೊಡಬೇಕು. ಕಾರ್ಮಿಕರ ಸಮಸ್ಯೆಗಳನ್ನು, ಅವರ ಬೇಡಿಕೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಸಾಗಬೇಕು. ಕಾರ್ಮಿಕರು ಬಳಸುವ ಉಪಕರಣಗಳಿಗೂ ಕೂಡ ಸರ್ಕಾರಗಳು ಸಹಾಯಧನ ಕಲ್ಪಿಸಬೇಕು ಎಂದು ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ರವರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಅವಶೆಟ್ಟಿ ಪಾಟೀಲ್, ರವಿ ಮೂಲ್ಗೆ, ಶ್ರೀನಿವಾಸ್ ಸಾಳೆ, ಸಂಜುಕುಮಾರ್ ಸಿಂಧೆ, ಗಣೇಶ್ ನಿಡವಂಚ, ಸಿದ್ದು, ಸತೀಶ್ ವಗ್ಗೆ ಸೇರಿದಂತೆ ಅನೇಕರಿದ್ದರು.

# ಕಾಂತರಾಜು ವರದಿ ಜಾರಿಗೊಳಿಸಿ ಬಸವರಾಜ ಮಾಳಗೆ




ಮಲ್ಲಮ್ಮ ನುಡಿ ವಾರ್ತೆ

ಬೀದರ.ಮೇ.02:–ಸುಮಾರು 165 ಕೋಟಿ ರೂಪಾಯಿ ವೆಚ್ಚ ಮಾಡಿ ಸಮೀಕ್ಷೆ ನಡೆಸಿ ಸರ್ಕಾರ–ಕ್ಕೆ ವರದಿ ಒಪ್ಪಿಸಿದ ಹೆಚ್. ಕಾಂತರಾಜು ವರದಿ ಕೂಡಲೇ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಜಾರಿ ಮಾಡಬೇಕು. ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಮಾತು ಕೇಳಿ ವಿಳಂಬ ಮಾಡಬಾರದು. ನಿಮ್ಮೊಂದಿಗೆ ನಾವಿದ್ದೇವೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಮತ್ತು ಶೋಷಿತ ಸಮುದಾಯಗಳ ಒಕ್ಕೂಟದ ಗೌರವಾಧ್ಯಕ್ಷ ಬಸವರಾಜ ಮಾಳಗೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಕ–ರೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕೈಗೊಂಡು ವರದಿಯನ್ನು ರಾಜ್ಯ ಸರ್ಕಾರ–ಕ್ಕೆ ಸಲ್ಲಿಸಲಾಗಿದೆ. ಇದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಹಾಗೂ ಇತರೆ ಜಾತಿಗಳನ್ನು ಒಳಗೊಂಡ ರಾಜ್ಯದ ಪ್ರತಿಯೊಂದು ಕುಟುಂಬದ ಸಮಗ್ರ ಸಮೀಕ್ಷೆಯು ಇದೊಂದು ರಾಜ್ಯ ಸರ್ಕಾರಕ್ಕೆ ಕೈಗನ್ನಡಿಯಾಗಿದೆ. ಇದು ಜಾರಿಗೊಳಿಸುವುದರಿಂದ ಜನಸಂಖ್ಯೆ ಆಧಾರದ ಮೇಲೆ ಸಾಮಾಜಿಕ ನ್ಯಾಯ ಸಿಗುತ್ತದೆ ಎಂದು ತಿಳಿಸಿದರು. ಕೆಲವರು ಪೂರ್ವಾಗ್ರಹಪೀಡಿತರಾಗಿ ಈ ವರದಿ ಜಾರಿಗೊಳಿಸಲು ವಿರೋಧ ಮಾಡುತ್ತಿರುವುದು ಸಮಂಜಸವಲ್ಲ ಎಂದರು.

ಸಂವಿಧಾನ ಸಂರಕ್ಷಣಾ ಸಮಿತಿ ಪ್ರಧಾನ ಕಾರ್ಯದರ್ಶಿ ಅನೀಲಕುಮಾರ ಬೆಲ್ದಾರ್ ಮಾತನಾಡಿ 2015ರಲ್ಲಿ ಶೋಷಿತ ಸಮುದಾಯಗಳ ಹಿತದೃಷ್ಟಿಯಿಂದ ಸುಮಾರು 165 ಕೋಟಿ ಹಣ ಖರ್ಚು ಮಾಡಿ ಅಧಿಕಾರಿಗಳಿಂದ ಶಿಕ್ಷಕರಿಂದ ಸಮೀಕ್ಷೆ ಮಾಡಿಸಿದ್ದಾರೆ. ರಾಜ್ಯ ಚುನಾವಣಾ ಸಮಯದಲ್ಲಿ ತಾನು ನೀಡಿರುವ ಪ್ರಣಾಳಿಕೆಗೆ ಅನುಗುಣವಾಗಿ ಮತ್ತು ಸಾಮಾಜಿಕ ನ್ಯಾಯದ ಬದ್ಧತೆಯಿಂದ ಕಾಂತರಾಜು ವರದಿಯನ್ನು ಯಥಾವತ್ತಾಗಿ ಅಂಗೀಕರಿಸಿ ಜಾರಿಗೊಳಿಸಬೇಕು. ವಿಳಂಬ ಮಾಡದೆ ಜಾರಿಗೊಳಿಸಬೇಕೆಂದು ನಮ್ಮ ಒಕ್ಕೂಟ ಒತ್ತಾಯಿಸುತ್ತದೆ ಎಂದರು.

ದಲಿತ ಸಂಘರ್ಷ ಸಮಿತಿಯ ಮುಖಂಡರಾದ ರಮೇಶ ಡಾಕುಳಗಿ ಮಾತನಾಡಿ ಮುಖ್ಯಮಂತ್ರಿಗಳು ಯಾರಿಗೂ ಅಂಜದೆ ಅಳುಕದೆ ಕಾಂತರಾಜು ವರದಿ ಜಾರಿಗೆ ತರಬೇಕು. ನಿಮ್ಮೊಂದಿಗೆ ಹೋರಾಟದ ಮಾತೃಸಂಸ್ಥೆಯಾದ ದಲಿತ ಸಂಘರ್ಷ ಸಮಿತಿ ಸದಾ ಇರುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಡಾ.ರಾಜಶೇಖರ ಸೇಡಂಕರ್, ಪ್ರಧಾನ ಕಾರ್ಯದರ್ಶಿ ಜಗನ್ನಾಥ ಉಪ್ಪಾರ್, ಉಪಾಧ್ಯಕ್ಷ ತಾನಾಜಿ ಸಗರ, ವಿಶ್ವಕರ್ಮ ಸಮಾಜದ ಅಧ್ಯಕ್ಷ ಮಹೇಶ ಪಾಂಚಾಳ, ಗೊಂಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ತುಕಾರಾಮ ಚಿಮಕೋಡ, ಪ್ರಮುಖರಾದ ಸುನೀಲ ಖಾಶೆಂಪೂರ್, ಶಂಕರರಾವ ಬಿರಾದಾರ, ಸುರೇಶ ಮೆಧಾ, ಸುಭಾಷ ಹಮಿಲಾಪುರ, ರಮೇಶ ಪೋಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಾರ್ಮಿಕರೇ ದೇಶದ ಬೆನ್ನೆಲುಬು : ರಾಮಚಂದ್ರ ಬಸೂದೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಮೇ.2:ದೇಶದ ಅಭಿವೃದ್ಧಿಗೆ ಕಾರ್ಮಿಕರ ಶ್ರಮವೇ ಆಧಾರವಾಗಿದೆ. ಕಾರ್ಮಿಕರೇ ದೇಶದ ಬೆನ್ನೆಲುಬು ಆಗಿದ್ದಾರೆ ಎಂದು ತಾಲೂಕು ಸಹಾಯಕ ನಿರ್ದೇಶಕ ರಾಮಚಂದ್ರ ಬಸೂದೆ ಅಭಿಪ್ರಾಯಪಟ್ಟರು. ಗುರುಮಠಕಲ್ ತಾಲೂಕಿನ

ಗಾಜರಕೋಟ ಗ್ರಾಮದ ಕೆರೆ ಹುಳೆತ್ತುವ ಸ್ಥಳದಲ್ಲಿ ವಿಶ್ವಕಾರ್ಮಿಕರ ದಿನದ ಅಂಗವಾಗಿ ಕೂಲಿಕಾರರ ಜೊತೆ ಕೇಕ್ ಕತ್ತರಿಸಿ ಹಿರಿಯ ಕೂಲಿಕಾರರಿಗೆ ಸನ್ಮಾನಿಸಿ ಅವರು ಮಾತನಾಡಿದರು. ದೇಶದ ಆರ್ಥಿಕ ಪ್ರಗತಿಗೆ ಕೂಲಿ ಕಾರ್ಮಿಕರ ಕಾರ್ಯ ಬಹಳ ಮುಖ್ಯವಾಗಿದೆ. ಪ್ರತಿಯೊಂದು ದೇಶದ ಆರ್ಥಿಕ ಅಭಿವೃದ್ಧಿ ಆ ದೇಶದ ಕಾರ್ಮಿಕರನ್ನು ಅವಲಂಬಿಸಿದೆ. ಕಾರ್ಮಿಕರಿಲ್ಲದೆ ದೇಶದ ಅಭಿವೃದ್ಧಿ ಅಸಾಧ್ಯ ಎಂದರು. ಕಾರ್ಮಿಕರು ಹಗಲು–ರಾತ್ರಿ, ಬಿಸಿಲು–ಮಳೆ ಎನ್ನದೆ ಸಮರ್ಪಣಾ ಭಾವದಿಂದ ಕಠಿಣ ಶ್ರಮ ವಹಿಸಿ ದುಡಿಯುತ್ತಾ–ರೆ. ಶ್ರಮ ಜೀವಿಗಳ ಕೆಲಸದ ಕೊಡುಗೆಯನ್ನು ಗೌರವಿಸುವ ಹಾಗೂ ಶ್ರಮಜೀವಿಗಳನ್ನು ಸ್ಮರಿಸಲು ಪ್ರತಿವರ್ಷ ಮೇ 1 ರಂದು ಅಂತಾರಾಷ್ಟ್ರೀಯ ಕಾರ್ಮಿಕರ ದಿನ ಆಚರಿಸಲಾಗುತ್ತದೆ ಎಂದರು. ಕಾರ್ಮಿಕರ ಕಾಯ್ದೆ ಮತ್ತು ಹಕ್ಕುಗಳ ಕುರಿತು ಅರಿತುಕೊಳ್ಳಬೇಕು. ಕಾರ್ಮಿಕರಿಗೆ ಸಿಗುವ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದರು. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಅಡಿ ಗಂಡು ಹೆಣ್ಣಿಗೂ ಸಮಾನ ಕೂಲಿ ದರ 370 ರೂಪಾಯಿ ಇದೆ. ಹೆಚ್ಚಿನ ಸಂಖ್ಯೆಯಲ್ಲಿ ಕೂಲಿ ಕಾರ್ಮಿಕರು ಭಾಗವಹಿಸಬೇಕು. ಸಮುದಾಯ ಕಾಮಗಾರಿಗಳಲ್ಲಿ ಪಾಲ್ಗೊಳ್ಳುವುದರ ಜೊತೆಗೆ ವೈಯಕ್ತಿಕ ಕಾಮಗಾರಿಗಳಾದ ಕ್ಷೇತ್ರಬದು, ಕೃಷಿಹೊಂಡ ನಿಮ್ಮ ಹೊಲಗಳಲ್ಲಿ ನಿರ್ಮಿಸಲು ನಿಮ್ಮ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಕೆಲಸಪಡೆದುಕೊಳ್ಳಿ ಎಂದು ವಿನಂತಿಸಿದರು. ಗಾಜರಕೋಟ ಮತ್ತು ಪಸಪೂಲ್ ಗ್ರಾಮ ಪಂಚಾಯಿತಿಗಳಲ್ಲಿ ವಿಶ್ವಕಾರ್ಮಿಕ ದಿನದ ಅಂಗವಾಗಿ ಕೂಲಿಕಾರ್ಮಿಕರು ಕೇಕ್ ಕತ್ತರಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಬಿ ಎಫ್ ಟಿ ಯಂಕಣ್ಣ, ಮೇಟಿಗಳಾದ ಭೀಮರಾಯ, ಕಾಳಮ್ಮ ನಾಶಿ, ಐಇಸಿ ತಾಲೂಕು ಸಂಯೋಜಕ ರಾಘವೇಂದ್ರ ಹಾಗೂ ಪಂಚಾಯತಿ ಸಿಬ್ಬಂದಿಗಳು ಮತ್ತು ನರೇಗಾ ಕೂಲಿಕಾರ್ಮಿಕರು ಹಾಜರಿದ್ದರು.

# ಶ್ರೀಧರಗಡ್ಡೆಯಲ್ಲಿ ಬಸವ ಜಯಂತಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ಮೇ,1– ತಾಲೂಕಿನ ಶ್ರೀಧರಗಡ್ಡೆ ಗ್ರಾಮದಲ್ಲಿ ನಿನ್ನೆ ಬಸವೇಶ್ವರರ ಜಯಂತ ಅಂಗವಾಗಿ ಅಲಂಕರಿಸಿದ ಎತ್ತಿನ ಬಂಡಿಯಲ್ಲಿ ಬಸವೇಶ್ವರರ ಭಾವಚಿತ್ರ ಅಳವಡಿಸಿ ಅದರ ಮುಂದೆ ಅಲಂಕೃತ ಎತ್ತುಗಳ ಗಳೇವುಗಳ ಮೂಲಕ ಮೆರವಣಿಗೆ ಗ್ರಾಮದ ಪ್ರಮುಖ ರಸ್ತೆಯಲ್ಲಿ ಸಾಗಿತು. ಗ್ರಾಮದ ವೀರಶೈವ ಮುಖಂಡರು ಪಾಲ್ಗೊಂಡಿದ್ದರು.

# ವೀರಭದ್ರನ ಕಾಲುಗೆರೆಯಲ್ಲಿ ಜನಸಾಗರ: ಉತ್ಸವ ಕಾಣೋಣ!



ಮಲ್ಲಮ್ಮ ನುಡಿ ವಾರ್ತೆ

ಇಂಡಿ:– ಸಮೀಪದ ಶಿರಗೂರ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಜಾತ್ರೆ ಮಹೋತ್ಸವ ವಿಜೃಂಭಣೆಯಿಂದ ನಡೆಯುತ್ತು.

ಇದಕ್ಕೂ ಮುಂಚಿತವಾಗಿ ದೇಗುಲದಲ್ಲಿ ಬೆಳಗ್ಗೆಯಿಂದ ಹೋಮ, ಹವನ, ಅಭಿಷೇಕ, ಪಂಚಾಮೃತ, ಅಲಂಕಾರ, ಮಹಾಮಂಗ ಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆದವು.

ನಂತರ ವೀರಭದ್ರೇಶ್ವರ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಮಹಿಳೆಯರು ಕಳಸ–ಕನ್ನಡಿ ಹಿಡಿದು ಪಲ್ಲಕ್ಕಿ ಜತೆಯಲ್ಲಿ ಹೆಜ್ಜೆ ಹಾಕಿದರು. ಪುರವಂತರು ವೀರಭದ್ರನ ಒಡಪುಗಳು ತೆ–ೂಟ್ಟು ಶಸ್ತ್ರಗಳನ್ನು ಹೇಳಿದರು. ವೀರಭದ್ರನ ನಾಮಸ್ತರಣೆಗೈದರು. ಅಸಂಖ್ಯಾತ ಭಕ್ತರು, ಧಗ ಧಗಿಸುವ ಬೆಂಕಿಯಿಂದ ವೀರಭದ್ರ ದೇವರು ಹೆಸರು ಹೇಳುತ್ತಾ ಖಡೇ ಖಡೇ ಶ್ರೀ ವೀರಭದ್ರ ಎಂದು ಅಗ್ನಿಯಲ್ಲಿ ಹಾಯುವ ದೃಶ್ಯ ರೋಮಾಂಚನಕಾ–ರಿಯಾಗಿತ್ತು.

ಪುರವಂತರ ಅಗ್ನಿ ಹಾಯುವ ಸ್ಪರ್ಶ ಕಂಡ ಭಕ್ತರು ವೀರದಭ್ರನ ಅವತಾರ ತಾಂಡವ ಕಂಡು ಕಣ್ತುಂಬಿಸಿಕೊಂಡರು. ತದನಂತರ ಗ್ರಾಮಸ್ಥರು ಹಾಗೂ ಯುವಕರು ಅಗ್ನಿ ಹಾಯುವ ಮೂಲಕ ತಮ್ಮ ಹರಕೆ ಮುಟ್ಟಿಸಿದರು. ಕೆಲವರು ಹರಕೆಹೊತ್ತ ಮಹಿಳೆಯರು, ಮಕ್ಕಳು, ಯುವಕರು ದೀರ್ಘ ದಂಡ ನಮಸ್ಕಾರ ಹಾಕಿ ಹರಕೆ ತೀರಿಸಿದರು.

ಭಕ್ತಿಯಿಂದ ವಿವಿಧ ಗ್ರಾಮದಿಂದ ಹರಿದು ಬಂದ ಭಕ್ತಾಧಿಗಳಿಗೆ ಅನ್ನ ಪ್ರವಾಸದ ಸೇವೆ ಮಾಡಲಾಯಿತು. ಹೂವಿನ ಪಲ್ಲಕ್ಕಿಯಲ್ಲಿ ಅಲಂಕರಗೊಂಡ ವೀರಭದ್ರೇಶ್ವರ ದರ್ಶನ ಪಡೆದು ಭಕ್ತರು ಪುನೀತರಾದರು.

ಈ ಸಂದರ್ಭದಲ್ಲಿ ಗ್ರಾಮದ ಯುವ ಮುಖಂಡರಾದ ಅನಿಲ್ ಗೌಡ ಪಾಟಿಲ್ , ಗುಬ್ಬೇವಾಡ ಗ್ರಾಪಂ ಉಪಾಧ್ಯಕ್ಷ ಆನಂದ ಗೌಡ ಚಾಂದಕವಟೆ, ರಾಚಯ್ಯ ಹಿರೇಮಠ ,ಲಕ್ಷ್ಮಿಪುತ್ರ ನಾವದಗಿ,ರಾಮಯ್ಯ ಸ್ವಾಮಿ ಹಿರೇಮಠ್,ಶಿವಾನಂದ್ ಇಂಚಿಗೆ,ಪರಶುರಾಮ್ ಅಪ್ಪಾಗಿರಿ,ಗಜಾನಂದ ಬಳಗಾರ್ ,ನಿಂಗಪ್ಪಾ ನಾವದಗಿ, ವಿಶ್ವನಾಥ್ ಹಡಪದ್ , ಗುರುಲಿಂಗಪ್ಪ ಹಡಪದ್ ,ಷಣ್ಮುಖಯ್ಯ ಹಿರೇಮಠ , ಶ್ರೀಕಾಂತ್ ನಾಯ್ಕೋಡಿ ,ಮುತ್ತಣ್ಣ ಕಳಸಗೊಂಡ, ಸಿದ್ದರಾಮ ನಾವದಗಿ, ಸಿದ್ದರಾಮ ನಾಯ್ಕೋಡಿ, ವಿಠ್ಠಲ ಜಮ್ಮನವರ್ ಗ್ರಾಮಸ್ಥರು ಸೇರಿದಂತೆ ವಿವಿಧ ಗ್ರಾಮಗಳಿಂದ ಭಕ್ತರು ಭಾಗಿಯಾಗಿದ್ದರು.

# ಬೀಳಗಿಯ ಶಫಾ ನಿಂಬಾಳ್ಕರ ರಾಜ್ಯಕ್ಕೆ 2ನೇ ಸ್ಥಾನ;ಬಾಗಲಕೋಟೆ ಜಿಲ್ಲೆಗೆ ಶೇ.67.78 ಫಲಿತಾಂಶ


ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.2-ಎಸ್.ಎಸ್.ಎಲ್.ಸಿ ಪರೀಕ್ಷಾ ಫಲತಾಂಶ ಶುಕ್ರವಾರ ಪ್ರಕಟವಾಗಿದ್ದು, ಬಾಗಲಕೋಟೆ ಜಿಲ್ಲೆ ಶೇ.67.78 ರಷ್ಟು ಫಲಿತಾಂಶ ಪಡೆದು ರಾಜ್ಯಕ್ಕೆ 16ನೇ ಸ್ಥಾನ ಪಡೆದುಕೊಂಡಿದೆ ಎಂದು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಪ್ರಭಾರ ಉಪನಿರ್ದೇಶಕ ಎಚ್.ಜಿ.ಮಿರ್ಜಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 15063 ಬಾಲಕರು ಮತ್ತು 15410 ಬಾಲಕಿಯರು ಸೇರಿ ಒಟ್ಟು 30473 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 8836 ಬಾಲಕರು, 11820 ಬಾಲಕಿಯರು ಸೇರಿ ಒಟ್ಟು 20656 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಈ ಬಾರಿಯು ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಬಾಲಕರು ಶೇ.58.66 ರಷ್ಟು ತೇರ್ಗಡೆ ಹೊಂದಿದರೆ, ಬಾಲಕಿಯರು ಶೇ.76.70 ರಷ್ಟು ತೇರ್ಗಡೆ ಹೊಂದಿರುತ್ತಾರೆ.

625ಕ್ಕೆ 624 ಅಂಕ ಪಡೆದ ಬೀಳಗಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಶಫಾ ಎಸ್. ನಿಂಬಾಳ್ಕರ ರಾಜ್ಯಕ್ಕೆ ದ್ವಿತೀಯ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಜಿಲ್ಲೆಯ ಟಾಪರ್ ಸ್ಥಾನದಲ್ಲಿ 625ಕ್ಕೆ 623 ಅಂಕ ಪಡೆದ 4 ವಿದ್ಯಾರ್ಥಿಗಳು, 625ಕ್ಕೆ 622 ಅಂಕ ಪಡೆದವರು 5, 621 ಅಂಕ ಪಡೆದವರು 7, 620 ಅಂಕ ಪಡೆದವರು 11, 619 ಅಂಕ ಪಡೆದವರು 9, 618 ಅಂಕ ಪಡೆದವರು 17, 617 ಅಂಕ ಪಡೆದ 20, 616 ಅಂಕ ಪಡೆದ 16 ಹಾಗೂ 615 ಅಂಕವನ್ನು 23 ಜನ ವಿದ್ಯಾರ್ಥಿಗಳು ಪಡೆದು-ಕೊಂಡಿದ್ದಾರೆ.

ಬಾದಾಮಿ ತಾಲೂಕಿನಲ್ಲಿ 5168 ಪೈಕಿ 3632 (ಶೇ.70.28) ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದರೆ, ಬಾಗಲಕೋಟೆ ತಾಲೂಕಿನಲ್ಲಿ 4628 ಪೈಕಿ 2941 (ಶೇ.63.55), ಬೀಳಗಿ ತಾಲೂಕಿನಲ್ಲಿ 2734 ಪೈಕಿ 1599 (ಶೇ.58.49), ಹುನಗುಂದ ತಾಲೂಕಿನಲ್ಲಿ 4999 ಪೈಕಿ 3460 (ಶೇ.69.21), ಜಮಖಂಡಿ ತಾಲೂಕಿನಲ್ಲಿ 7771 ಪೈಕಿ 5466(ಶೇ.70.34) ಹಾಗೂ ಮುಧೋಳ ತಾಲೂಕಿನಲ್ಲಿ 5173 ಪೈಕಿ 3558 (ಶೇ.68.78) ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ ಎಂದು ಎಚ್.ಜಿ.ಮಿರ್ಜಿ ತಿಳಿಸಿದ್ದಾರೆ.



### 625ಕ್ಕೆ 624 ಅಂಕ ಪಡೆದ ಶಫಾ ನಿಂಬಾಳ್ಕರ

ಜಿಲ್ಲೆಯ ಬೀಳಗಿ ತಾಲೂಕಿನ ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಶಫಾ ಶಾರೀಕಅಹ್ಮದ ನಿಂಬಾಳ್ಕರ 625ಕ್ಕೆ 624 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ದ್ವಿತಿಯ ಸ್ಥಾನ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ.

ಇಂಗ್ಲೀಷ ವಿಷಯಕ್ಕೆ 124(125ಕ್ಕೆ) ಕನ್ನಡ, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಕ್ಕೆ ತಲಾ 100ಕ್ಕೆ 100 ಅಂಕ ಪಡೆದುಕೊಂಡಿದ್ದಾಳೆ. ಸಾಧನೆ ಮಾಡಿದ ಶಫಾಳನ್ನು ಬೀಳಗಿ ಶಾಸಕ ಜೆ.ಟಿ.ಪಾಟೀಲ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಲ್ಲಾ ಪಂಚಾಯತ ಸಿಇಓ ಶಶಿಧರ ಕುರೇರ ಹಾಗೂ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಪ್ರಭಾರ ಉಪನಿರ್ದೇಶಕ ಎಚ್.ಜಿ.ಮಿರ್ಜಿ, ಬೀಳಗಿ ಬಿಇಓ ಆರ್.ಎಸ್.ಆದಾಪೂರ ಎಸ್.ಎಸ್.ಎಲ್.ಸಿ ಪರೀಕ್ಷಾ ನೋಡಲ್ ಅಧಿಕಾರಿ ಎಸ್.ಎಸ್.ಹಾಲವರ ಮತ್ತು ಬೀಳಗಿ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕ ಬಿ.ಸಿ.ಹೊಸಗೌಡರ ಅಭಿನಂದಿಸಿದ್ದಾರೆ.

# ಎನ್.ಎಸ್.ಎಸ್.ಶಿಬಿರದಿಂದ ನಾಯಕತ್ವ ಗುಣ-ಪ್ರೊ.ಕೀರ್ತಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.2-ನಾಯಕತ್ವದ ಗುಣ, ಸಮಯಪ್ರಜ್ಞೆ, ಕರ್ತವ್ಯನಿಷ್ಠೆ, ದೇಶಪ್ರೇಮ ಜೊತಗೆ ಸೇವಾ ಮನೋಭಾವ ಬೆಳೆಸಿಕೊಳ್ಳಲು ಎನ್‌ಎಸ್‌ಎಸ್ ವಾರ್ಷಿಕ ಶಿಬಿರ ಉತ್ತಮ ವೇದಿಕೆಯಾಗಿದೆ ಎಂದು ಉಪನ್ಯಾಸಕಿ ಕೀರ್ತಿ ದಾಸರ ಹೇಳಿದ್ದಾರೆ.

ನಗರಕ್ಕೆ ಸಮೀಪದ ಸೀಮಿಕೇರಿಯ ಲಡ್ಡುಮುತ್ಯಾ ದೇವಸ್ಥಾನದ ಆವರಣದಲ್ಲಿ ನಡೆದಿರುವ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಸೇವಾ ಮನೋಭಾವ ಬೆಳೆಸಿಕೊಳ್ಳಲು ಸಿಕ್ಕಿರುವ ಏಳು ದಿನಗಳ ಈ ಶಿಬಿರದ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಉಪನ್ಯಾಸಕಿ ಉಪನ್ಯಾಸಕಿ ಎನ್.ಎಚ್.ಹವಾಲ್ದಾರ ಮಾತನಾಡಿ, ಸೇವೆಯ ಅರಿವು, ನೈರ್ಮಲ್ಯ, ಸಾಮಾಜಿಕ ಪಿಡುಗುಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿ ಕೊಟ್ಟಾಗ ಜಾಗೃತಿ ಉಂಟಾಗುತ್ತದೆ ಎಂದರು.

ರಾಷ್ಟ್ರೀಯ ಸೇವಾ ಕಾರ್ಯಕ್ರಮ ಅಧಿಕಾರಿಗಳಾದ ಎಸ್.ಎಮ್.ಬೊಮ್ಮಣವರ, ಎಸ್.ಎಮ್.ಹಡಪದ, ರಾಜು ಚವ್ಹಾನ ವೇದಿಕೆ ಮೇಲೆ ಉಪಸ್ಥಿತರಿದ್ದರು. ಆಸೀಫ್ ಪಿಂಜಾರ ಪ್ರಾರ್ಥಿಸಿದರು. ಚೈತ್ರಾ ಚಲ್ಲಮರದ ಸ್ವಾಗತಿಸಿ ಪರಿಚಯಿಸಿದರು. ಸಾಗರ ವಾಲಿಕಾರ ನಿರೂಪಿಸಿದರು. ಸಂಗಯ್ಯ ಸಾರಂಗಮಠ ವಂದಿಸಿದರು.

# ಬ್ರಿಲಿಯಂಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿಗಳ ಉತ್ತಮ ಸಾಧನೆ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟೆ:ಸಮೀಪದ ಮೈಲೇಶ್ವರ ಬ್ರಿಲಿಯಂಟ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯು 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರಲ್ಲಿ ಉತ್ತಮ ಸಾಧನೆ ತೋರಿದೆ. ಆಂಗ್ಲ ಮಾಧ್ಯಮದ ವಿದ್ಯಾರ್ಥಿ ಗಗನಸಿಂಗ್ ಮೂಲಿಮನಿ 625 ಕ್ಕೆ 621 (99.36%) ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಐದನೆಯ ಯಾರ್ಂಕ್ ಪಡೆದಿದ್ದಾನೆ.

ಕಾರ್ತೀಕ ಕನಕರೆಡ್ಡಿ 625ಕ್ಕೆ 616 ಶೇ.98.56, ದ್ವಿತೀಯ, ಹಾಗೂ ಸಿಂಚನಾ ಪಾಟೀಲ 625 ಕ್ಕೆ 615 ಶೇ.98.40 ಅಂಕ ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದಿದ್ದಾರೆ. ಇಂಗ್ಲೀಷ್ ಮಾಧ್ಯಮದಲ್ಲಿ ಶೇ.89.43 ಫಲಿತಾಂಶ ಬಂದಿದ್ದು ಒಟ್ಟು 142 ವಿದ್ಯಾರ್ಥಿಗಳಲ್ಲಿ - ಶೇ. 90 ಕ್ಕಿಂತ ಹೆಚ್ಚು-40 ವಿದ್ಯಾರ್ಥಿಗಳಿದ್ದಾರೆ. ಅತ್ಯುನ್ನತ ಶ್ರೇಣಿ-55, ಪ್ರಥಮ ಶ್ರೇಣಿ-122 ಜನ ತೇರ್ಗಡೆ-ಯಾಗಿದ್ದು ನೂರಕ್ಕೆ ನೂರು ಅಂಕ ಪಡೆದವರು- ಕನ್ನಡ: 12( 125 ಕ್ಕೆ 125), ಇಂಗ್ಲೀಷ- 01, ಹಿಂದಿ-17 , ಗಣಿತ- 3, ವಿಜ್ಞಾನ-04 ಮತ್ತು ಸಮಾಜ ವಿಜ್ಞಾನ ದಲ್ಲಿ-8 ವಿದ್ಯಾರ್ತಿಗಳು ಶೇ.100 ಅಂಕಗಳನ್ನು ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ, ಆಡಳಿತ ಮಂಡಳಿ, ಶಾಲೆಯ ಮುಖ್ಯ ಶಿಕ್ಷಕರು, ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ.

# ಮನುಷ್ಯನ ಪರಿಪೂರ್ಣತೆಗೆ ಸಂಸ್ಕಾರ ಅಗತ್ಯ : ಸುಧೀಂದ್ರ ಶ್ರೀಗಳು



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.2-ಮನುಷ್ಯನನ್ನು ಹೆಜ್ಜೆ ಹೆಜ್ಜೆಗೆ ಸಂಸ್ಕರಿಸಿ, ಶುದ್ಧೀಕರಿಸಿ ಪರಿಪೂರ್ಣತೆಯತ್ತ ಕೊಂಡೊಯ್ಯಲು ಸಂಸ್ಕಾರದ ಅಗತ್ಯತೆಯಿದೆ ಎಂದು ನಾಲತವಾಡದ ಬ್ರಹ್ಮಾಂಡಭೇರಿ ಮಠದ ಪೂಜ್ಯ ಸುಧೀಂದ್ರ ಸ್ವಾಮಿಗಳು ಹೇಳಿದರು.

ವಿದ್ಯಾಗಿರಿಯಲ್ಲಿ ಬಾಗಲಕೋಟೆ ತಾಲೂಕಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘ, ವಿಶ್ವಕರ್ಮ ಸಮಾಜ ಅಭಿವೃದ್ಧಿ ಸಂಘ, ವಿಶ್ವಕರ್ಮ ತರುಣ ಸಂಘ, ವಿಶ್ವಕರ್ಮ ಸಮಾಜ ಬಡಿಗತನ ಕಾರ್ಮಿಕರ ಸಂಘ, ಕಾಳಿಕಾಂಬಾ ಮಹಿಳಾ ಮಂಡಳ, ವಿಶ್ವಕರ್ಮ ಸಮಾಜ ಸಂಘ ಇವರ ಸಹಕಾರದೊಂದಿಗೆ ವಿದ್ಯಾಗಿರಿಯ 13ನೇ ರಸ್ತೆಯಲ್ಲಿರುವ ಕಾಳಿಕಾಂಬಾ ದೇವಸ್ಥಾನದಲ್ಲಿ ಗುರುವಾರ ನಡೆದ ಪ್ರಥಮ ಸಾಮೂಹಿಕ ಉಪನಯನ ಹಾಗೂ ಧಾರ್ಮಿಕ ಸಭೆಯ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಹಿಂದಿನ ಕಾಲದಿಂದಲೂ ಋಷಿಮುನಿಗಳು ಮನುಷ್ಯನ ಪರಿಪೂರ್ಣ ಜೀವನಕ್ಕೆ ಸರಿಯಾದ ಮಾರ್ಗಗಳನ್ನು ತೋರಿಸಿಕೊಟ್ಟಿದ್ದಾರೆ. ಜೊತೆಗೆ ಸಂಸ್ಕಾರ ಬೋಧಿಸಿದ್ದಾರೆ ಎಂದು ಹೇಳಿದ ಸ್ವಾಮೀಜಿ, ಉಪನಯನದಿಂದ ದ್ವಿಜತ್ವ ಎರಡನೇ ಜನ್ಮ ಲಭಿಸುತ್ತದೆ ಎಂದು ಸುಧೀಂದ್ರ ಸ್ವಾಮೀಜಿ ಹೇಳಿದರು.

ಸಾನಿಧ್ಯ ವಹಿಸಿದ್ದ ವಿಶ್ವನಾಥ ಸ್ವಾಮಿಗಳು ಮಹಾಪುರುಷ ಮಾತನಾಡಿ, ವಿಶ್ವ ಸೃಷ್ಟಿಯಲ್ಲಿ ಮನುಷ್ಯ ಜೀವಿ ಸರ್ವಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿದ್ದಾನೆ. ತನ್ನ ಭೌದ್ಧಿಕ ಬಲದಿಂದ ವಿಶ್ವದ ವಿವಿಧ ವಸ್ತು ಶಕ್ತಿಗಳ ರಹಸ್ಯವನ್ನು ಭೇದಿಸುತ್ತ ತನ್ನ ಬಾಳ್ವೆಯನ್ನು ಸುಗಮಗೊಳಿಸಲು ನಿರಂತರವೂ ಶ್ರಮಿಸುತ್ತಿದ್ದಾನೆ. ಇವೆಲ್ಲವೂ ಗುರು ಹಿರಿಯರು ನೀಡಿದ ಸಂಸ್ಕಾರಗಳಿಂದ ಸಾಧ್ಯವಾಗಿವೆ ಎಂದರು.

ಮುಖ್ಯ ಅತಿಥಿ ವಿದ್ಯಾಗಿರಿ ವಿಶ್ವಕರ್ಮ ಸಮಾಜ ಅಭಿವೃದ್ಧಿ ಸಂಘದ ಅಧ್ಯಕ್ಷ ವಸಂತರಾವ ಕಮ್ಮಾರ ಉಪನಯನ ಆಚರಣೆಗಳ ಬಗ್ಗೆ ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ವಿಶ್ವರ್ಕಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ದೇವೇಂದ್ರ ಅಗಳತಕಟ್ಟಿ ಮಾತನಾಡಿ, ನಮ್ಮ ನೌಕರರ ಸಂಘ ಹಾಗೂ ಸಮಾಜದ ವಿವಿಧ ಸಂಘಟನೆಗಳ ಸಹಕಾರದಿಂದ ಸುಮಾರು 25 ವಟುಗಳ ಸಾಮೂಹಿಕ ಉಚಿತ ಬ್ರಹ್ಮೋಪದೇಶವನ್ನು ನೆರವೇರಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಉಚಿತ ಸಾಮೂಹಿಕ ಉಪನಯನ ನಡೆಸುವ ಉದ್ದೇಶ ಹೋಂದಲಾಗಿದೆ ಎಂದರು.

ತಾಲೂಕ ವಿಶ್ವಕರ್ಮ ಸಮಾಜ ಬಡಿಗತನ ಕಾರ್ಮಿಕರ ಸಂಘದ ಅದ್ಯಕ್ಷ ಬಸವರಾಜ ಬಡಿಗೇರ, ತರುಣ ಸಂಘದ ಅಧ್ಯಕ್ಷ ಯಂಕಪ್ಪ ಬಡಿಗೇರ, ನಾಗರಾಜ ಕಮ್ಮಾರ, ಬಸವರಾಜ ಬರಗಿ, ಪ್ರಕಾಶ ಪತ್ತಾರ, ಜಗನ್ನಾಥ ಪತ್ತಾರ, ಮಹೇಶಕುಮಾರ ಪತ್ತಾರ, ಎ.ಸದಾಶಿವ, ಡಾ.ಭೀಮಪ್ಪ ಬಡಿಗೇರ, ರಾಘವೇಂದ್ರ ಕಮ್ಮಾರ, ಮಹಾದೇವ ಪತ್ತಾರ, ಅಪ್ಪಾಸಾಬ ಬಡಿಗೇರ, ನಿರ್ಮಲಾ ಪತ್ತಾರ, ವಿಜಯಲಕ್ಷ್ಮೀ ಪತ್ತಾರ, ಕಾಳಪ್ಪ ಬಡಿಗೇರ, ರುಕಮಣ್ಣ ಪಂಚಾಳ, ಪ್ರಶಾಂತ ಕರಡಿಗುಡ್ಡ, ಗುರುರಾಜ ಅಗಳತಕಟ್ಟಿ, ಶಂಕರ ಪತ್ತಾರ, ಮೌನೇಶ ಕಮ್ಮಾರ ಭಾಗವಹಿಸಿದ್ದರು.

ಧಾರ್ಮಿಕ ಸಭೆಗೂ ಮುಂಚೆ ವೀರೇಶಾಚಾರ್ಯ ದೇವಲಾಪುರ ಅವರ ಪೌರೋಹಿತ್ಯದಲ್ಲಿ ಸುಮಾರು 25 ಜನ ವಟುಗಳ ಸಾಮೂಹಿಕ ಬ್ರಹ್ಮೋಪದೇಶ ಜರುಗಿತು. ನಂತರ ಎಲ್ಲ ವಟುಗಳ ಮೆರವಣಿಗೆ ಜರುಗಿತು.

# ಕ್ರಿಕೆಟ್ ಪಂದ್ಯಾವಳಿ-ಬಿ.ಆರ್.ಸರಕಾರ ತಂಡಕ್ಕೆ ಟ್ರೋಫಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.2-ತಾಲೂಕಿನ ಶಿರೂರ ಪಟ್ಟಣದಲ್ಲಿ ಜರುಗಿದ ಶಿರೂರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸ್ಥಳೀಯ ಬಿ.ಆರ್.ಸರಕಾರ ತಂಡ ಪ್ರಶಸ್ತಿ ಪಡೆದುಕೊಂಡಿದೆ.

ಸಿದ್ದಲಿಂಗೇಶ್ವರ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಪಂದ್ಯಾವಳಿಯಲ್ಲಿ ಬುಧವಾರ ನಡೆದ ಅಂತಿಮ ಪಂದ್ಯದಲ್ಲಿ ಬಿ.ಆರ್.ಸರಕಾರ ತಂಡ ಸಿದ್ಧರಾಮೇಶ್ವರ ಕ್ರಿಕೆಟ್ ತಂಡವನ್ನು ಸೋಲಿಸಿ ಟ್ರೋಫಿ ತನ್ನದಾಗಿಸಿಕೊಂಡಿತು. ಕೊನೆಯ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸಿದ್ದರಾಮೇಶ್ವರ ಕ್ರಿ-ಕೆಟ್ ತಂಡ 8 ಓವರಗಳಲ್ಲಿ ಎಲ್ಲ ವಿಕೆಟ್ ಕಳೆದುಕೊಂಡು ಕೇವಲ 39 ರನ್ ಗಳಿಸಿತು.


ನಂತರ ಬ್ಯಾಟಿಂಗ್ ಮಾಡಿದ ಬಿ.ಆರ್.ಸರಕಾರ ತಂಡ 4 ಓವರಗಳಲ್ಲಿ 3 ವಿಕೆಟ್ ಕಳೆದುಕೊಂಡು ನಿಗದಿತ ಗುರಿ ಮುಟ್ಟಿ ಮೊದಲ ಬಹುಮಾನ 30 ಸಾವಿರ ರೂ.ನಗದು ಹಾಗೂ ಟ್ರೋಫಿ ಪಡೆದುಕೊಂಡಿತು.

ಶ್ರೀಧರ ಗಾಳಿ ಉತ್ತಮ ಬ್ಯಾಟ್ಸಮನ್ ಮತ್ತು ಬಾಬು ನಬಿವಾಲೆ ಉತ್ತಮ ಬೌಲರ್ ಮತ್ತು ಮ್ಯಾನ್ ಆಫ್ ದಿ ಸಿರೀಜ್ ಪ್ರಶಸ್ತಿ ಪಡೆದು-ಕೊಂಡರು.

ಪಂದ್ಯಾವಳಿಯಲ್ಲಿ ಒಟ್ಟು 314 ವಿಕೆಟ್ ಪತನವಾಗಿರುವುದರಿಂದ ಪಂದ್ಯಾವಳಿ ಸಂಘಟಿಸಿರುವ ಸಿದ್ದಲಿಂಗೇಶ್ವರ ಗೆಳೆಯರ ಬಳಗ ವಿಶ್ವಪರಿಸರ ದಿನಾಚರಣೆಯಂದು ಮಾಜಿ ಸೈನಿಕರೊಂದಿಗೆ ಸೇರಿ 314 ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದಾರೆ.

ಪಂದ್ಯದ ನಂತರ ನಡೆದ ಸಮಾರಂಭದಲ್ಲಿ ಪ್ರಥಮ ಸ್ಥಾನ ಪಡೆದ ಬಿ.ಆರ್.ಸರಕಾರ ತಂಡಕ್ಕೆ ಸಿದ್ದೇಶ್ವರ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ತಮ್ಮಣ್ಣ ಗಿರಿಜಾ ಟ್ರೋಫಿ ಹಾಗೂ ನಗದು ಬಹುಮಾನ ವಿತರಿಸಿದರು. ಗ್ರಾಪಂ ಮಾಜಿ ಅಧ್ಯಕ್ಷ ರಂಗಪ್ಪ ಮಳ್ಳಿ, ಬಸವರಾಜ ಬಿಲ್ಲಾರ, ಅಶೋಕ ಪವಾರ, ಸಂಜಯ ನಡುವಿನಮನಿ, ಎಂ.ಎಸ್.ಕಲಗುಡಿ, ರವಿ ಮೇಟಿ ಇದ್ದರು.

# ಬೇವೂರ ಪ್ರೌಢಶಾಲೆಗೆ ನೀಲಾ ಕಂಬಳಿ ಪ್ರಥಮ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.2-ತಾಲೂಕಿನ ಬೇವೂರ ಗ್ರಾಮದ ಆದರ್ಶ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ ಪ್ರೌಢಶಾಲಾ ವಿಭಾಗದ ಎಸ್.ಎಸ್.ಎಲ್.ಸಿ ಫಲಿತಾಂಶ ಉತ್ತಮವಾಗಿದ್ದು ನೀಲಾ ಕಂಬಳಿ ಶೇ.94.88 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ಕೃಷ್ಣಾ ಗಣಿ ಶೇ.89.28 ಅಂಕ ಗಳಿಸಿ ದ್ವಿತೀಯ ಮತ್ತು ಶಾರದಾ ಕಿರಸೂರ ಶೇ.87.88 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ಪರೀಕ್ಷೆ ಬರೆದಿದ್ದ 152 ವಿದ್ಯಾರ್ಥಿಗಳಲ್ಲಿ 112 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

4 ವಿದ್ಯಾರ್ಥಿಗಳು ಪ್ರಶಸ್ತಿ ಸಹಿತ ಪ್ರಥಮ ದರ್ಜೆ, 73 ವಿದ್ಯಾರ್ಥಿಗಳು ಪ್ರಥಮ ದರ್ಜೆ, 29 ವಿದ್ಯಾರ್ಥಿಗಳು ದ್ವಿತೀಯ ಹಾಗೂ 6 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ವಕೀಲ ಜಿ.ಜಿ.ಮಾಗನೂರ, ಪ್ರಾಚಾರ್ಯ ವ್ಹಿ.ಬಿ.ಅರಹುಣಸಿ ತಿಳಿಸಿದ್ದಾರೆ.

# ಬಳ್ಳಾರಿಯಲ್ಲಿ ಆದ್ಯ ಗುರು ಶ್ರೀ ಶಂಕರಾಚಾರ್ಯ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮೇ 02-ಪ್ರಾಚೀನ ಭಾರತೀಯ ಉಪನಿಷತ್ತುಗಳ ತತ್ವಗಳು ಮತ್ತು ಹಿಂದೂ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲು ಆದಿ ಶಂಕರಾಚಾರ್ಯರ ಕೊಡುಗೆ ಅಪಾರ ಎಂದು ಬಳ್ಳಾರಿ ಮಹಾನಗರ ಪಾಲಿಕೆ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಂಗನಕಲ್ಲು ರಸ್ತೆಯ ಶ್ರೀ ಭಾರತೀತೀರ್ಥ ಸಭಾಭವನದಲ್ಲಿ ಶುಕ್ರವಾರ ಆಯೋಜಿಸಲಾದ ಆದ್ಯ ಗುರು ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅದ್ವೈತ ವೇದಾಂತ ತತ್ವವನ್ನು ಆದ್ಯತೆ ಮೇಲೆ ಸ್ಥಾಪಿಸಿದರು. ಧರ್ಮದ ಹೆಸರಿನಲ್ಲಿ ಹರಡುತ್ತಿರುವ ವಿವಿಧ ರೀತಿಯ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಕೆಲಸ ಮಾಡಿದವರು. ಇಂದು ಶಂಕರಾಚಾರ್ಯರನ್ನು ಕಾಲಕಾಲಕ್ಕೂ ಪೂಜಿಸಿಕೊಂಡು ಸ್ಮರಿಸಿಕೊಂಡು ಬರಲಾಗಿದೆ ಎಂದು ಹೇಳಿದರು.

ವೇದಬ್ರಹ್ಮ ಶ್ರೀರಾಮ ಸುಬ್ರಹ್ಮಣ್ಯ ಶರ್ಮ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಭಾರತದ ಶ್ರೇಷ್ಠ ಆಧ್ಯಾತ್ಮಿಕ ನಾಯಕರು ಮತ್ತು ತತ್ವಜ್ಞಾನಿಗಳಲ್ಲಿ ಆದಿ ಶಂಕರಾಚಾರ್ಯರು ಒಬ್ಬರು. ಅದ್ವೈತ ವೇದಾಂತದ ಅಡಿಪಾಯವನ್ನು ಹಾಕಿದ ಮತ್ತು ಸಾಂಸ್ಕೃತಿಕ ಮತ್ತು ಧಾರ್ಮಿಕ ಅವನತಿಯ ಸಮಯದಲ್ಲಿ ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು ಎಂದು ಹೇಳಿದರು.

ಇಂದಿನ ಕೇರಳದ ಒಂದು ಸಣ್ಣ ಹಳ್ಳಿಯಾದ ಕಾಲಡಿಯಲ್ಲಿ ಜನಿಸಿದ ಆದಿ ಶಂಕರಾಚಾರ್ಯರು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿಯಲ್ಲಿ ಒಬ್ಬರೆಂದು ಹೇಳಲಾಗುತ್ತದೆ. ಅವರು ಆಳವಾದ ಆಧ್ಯಾತ್ಮಿಕ ಮತ್ತು ಬೌದ್ಧಿಕ ಮೈಲಿಗಲ್ಲುಗಳನ್ನು ಸಾಧಿಸಿದ್ದರು. ಅವರ ಅಲ್ಪಾವಧಿಯ ಜೀವಿತಾವಧಿಯ ಹೊರತಾಗಿಯೂ, ಅವರ ಕೊಡುಗೆಗಳು ಭಾರತದ ಆಧ್ಯಾತ್ಮಿಕ ಮತ್ತು ತಾತ್ವಿಕ ಭೂದೃಶ್ಯದ ಮೇಲೆ ಶಾಶ್ವತವಾದ ಪ್ರಭಾವ ಬೀರಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ರಾಜೇಶ್ವರಿ ಅವರ ತಂಡ ಭಕ್ತಿ ಸಂಗೀತ ನೆರವೇರಿಸಿಕೊಟ್ಟರು.

*ಮೆರವಣಿಗೆ:*

ಜಯಂತಿ ಅಂಗವಾಗಿ ಗುರುವಾರ ಸಂಜೆ ನಗರದಲ್ಲಿ ಸಂಭ್ರಮದ ಮೆರವಣಿಗೆ ನಡೆಯಿತು. ಮೆರವಣಿಗೆಯು ನಗರದ ಸತ್ಯನಾರಾಯಣ ಪೇಟೆಯ ವೆಂಕಟೇಶ್ವರ ದೇವಸ್ಥಾನದಿಂದ ಆರಂಭಗೊಂಡು ಇಂದಿರಾ ವೃತ್ತ-ಬೆಂಗಳೂರು ರಸ್ತೆ-ಸಭಾಪತಿ ಬೀದಿ-ಶ್ರೀ ಶೃಂಗೇರಿ ಶಂಕರಮಠದವರಗೆ ಸಾಗಿ ಸಂಪನ್ನಗೊಂಡಿತು. ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಿ ಮೆರಗು ನೀಡಿದವು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಶೃಂಗೇರಿ ಶಂಕರಮಠದ ಗೌರವ ವ್ಯವಸ್ಥಾಪಕ ಬಿ.ಕೆ.ಬಿ.ಎನ್.ಮೂರ್ತಿ, ಜಿಲ್ಲಾ ಬ್ರಾಹ್ಮಣರ ಒಕ್ಕೂಟದ ಜಿಲ್ಲಾಧ್ಯಕ್ಷ ಪ್ರಕಾಶ್ ರಾವ್, ಅಖಿಲ ಕರ್ನಾಟಕ ಬ್ರಾಹ್ಮಣರ ಒಕ್ಕೂಟ ಮಹಾಸಭಾದ ಜಿಲ್ಲಾಧ್ಯಕ್ಷ ಡಾ.ಶ್ರೀನಾಥ, ನೇತ್ರತಜ್ಞ ಡಾ.ಸುಧಾಕರ, ಲೆಕ್ಕಪರಿಶೋಧಕ ಡಾ.ಶ್ರೀಧರ ಮುಖಂಡರಾದ ಪ್ರಭಾಕರ ಶಾಸ್ತ್ರೀ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಸ್ಪೀಕರ್ ಯು.ಟಿ. ಖಾದರ್ ಗೆ ಅಂಡರ್ ವರ್ಲ್ಡ್ ನಿಂದ ಜೀವ ಬೆದರಿಕೆ ಕರೆ.!

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 02 : ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಅವರಿಗೆ ಅಂಡರ್ ವರ್ಲ್ಡ್ ನಿಂದ ಜೀವ ಬೆದರಿಕೆ ಕರೆ ಬಂದಿರುವುದಾಗಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ, ಅಂಡರ್ ವರ್ಲ್ಡ್ ನಿಂದ ನನಗೆ ಜೀವ ಬೆದರಿಕೆ ಕರೆಗಳು ಬಂದಿವೆ. ಅಂಡರ್ ವರ್ಲ್ಡ್ ಸೇರಿ ಕೆಲವು ಕಡೆಗಳಿಂದ ಕರೆಗಳು ಬಂದಿವೆ.

ಈ ಹಿಂದೆಯೂ ಕೆಲವು ಬಾರಿ ನನಗೆ ಜೀವ ಬೆದರಿಕೆ ಕರೆಗಳು ಬಂದಿವೆ. ನನಗಾಗಿ ಮಂಗಳೂರಿನಲ್ಲಿ ಎನ್‌ಐಎ ಸ್ಥಾಪಿಸುವುದು ಬೇಡ. ಜಿಲ್ಲೆಯ ಜನಕ್ಕಾಗಿ ಮಾಡುವುದಾದರೆ ಮಾಡಲಿ ಎಂದರು.

ಎಲ್ಲಿ ಹುಟ್ಟಬೇಕು, ಎಲ್ಲಿ ಸಾಯಬೇಕು ಎಂಬುದನ್ನು ಆ ದೇವರು ಬರೆದಿದ್ದಾನೆ. ನೆಮ್ಮದಿಯಾಗಿ ಸಾಯುವ ಪರಿಸ್ಥಿತಿ ಮಾಡಿಕೊಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ದೇವರು ಇಟ್ಟಂತೆ ಇರಲಿ, ನಮ್ಮ ಕೈಯಲ್ಲಿ ಏನೂ ಇಲ್ಲ ಈಗ ಮಾತನಾಡುತ್ತಿದ್ದೇನೆ. ಮರಳಿ ಮತ್ತೆ ಹೋಗುತ್ತೇನೆ ಎನ್ನುವ ಗ್ಯಾರಂಟಿ ಇಲ್ಲ ಎಂದು

# ಚಾಮರಾಜನಗರ, ರಾಯಚೂರು ಜಿಲ್ಲಾಧಿಕಾರಿ ಕಚೇರಿಗೆ ಬಾಂಬ್ ಬೆದರಿಕೆ

ಮಲ್ಲಮ್ಮ ನುಡಿ ವಾರ್ತೆ

ಚಾಮರಾಜನಗರ:ಮೇ.2: ಚಾಮರಾಜನಗರ, ರಾಯಚೂರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಬೆದರಿಕೆ ಇ-ಮೇಲ್ ಸಂದೇಶ ಬಂದಿದ್ದು ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಬೆಳಿಗ್ಗೆ 8 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯ ಇ-ಮೇಲ್ ಗೆ ಬೆದರಿಕೆ ಸಂದೇಶ ಬಂದಿದ್ದು, ಸುದ್ದಿ ತಿಳಿಯುತ್ತಿದ್ದಂತೆಯೇ ಅಧಿಕಾರಿಗಳು ಹಾಗೂ ಸಿಬ್ಬಂದಿ ತೀವ್ರ ಆತಂಕ-ಕ್ಕೆ ಒಳಗಾಗಿದ್ದರು.

ಇದೇ ಮಾದರಿಯಲ್ಲಿ ರಾಯಚೂರು ಜಿಲ್ಲಾಧಿಕಾರಿ ಕಚೇರಿಗೂ ಬಾಂಬ್ ಬೆದರಿಕೆ ಮೇಲ್ ಬಂದಿದೆ.

ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳ ಬಾಂಬ್ ಶೋಧಕಾರ್ಯದಲ್ಲಿ ತೊಡಗಿದೆ. ಮೇಲ್ ಕಳಿಸಿರುವ ಕಿಡಿಗೇಡಿಯ ಐಪಿ ವಿಳಾಸ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಎಸ್ ಪಿ ಮಾಹಿತಿ ನೀಡಿದ್ದಾರೆ.

ಸುರಕ್ಷತಾ ದೃಷ್ಟಿಯಿಂದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಕಚೇರಿಯಿಂದ ಸುರಕ್ಷಿತ ಸ್ಥಳಗಳಿಗೆ ಕಳುಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿದ್ದಾರೆ.

ಇದೇ ಮಾದರಿಯಲ್ಲಿ ರಾಯಚೂರು ಜಿಲ್ಲಾಧಿಕಾರಿ ಕಚೇರಿಗೂ ಬಾಂಬ್ ಬೆದರಿಕೆ ಮೇಲ್ ಬಂದಿದೆ. ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳ ಬಾಂಬ್ ಶೋಧಕಾರ್ಯದಲ್ಲಿ ತೊಡಗಿದೆ.

### ಪಶು ಆರೋಗ್ಯ ತಪಾಸಣೆ ಶಿಬಿರ : ಹುಡಗಿ ಶ್ರೀಗಳ ಸಲಹೆ

# ಜಾನುವಾರು ಆರೋಗ್ಯದ ಕಾಳಜಿ ವಹಿಸಿ



ಮಲ್ಲಮ್ಮ ನುಡಿ ವಾರ್ತೆ

**(ರಾಜು ಪೂಜಾರಿ)**

ಹುಮನಾಬಾದ್ : ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಹಳ್ಳಿಗಳಲ್ಲಿ ಜಾನುವಾರುಗಳಿಗೆ ತಗುಲಬಹುದಾದ ರೋಗಗಳ ಬಗ್ಗೆ ಮುಂಜಾಗ್ರತೆ ಕ್ರಮಗಳನ್ನು ಎಲ್ಲರೂ ಪಾಲಿಸಬೇಕು ಎಂದು ದಿಗಂಬರಕರಿಬಸವೇಶ್ವರಹಿರೇಮಠ ಸಂಸ್ಥಾನದಪೀಠಾಧಿಪತಿ ವಿರೂಪಾಕ್ಷ ಶಿವಾಚಾರ್ಯರು ಸಲಹೆನೀಡಿದರು. ದಿಗಂಬರ ಕರಿಬಸವೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ತಾಲೂಕಿನ ಹುಡಗಿ ಗ್ರಾಮದ ವೆಂಕಮ್ಮ ದೇವಿ ದೇವಸ್ಥಾನದ ರಥ ಮೈದಾನದ ಆವರಣದಲ್ಲಿ ಪಶು ಸಂಗೋಪನ ಇಲಾಖೆ ಹಾಗೂ ಹುಡಗಿ ಹಿರೇಮಠ ಸಂಸ್ಥಾನ ಹಾಗೂ ಸಂಜೀವಿನಿ ಗೆಳೆಯರ ಬಳಗದ ವತಿಯಿಂದ ನಡೆದ ಪಶು ಪ್ರದರ್ಶನ ಮತ್ತು ಉಚಿತ ಪಶು ಆರೋಗ್ಯ ತಪಸಾಣೆ ಕಾರ್ಯಕ್ರಮ



ಜಾತ್ರಾ ಮಹೋತ್ಸವದ ಹಿನ್ನಲೆ ಪಶು ಪ್ರದರ್ಶನ ಆಯೋಜನೆ ಮಾಡುವ ಮೂಲಕ ಹುಡಗಿ ಗ್ರಾಮದ ಕೀರ್ತಿ ಹೆಚ್ಚಿಸಿದ್ದಾರೆ. ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಗೋವುಗಳಿಗೆ ಪೂಜ್ಯನಿಯ ಸ್ಥಾನಮಾನ ನೀಡಲಾಗಿದೆ. ಹೀಗಾಗಿ ಗೋವುಗಳು ಸಾಕಾಣಿಕೆ ಮಾಡುವುದರ ಜತೆಗೆ ಪಶು ಸಂಗೋಪನೆಯಲ್ಲಿ ಸ್ವಾವಲಂಬಿ ಜೀವನ ಸಾಗಿಸಬೇಕು.
**– ವಿರೂಪಾಕ್ಷ ಶಿಚಾಚಾರ್ಯರು**
**ಪೀಠಾಧಿಪತಿ, ಹಿರೇಮಠ ಸಂಸ್ಥಾನ ಹುಡಗಿ**

ಉದ್ದೇಶಿಸಿ ಮಾತನಾಡಿದರು.

ಗ್ರಾಮೀಣ ಭಾಗದ ಹಳ್ಳಿಗಳ ರೈತರ ಜೀವನಾಡಿ ಎಂದು ಕರೆಸಿಕೊಳ್ಳುವ ಜಾನುವಾರುಗಳಿಗಾಗಿ ಏರ್ಪಡಿಸುವ ಪಶು ಆರೋಗ್ಯ ತಪಾಸಣಾ ಶಿಬಿರಗಳ ಸದುಪಯೋಗ ಪಡೆದುಕೊಂಡು ಜಾನುವಾರುಗಳನ್ನು ಉಳಿಸಿ, ಬೆಳಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಕರೆ ನೀಡಿದರು. ಪಶು ಇಲಾಖೆ ಸಹಾಯಕ ನಿರ್ದೇಶಕ ಡಾ. ಗೋವಿಂದ ಮಾತನಾಡಿ, ಇತ್ತಿಚಿನ ದಿನಗಳಲ್ಲಿ ಹರಡುತ್ತಿರುವ ಕಾಲುಬೇನೆ, ಬಾಯಿಬೇನೆ, ಗಂಟುರೋಗ ಸೇರಿದಂತೆ ಮುಂತಾದ ರೋಗಳ ಹಾಗೂ ಔಷಧೋಪಚಾರದ ಬಗ್ಗೆ ರೈತರು ಸಂಪೂರ್ಣ ಮಾಹಿತಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಪಶು ವೈದ್ಯಾಧಿಕಾರಿ ಡಾ. ಶಾಂತಕುಮಾರ ಸಿದ್ಧೇಶ್ವರ ಮಾತನಾಡಿ, ವೈಜ್ಞಾನಿಕವಾಗಿ ಬಹಳ ಮುಂದು ವರೆಯುತ್ತಿರುವ ಇಂದಿನ ನಾಗರಿಕ ಜಗತ್ತಿನಲ್ಲಿ ಹೈನುಗಾರಿಕೆಗೆ ಹೆಚ್ಚಿನ ಆದ್ಯತೆ ಸಿಗುತ್ತಿದೆ. ಜತೆಯಯಲ್ಲಿ ಸರಕಾರವು ಕೂಡಾ ಜಾನುವಾರು ಸಾಕಾಣಿ–ಕೆಗಾಗಿ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸುತ್ತಿವೆ.

ಹೀಗಾಗಿ ಹಾಲು ಉತ್ಪಾದನೆ, ಬರಡು ರಾಸುವಿಗೆ ಚಿಕಿತ್ಸೆ ಸೇರಿದಂತೆ ಜಾನುರುಗಳ ಆರೈಕೆ ಬಗ್ಗೆ ರೈತರು ನಿರ್ಲಕ್ಷ್ಯ ತೋರಬಾರದು.

ಹತ್ತಿರದ ಪಶು ಆಸ್ಪತ್ರೆಗೆ ಭೇಟಿ ನೀಡಿ ಸೂಕ್ತ ಚಿಕಿತ್ಸೆ ಕೊಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ.ಅಧ್ಯಕ್ಷೆ ಸುಜಾತಾ ರಂಜೇರಿ, ಕೃಷಿ ಅಧಿಕಾರಿ ಮಚೇಂದ್ರ ಜೋಗದ್, ಡಾ. ನೀಲಕಂಠ ಚನಶಟ್ಟಿ, ಡಾ. ಸಂಜೀವ ಪಾಟೀಲ್, ಡಾ. ಮುಜೀಬ್, ಡಾ. ಕಿರಣ ಬಿರಾದಾರ, ಡಾ. ಶ್ರೀಕಾತ ಬಿರಾದಾರ, ಡಾ. ವಿಠಲ್ ಪಾಟೀಲ್, ಡಾ. ಶಾಂತವೀರ ಗೋಪಾ, ಡಾ. ಖಾಜಾ, ಡಾ. ಜಹೀರ್, ಡಾ. ರಾಜೇಶ್ವರಿ, ಡಾ. ಆನಂದ, ಡಾ. ಶ್ವೇತಾರಾಣಿ, ಡಾ. ಆಶಾ, ಡಾ. ಶಿಲ್ಪಾ, ಡಾ. ಪ್ರವೀಣ, ಶಿವಕುಮಾರ ಸಲಗಾರ, ಶರಣಪ್ಪ ಕಾಡವಾದಿ, ರವಿ ಸ್ವಾಮಿ, ಮಾಧವರಾವ, ಮನೋಹರ ವೀರಶಟ್ಟಿ, ವಿನೋದ, ತನವೀರ, ಪ್ರಮುಖರಾದ ನಾಗೇಶ ಒಳದೊಡ್ಡಿ, ಶರಣಪ್ಪ ಮೂಲಗಿ, ರಾಜು ಮಹಾಜನ್, ಅಮರ ಶೇರಿಕಾರ, ಶಿವಾನಂದ ಉಳ್ಳಾಗಡ್ಡಿ, ಕರಬಸಪ್ಪ ಮಲಶಟ್ಟಿ, ಕಾಶಿನಾಥ ಶಿರಶಟ್ಟಿ, ಬಾಬುರಾವ ಪಾಟೀಲ್, ಮಹಾಂತೇಶ ನಂದಿ, ಅನಿಲ ನಂದಿ, ಲಿಂಗರಾಜ ಭಾಗೀರಥಿ, ಮಹೇಶ ಒಳದೊಡ್ಡಿ, ಸಂಗಮೇಶ ಮಲಶಟ್ಟಿ, ರಾಜಶೇಖರ ಸಿದ್ದಣ್ಣ, ಧನರಾಜ ಗೋರ್ಟಾ, ಚಂದ್ರು ಔರಾದ, ಸುರೇಶ ಗಡ್ಡದ, ವಿಜಯಕುಮಾರ ಡಾವರಗಾಂವ ಡಾ. ಶಶಿಧರ ಧುಮ್ಮನಸೂರ ಇದ್ದರು. ಗೌರಿಶಂಕರ ಸ್ವಾಗತಿಸಿ, ನಿರೂಪಿಸಿದರು. ದಯಾನಂದ ಸಿಂಧನಕೇರಿ ವಂದಿಸಿದರು.

### ಪಶು ಪ್ರದರ್ಶನ ಯಶಸ್ವಿ

ದಿಗಂಬರ ಕರಿಬಸವೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ತಾಲೂಕಿನ ಹುಡಗಿ ಗ್ರಾಮದ ವೆಂಕಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ವಿರೂಪಾಕ್ಷ ಶಿವಾಚಾರ್ಯರ ಸಾನಿಧ್ಯದಲ್ಲಿ ನಡೆದ ಪಶು ಪ್ರದರ್ಶನ ಹಾಗೂ ಉಚಿತ ಆರೋಗ್ಯ ಶಿಬಿರ ಯಶಸ್ವಿಯಾಗಿ ಜರುಗಿತು.

ಪಶು ಪ್ರದರ್ಶನದಲ್ಲಿ ಒಟ್ಟು 165 ಜಾನುವಾರುಗಳು ಭಾಗವಹಿಸಿದ್ದು, ಇವುಗಳಲ್ಲಿ ಪ್ರಥಮ್ ಸ್ಥಾನ ವಿಜೇತ ಜಾನುವಾರುಗಳ ಮಾಲಿಕರಾದ ತಾಲೂಕಿನ ನಂದಗಾಂವ ಗ್ರಾಮದ ತುರಾಬ್ ಅಲಿಗೆ ಬಿಟಿವಿಪಿ ಶಾಲೆಯ 2002ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಬಳಗದ ವತಿಯಿಂದ ನಗದು ಬಹುಮಾನ ನೀಡಲಾಯಿತು.

ಪಶು ಪ್ರದರ್ಶನದಲ್ಲಿ ಭಾಗಿಯಾದ 164 ಜಾನುವಾರುಗಳ ಮಾಲೀಕರಿಗೆ ಸಮಾಧಾನಕರ ಬಹುಮಾನ ನೀಡಿ ಗೌರವಿಸಲಾಯಿತು. ಬಳಿಕ ಜಾನುವಾರುಗಳಿಗೆ ಪಶು ಇಲಾಖೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು.

# ಸಮುದಾಯ ಭವನ ನಿರ್ಮಾಣಕ್ಕೆ 3 ಲಕ್ಷ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ದುಬಲಗುಂಡಿ ಗ್ರಾಮದಲ್ಲಿ ದೇವಾಂಗ ಹಟಗಾರ ಸಮಜದ ಸಮುದಾಯ ಭವನ ನಿರ್ಮಾಣಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 3 ಲಕ್ಷದ ಚೆಕ್ ವಿತರಿಸಲಾಗಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಮುರುಳಿಧರ ತಿಳಿಸಿದರು.

ತಾಲೂಕಿನ ದುಬಲಗುಂಡಿ ಗ್ರಾಮದ ಐತಿಹಾಸಿಕ ಬನಶಂಕರಿ ದೇವಸ್ಥಾನದ ಸಭಾಂಗಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಹಟಗಾರ (ದೇವಾಂಹ) ಸಮಾಜದ ವತಿಯಿಂದ ಆಯೋಜಿಸಿದ್ದ ಚೆಕ್ ವಿತರಣೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಜನರ ಕಲ್ಯಾಣಕ್ಕಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆವತಿಯಿಂದ ನಿಸ್ವಾರ್ಥ ಸೇವೆ ಸಲ್ಲಿಸಲಾಗುತ್ತಿದೆ. ಸಮುದಾಯ ಭವನ ನಿರ್ಮಾಣ, ವಿಶೇಷ ಚೇತನರಿಗೆ ಬೈಸಿಕಲ್ ಸೇರಿ ಇತರೆ ಸಮಾಜ ಮುಖಿ ಕಾರ್ಯಕ್ರಮಕ್ಕೆ ಕೈಜೋಡಿಸುತ್ತಾ ಬರುತ್ತಿದ್ದೇವೆ ಎಂದು ತಿಳಿಸಿದರು.

ಪ್ರಸ್ತುತ ದಿನಗಳಲ್ಲಿ ಧರ್ಮಸ್ಥಳದ ಪೂಜ್ಯರ ಮಾರ್ಗದರ್ಶನದಂತೆ ವಿಶೇಷವಾಗಿ ಕೆರೆ ಹೂಳು ಎತ್ತುವುದು, ಶುದ್ಧ ನೀರಿನ ಘಟಕ ಸ್ಥಾಪನೆ, ಮನೆ ನಿರ್ಮಾಣ, ಸುಜ್ಞಾನ ನಿಧಿ ಶಿಷ್ಯ ವೇತನ, ಜ್ಞಾನ ದೀಪ ಶಿಕ್ಷಕರ ಸೌಲಭ್ಯ, ಹಾಲು ಉತ್ಪಾದಕರ ಕಟ್ಟಡ ರಚನೆ ಹಾಗೂ ಐತಿಹಾಸಿಕ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಶ್ರೀಕ್ಷೇತ್ರದಿಂದ ಸಹಕಾರ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಬಸವರಾಜ ಬಮ್ಮಣಿ, ಚಂದ್ರಕಾಂತ ಧುತ್ತರ್ಗಿ, ಮಾಣಿಕರಾವ ಕನಕ, ಡಾ. ಅನಿಲ ಬಮ್ಮಣಿ ಸೇರಿ ಅನೇಕರಿದ್ದರು.

### ವಿಶ್ವ ಕಾರ್ಮಿಕರ ದಿನಾಚರಣೆ, ಕಾಯಕ ಮಾಸಾಚಾರಣೆ ಅಭಿಯಾನ ಕಾರ್ಯಕ್ರಮ

# ಗ್ರಾ.ಪಂ.ಸಭೆಗಳಲ್ಲಿ ಭಾಗವಹಿಸಿ, ಸರ್ಕಾರದ ಯೋಜನೆಗಳ ಬಗ್ಗೆ ತಿಳಿದುಕೊಳ್ಳಿ: ಇಒ ಸುಲ್ಪಿ ಸರ್




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:ಗ್ರಾಮ ಪಂಚಾಯತ್ ನಲ್ಲಿ ನಡೆಯುವ ಪ್ರತಿಯೊಂದು ಸಭೆಗಳಲ್ಲಿ ಕಾರ್ಮಿಕರು ಭಾಗವಹಿಸುವ ರೂಢಿ ಹಾಕಿ ಕೊಳ್ಳಬೇಕು. ಅಂ–ದಾಗ ಮಾತ್ರ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳ ಮಹತ್ವದ ಬಗ್ಗೆ ಅರಿವು ವಾಗುತ್ತದೆ ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಮೇಶ ಸುಲ್ಪಿ ಹೇಳಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಐಇಸಿ ಯೋಜನೆಯಡಿ ತಾಲ್ಲೂಕಿನ ಮುಡಬಿ ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಂಡ ವಿಶ್ವ ಕಾರ್ಮಿಕರ ದಿನಾಚರಣೆ ಮತ್ತು ಕಾಯಕ ಮಾಸಾಚಾರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಗ್ರಾಮ ಪಂಚಾಯತ್ ಇರುವುದು ಗ್ರಾಮಸ್ಥರಿಗಾಗಿ ಆದರೆ, ನೀವು ನಮಗು ಪಂಚಾಯಿತಿಗು ಯಾವುದೇ ಸಂಬಂಧ ಇಲ್ಲದಂತೆ ಮಾಡುತ್ತಿರೀ, ಇದರಿಂದ ನಿಮಗೆ ಸರ್ಕಾರದ ಯೋಜನೆಗಳ ಬಗ್ಗೆ ಗೊತ್ತಾಗುವುದಿಲ್ಲ. ಹೀಗಾಗಿ ಗ್ರಾಮ ಪಂಚಾಯತ್ ನಲ್ಲಿ ನಡೆಯುವ ವಾರ್ಡ್ ಸಭೆ, ಗ್ರಾಮ ಸಭೆ, ಸಾಮಾನ್ಯ ಸೇರಿದಂತೆ ಪ್ರತಿಯೊಂದು ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಮಾತ್ರ ನಿಮ್ಮ ಹಕ್ಕಿನ ಬಗ್ಗೆ ತಿಳಿಯಲು ಸಾಧ್ಯ ವಾಗುತ್ತದೆ ಎಂದು ಸಲಹೆ ನೀಡಿದರು.

ಬಸವ ಜಯಂತಿ ಅಂಗವಾಗಿ ಹೆಚ್ಚೆಚ್ಚು ಕೂಲಿ ಕಾರ್ಮಿಕರಿಗೆ ಕೆಲಸ ಕೊಡುವ ಉದ್ದೇಶ ದಿಂದ ಕಾಯಕ ಮಾಸಾಚಾರಣೆ ಅಭಿಯಾನಕ್ಕೆ ಇಗಾಗಲೇ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಚಾಲನೆ ನೀಡಲಾಗಿದೆ. ಆದ್ದ–ರಿಂದ ಪ್ರತಿಯೊಬ್ಬರು ಇದರ ಲಾಭ ಪಡೆದುಕೊಳ್ಳುವ ಮೂಲಕ ಅಭಿಯಾನ ಯಶಶ್ವಿಗೊಳಿಸಬೇಕು ಎಂದರು. ಗ್ರಾಮ ಪಂಚಾಯತ್ ಅಧ್ಯಕ್ಷೆ ಕಾವೇರಿ ಯಶ್ವಂತ ಕಾಂಬ್ಳೆ ಅಧ್ಯಕ್ಷತೆ ವಹಿಸಿದರು. ನಂತರ ಕೂಲಿಕಾರ್ಮಿಕರಿಗೆ ಸನ್ಮಾನಿಸುವ ಮೂಲಕ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ತಾ.ಪಂ.ಸ.ನಿ.ಅ.(ನರೇಗಾ) ಮಹ್ಮದ್ ಸಲೀಂ, ಉಪಾಧ್ಯಕ್ಷ ಅಮರನಾಥ ಮಾರುತಿ ಮಿರ್ಲೆ, ಸದಸ್ಯರಾದ ಸುಮೀತ ನಿಪ್ಪಾಣಿ, ಶಿವರಾಜ ಚಂದ್ರಂಪಳ್ಳಿ, ಪಿಂಟು ಗುಂಡೆಬಳ್ಳಿ, ಶ್ರೀಕಾಂತ ಮುಡಬಿವಾಡಿ, ಪ್ರಗತಿ ಪರ ರೈತ ಬಸವರಾಜ ಕಣಜಿ, ಪಿಡಿಒ ಮಹಾಂತೇಶ ಸಲಗರ, ಗ್ರಾ.ಪಂ.ಮಾಜಿ ಉಪಾಧ್ಯಕ್ಷ ಸದಾನಂದ ಪಾಟೀಲ್, ಟಿಸಿ ಅಮರನಾಥ ಪಾಟೀಲ್, ಐಇಸಿ ಸಂಯೋಜಕ ವೀರಾರೆಡ್ಡಿ, ಟಿಎ ಅವಿನಾಶ ಕಾಂಬ್ಳೆ, ಸಚಿನ ವೈರಾಗ್ಯೆ, ಕಾಯಕ ಮಿತ್ರ ಆಶಾ ಸೇರಿದಂತೆ ಗ್ರಾಮ ಪಂಚಾಯತ್ ಸಿಬ್ಬಂದಿ ಇದ್ದರು. ತಾಲ್ಲೂಕು ತರಬೇತಿ ಸಂಯೋಜಕ ಸಂಜು ವಾಗ್ಮೇರಾ ನಿರೂಪಿಸಿ, ವಂದಿಸಿದರು.

# ಯಶಸ್ವಿ ಜೀವನಕ್ಕೆ ಕಠಿಣ ಪರಿಶ್ರಮ ಅಗತ್ಯ : ಕುಲಕರ್ಣಿ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ವಿ ಜೀವನ ನಡೆಸಬೇಕಾದರೆ ಕಠಿಣ ಪರಿಶ್ರಮದಿಂದ ಕೆಲಸ ಕಾರ್ಯಗಳು ಕೈಗೊಳ್ಳಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ವೆಂಕಟೇಶ ಕುಲಕರ್ಣಿ ಹೇಳಿದರು.

ಹುಮನಾನಾದ್ ವಿಧಾನಸಭಾ ಕ್ಷೇತ್ರವ್ಯಾಪ್ತಿಯ ರಾಜೇಶ್ವರ ಗ್ರಾಮದ ಬ್ರಾಹ್ಮಣ ಸಮಾಜದ ಸಮುದಾಯ ಭವನದಲ್ಲಿ ನಡೆದ ಪರಶುರಾಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಐತಿಹಾಸಿಕ ಹಿನ್ನಲೆಯುಳ್ಳ ನಮ್ಮ ಭಾರತೀಯ ಸಂಸ್ಕೃತಿ ಪರಂಪರೆ ಉಳಿಸಿ ಬೆಳಸುವ ಕಾರ್ಯ ಇಂದಿನ ಯುವ ಪೀಳಿಗೆಗಳ ಮಾಡಬೇಕು. ತಮ್ಮ ಜೀವನದಲ್ಲಿ ಓದಿನ ಕಡೆ ಹೆಚ್ಚಿನ ಗಮನ ಹರಿಸಬೇಕು. ಜತೆಗೆ ಗುರು ಹಿರಿಯರನ್ನ ಗೌರವಿಸಬೇಕು ಎಂದು ತಿಳಿಸಿದರು.

ಈ ವೇಳೆ ಶ್ರೀಕಾಂತ ಕುಲಕರ್ಣಿ, ಅಪ್ಪಾರಾವ ಕುಲಕರ್ಣಿ, ಅಶೋಕ ಕುಲಕರ್ಣಿ, ಅಪ್ಪಾರಾವ್ ಕುಲಕರ್ಣಿ, ಪ್ರಭಾಕರರಾವ ಧನ್ನೂರಕರ್, ಮಿಲಿಂದ ಕುಲಕರ್ಣಿ ಇದ್ದರು.

# ಕಾಯಕ ಮಾಸಾಚರಣೆ ಅಭಿಯಾನಕ್ಕೆ ಎಡಿ ಹಣಮಂತರಾಯ ಕೌಟಗೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಕಾಯಕವೇ ಕೈಲಾಸ ಕೆಲಸ ಮಾಡಿ ಕೈಲಾಸ ಕಾಣಬೇಕು ಎಂದು ಬಸವಣ್ಣ ಹೇಳಿದ್ದರು, ಅವರ ಆಶಯದಂತೆ ನರೇಗಾ ಯೋಜನೆಯಡಿ ಕೆಲಸ ಮಾಡುವ ಅಕುಶಲ ಕೂಲಿಕಾರರು ಬಸವಣ್ಣನವರ ತತ್ವಗಳನ್ನು ಪಾಲನೆ ಮಾಡಿಕೊಂಡು ಹೋಗಬೇಕು ಎಂದು ಎಲ್ಲರಿಗೂ ಬಸವೇಶ್ವರ ಜಯಂತಿಯ ಶುಭಾಶಯಗಳನ್ನು ತಿಳಿಸಿದರು.

ಅರ್ಹ ಫಲಾನುಭವಿಗಳು ನರೇಗಾ ಯೋಜನೆಯಡಿ ವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳ ಸದ್ಬಳಕೆ ಮಾಡಿಕೊಳ್ಳಿ ಪ್ರತಿಯೊಬ್ಬರೂ ಕಡ್ಡಾಯವಾಗಿ ನೂರು ದಿವಸ ಕೆಲಸ ಮಾಡಬೇಕು. ನೀವು ಇದ್ದ ಊರಲ್ಲಿ ನಿಮಗೆ ನೂರು ದಿನ ಕೆಲಸ ಖಾತ್ರಿ ಇದೆ ಎಂದು ಸಹಾಯಕ ನಿರ್ದೇಶಕರಾದ ಹಣಮಂತರಾಯ ಕೌಟಗೆ ಹೇಳಿದರು.

ಕಮಲನಗರ ತಾಲೂಕಿನ ಡೋಣಗಾಂವ (ಎಂ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ರಂಡ್ಯಾಳ ಗ್ರಾಮದಲ್ಲಿ ನರೇಗಾ ಕಾಮಗಾರಿ ಸ್ಥಳದಲ್ಲಿ ಆಯೋಜನೆ ಮಾಡಿರುವ "ಕಾಯಕ ಮಾಸಾಚರಣೆ " ಅಭಿಯಾನಕ್ಕೆ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಏಪ್ರಿಲ್ 30 ರಿಂದ ಮೇ 31 ರ ವರೆಗೆ ತಾಲೂಕಿನ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಕಾಯಕ ಮಾಸಾಚರಣೆ ಅಭಿಯಾನ ಹಮ್ಮಿಕೊಳ್ಳುವುದರ ಮೂಲಕ ಕೂಲಿಕಾರಾರಿಗೆ ಕೆಲಸ ನೀಡಬೇಕು. ಎಲ್ಲರೂ ಇದರ ಲಾಭ ಪಡೆಯಿರಿ ಎಂದು ಹೇಳಿದರು.

ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಸದುಪಯೋಗ ಪಡೆದುಕೊಳ್ಳಬೇಕು. ಏಪ್ರೀಲ್ ತಿಂಗಳಿಂದ 349 ರೂ. ಇದ್ದ ಕೂಲಿ ಮೊತ್ತ 370 ರೂ. ಹೆಚ್ಚಿಸಲಾಗಿದೆ.

ಕೂಲಿಕಾರ್ಮಿಕರು ನಿರಂತರವಾಗಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಮಾಡಿ ಉತ್ತಮ ಬದುಕು ಕಟ್ಟಿಕೊಳ್ಳಬೇಕು. ಕೂಲಿಕಾರ್ಮಿಕರ ಮಕ್ಕಳ ಲಾಲನೆ ಪೋಷಣೆಗೆ ಇರುವ ಕೂಸಿನ ಮನೆ ಸದ್ಬಳಕೆ ಮಾಡಿಕೊಳ್ಳಿರಿ ಹಾಗೂ ಉಚಿತ ಸಹಾಯವಾಣಿ ಸಂಖ್ಯೆ 8277506000 ಬಗ್ಗೆ ಕೂಲಿ ಕಾರ್ಮಿಕರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪಿಡಿಓ ವಿಜಯಕುಮಾರ, ಸದಸ್ಯರಾದ ರಾಜಕುಮಾರ, ತಾಂತ್ರಿಕ ಸಂಯೋಜ–ಕರಾದ ಅಮರ ಬಿರಾದಾರ, ತಾಂತ್ರಿಕ ಸಹಾಯಕರಾದ ವಿನೋದ, ತಾಲೂಕು ಐ ಇ ಸಿ ಸಂಯೋಜಕರಾದ ಸವಿತಾ ನಾಗೇಶ, ಗ್ರಾಮ ಕಾಯಕ ಮಿತ್ರರಾದ ರೇಶ್ಮಾ, ಕಾರ್ಯದರ್ಶಿ ಆದಿತ್ಯ, ಡಿಇಓ ಮಖಬೂಲ್ ಹಾಗೂ ಗ್ರಾಮ ಪಂಚಾಯತ ಸಿಬ್ಬಂದಿಗಳು, ಕೂಲಿಕಾರರು ಮತ್ತು ಇತರರು ಇದ್ದರು.

# ಕೆಂಭಾವಿಯ ಹೇಮರೆಡ್ಡಿ ಶಾಲೆಗೆ ಕೀರ್ತಿ ತಂದ ಪ್ರಜ್ಞಾ

ಕೆಂಭಾವಿ:ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕೀರ್ತಿ ತಂದ ಪ್ರಜ್ಞಾ –ಹೆಮ್ಮೆಯ ಟಾಪರ್ ಕೆಂಭಾವಿಯ ಹೇಮರೆಡ್ಡಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪ್ರಜ್ಞಾ ಈ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ. ಪ್ರಜ್ಞಾ ತನ್ನ ಶ್ರಮ, ನಿಯಮಿತ ಅಧ್ಯಯನ ಮತ್ತು ಶಿಕ್ಷಕರ ಮಾರ್ಗದರ್ಶನದಿಂದ ಈ ಸಾಧನೆಯನ್ನು ಮಾಡಿದ್ದಾರೆ.

ಶಾಲೆಯ ಎಲ್ಲಾ ಶಿಕ್ಷಕರ ಬಳಗ ಪ್ರಜ್ಞಾಳ ಸಾಧನೆಗೆ ಅಭಿನಂದನೆ ಸಲ್ಲಿಸುತ್ತಿದ್ದು, ಇಂತಹ ಯೋಗ್ಯ ವಿದ್ಯಾರ್ಥಿನಿಯನ್ನು ಬೆಳೆಸಿದ ಹೆಮ್ಮೆ ನಮಗಿದೆ ಎಂದು ತಿಳಿಸಿದ್ದಾರೆ.



ಪ್ರಜ್ಞಾ ತಮ್ಮ ಯಶಸ್ಸಿಗೆ ಶಿಕ್ಷಕರ, ಪೋಷಕರ ಹಾಗೂ ಸ್ನೇಹಿತರ ಬೆಂಬಲವಿದೆ ಎಂದು ಧನ್ಯವಾದ ವ್ಯಕ್ತಪಡಿಸಿದ್ದಾರೆ. ಈ ಸಾಧನೆ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆ–ಯಾಗಿ ಶಾಲೆಯ ಗುಣಾತ್ಮಕ ಬೆಳವಣಿಗೆಗೆ ಉತ್ತೇಜನವಾಗಲಿ ಎಂಬ ಆಶಯವನ್ನು ಶಾಲೆಯ ಶಿಕ್ಷಕರು ವ್ಯಕ್ತಪಡಿಸಿದ್ದಾರೆ.

# ಶ್ರೀ ವಿದ್ಯಾಲಕ್ಷ್ಮಿ ಶಾಲೆಗೆ ಕೀರ್ತಿ ತಂದ ಸಂಜನಾ

ಮಲ್ಲಮ್ಮ ನುಡಿ ವಾರ್ತೆ

ಕೆಂಭಾವಿ ಪಟ್ಟಣದ ಹೆಮ್ಮೆಯಾದ ಶ್ರೀ ವಿದ್ಯಾ ಲಕ್ಷ್ಮಿ ಪ್ರೌಢಶಾಲೆಯ ವಿದ್ಯಾರ್ಥಿನಿ ಸಂಜನಾ ಸೋಮರೆಡ್ಡಿ ಇತ್ತೀಚೆಗೆ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625ಕ್ಕೆ 603 ಅಂಕಗಳನ್ನು ಗಳಿಸಿ ಅತ್ಯುನ್ನತ ಸಾಧನೆ ಮಾಡಿದ್ದಾಳೆ. ಈ ಸಾಧನೆಯ ಮೂಲಕ ಶಾಲೆಗೆ ಹಾಗೂ ಕೆಂಭಾವಿಗೆ ಕೀರ್ತಿ ತಂದಿದ್ದಾಳೆ. ಶಾಲೆಯ ಸಂಸ್ಥಾಪಕರು ಶ್ರೀ ರಾಮು ಹಾಗೂ ಶ್ರೀಮತಿ ನಾಗಮಣಿ ಅವರು ಸಂಜನಾಳ ಈ ಸಾಧನೆಯ ಬಗ್ಗೆ ಹರ್ಷ ವ್ಯಕ್ತಪಡಿಸಿ, ವಿದ್ಯಾರ್ಥಿನಿಗೆ ಹೃದಯಪೂರ್ವಕ ಶುಭಾಶಯಗಳನ್ನು ತಿಳಿಸಿದ್ದಾರೆ. ಜೊತೆಗೆ, ಈ ಬಾರಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಾಸಾದ ಎಲ್ಲಾ ವಿದ್ಯಾರ್ಥಿಗಳಿಗೆ ಅವರು ಶುಭಾಶಯಗಳನ್ನು ತಿಳಿಸಿದ್ದಾರೆ.



# ಮೇ 3ರಂದು ರಿಮ್ಸನ 13ನೇ ಘಟಿಕೋತ್ಸವ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ 02– ರಾಯಚೂರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 13ನೇ ಘಟಿಕೋತ್ಸವವು ಮೇ 3ರಂದು ಮಧ್ಯಾಹ್ನ 3 ಗಂಟೆಗೆ ರಿಮ್ಸನ ಆಟಿಟೋರಿಯಂ ಹಾಲನಲ್ಲಿ ಜರುಗಲಿದೆ. ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಅವರು ಉದ್ಘಾಟಿಸುವರು. ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಡಾ.ಬಿ.ಎಲ್.ಸುಜಾತ ರಾಠೋಡ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಗೌರವ ಅತಿಥಿಗಳಾಗಿ ಉಪಸ್ಥಿತರಿರುವರು. ರಾಯಚೂರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾದ ಡಾ.ರಮೇಶ ಬಿಎಚ್ ಅವರು ಅಧ್ಯಕ್ಷತೆ ವಹಿಸುವರು.

# ಶಿರೂರಿನಲ್ಲಿ ನಾಳೆ ಹೇಮರಡ್ಡಿ ಮಲ್ಲಮ್ಮ ಮಂದಿರ ಲೋಕಾರ್ಪಣೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.2– ತಾಲೂಕಿನ ಶಿರೂರ ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದ ಲೋಕಾರ್ಪಣೆ, ಸಮುದಾಯ ಭವನದ ಉದ್ಘಾಟನೆ, ವೇಮನ ಮಂದಿರ, ಕಲ್ಯಾಣ ಮಂಟಪ, ವೇಮನ ವಿದ್ಯಾಮಂದಿರದ ಶಾಲೆಯ ಅಡಿಗಲ್ಲು ಕಾರ್ಯಕ್ರಮ ಮೇ.4 ರಂದು ಜರುಗಲಿದೆ.

ರವಿವಾರ ಮುಂಜಾನೆ 10–30 ಗಂಟೆಗೆ ಸ್ಥಳೀಯ ಹೇಮರಡ್ಡಿ ಮಲ್ಲಮ್ಮ ವಿಕಾಸ ಸಂಸ್ಥೆಯ ವತಿಯಿಂದ ನಡೆಯುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಎರೆಹೊಸಳ್ಳಿಯ ರಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ವಹಿಸಲಿದ್ದು, ಗುಳೇದಗುಡ್ಡ ಮರಡಿಮಠದ ಕಾಡಸಿದ್ದೇಶ್ವರ ಶಿವಾಚಾರ್ಯರು ನೇತೃತ್ವ ವಹಿಸುವರು. ಹೇಮರಡ್ಡಿ ಮಲ್ಲಮ್ಮ ವಿಕಾಸ ಸಂಸ್ಥೆಯ ಅಧ್ಯಕ್ಷ ರವಿಕುಮಾರ ಗಿರಿಜಾ ಅಧ್ಯಕ್ಷತೆ ವಹಿಸುವರು.



ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾರಡ್ಡಿ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ಲೋಕಾರ್ಪಣೆಗೊಳಿಸಲಿದ್ದು, ಕಾನೂನು ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ವೇಮನ ಮಂದಿರ ಮತ್ತು ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪೂರ ಗುಲಗಂಜಿ ಕಲ್ಯಾಣ ಮಂಟಪದ ಅಡಿಗಲ್ಲು ನೆರವೇರಿಸುವರು. ಮಾಜಿ ಸಚಿವ ಎಸ್.ಆರ್.ಪಾಟೀಲ ವೇಮನ ವಿದ್ಯಾಮಂದಿರದ ಆಂಗ್ಲ ಮಾಧ್ಯಮ ಶಾಲೆಯ ಅಡಿಗಲ್ಲು ನೆರವೇರಿಸಲಿದ್ದು, ಶಾಸಕ ಎಚ್.ವಾಯ್.ಮೇಟಿ ಹೇಮರಡ್ಡಿ ಮಲ್ಲಮ್ಮ ಸಮುದಾಯ ಭವನ ಉದ್ಘಾಟಿಸುವರು. ಸಭಾ ಕಾರ್ಯಕ್ರಮವನ್ನು ಬೀಳಗಿ ಶಾಸಕ ಜೆ.ಟಿ.ಪಾಟೀಲ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎನ್.ಎಚ್.ಶಿವಶಂಕರರೆಡ್ಡಿ, ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಎನ್.ಎಚ್.ಕೋನರಡ್ಡಿ, ವಿಪ ಸದಸ್ಯ ಪಿ.ಎಚ್.ಪೂಜಾರ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ ಸರನಾಯಕ, ಮಾಜಿ ಶಾಸಕರಾದ ಅಮರೇಗೌಡ ಪಾಟೀಲ, ದೊಡ್ಡನಗೌಡ ಪಾಟೀಲ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ರಡ್ಡಿ ಜನಸಂಘದ ಅಧ್ಯಕ್ಷ ಎಸ್.ಜಯರಾಮರೆಡ್ಡಿ, ಉಪಾಧ್ಯಕ್ಷ ವೆಂಕಟಶಿವಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಎನ್.ಶೇಖರರೆಡ್ಡಿ, ಕೆ.ಸುರೇಶರೆಡ್ಡಿ, ಶಿವಾನಂದ ಮೆಳ್ಳಿಗೇರಿ, ದೇವೇಂದ್ರಗೌಡ ಮೂಗನಗೌಡ್ರ ಸೇರಿದಂತೆ ರಡ್ಡಿ ಸಮಾಜದ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy. Office Ph. No: +91 9449732000.